ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

47

ಮೇ 7 ಗುರುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 21 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


₹4

ಒಡಿಸ್ಸಾ, ಬಿಹಾರ, ಪಶ್ಚಿಮ ಬಂಗಾಲ ಬಳಿಕ

ಕರ್ನಾಟಕದ ಮೇಲೆ ಆರ್‌ಎಸ್‌ಎಸ್ ಕಣ್ಣು!

■ ಬೆಂಗಳೂರು ಹೊರ ವಲಯದಲ್ಲಿ ಸರ ಸಂಘ ಚಾಲಕ ಮೋಹನ್ ಭಾಗವತ್ ನೇತೃತ್ವದಲ್ಲಿ ತಂತ್ರಗಾರಿಕೆ ■ ಬಿಜೆಪಿ ನಾಯಕರಿಗಿಲ್ಲ ಅವಕಾಶ ■ ಬಿಜೆಪಿ ಮೇಲ್ವರ್ಗದ ಪರ ಎಂಬ ಹಣೆಪಟ್ಟಿ ಕಿತ್ತೊಗೆಯಲು ತೀರ್ಮಾನ ■ ಹಿಂದುಳಿದ, ದಲಿತ ಸಮುದಾಯದಲ್ಲಿ ನಾಯಕತ್ವ ರೂಪಿಸಲು ಆದ್ಯತೆ ■ ಅಂತಿಮವಾಗಿ ಪ್ರಬಲ ಬಿಜೆಪಿ ವೋಟ್ ಬ್ಯಾಂಕ್ ಸೃಷ್ಟಿಸಲು ನಿರ್ಧಾರ

ಬೆಂಗಳೂರು, ಮೇ 6(ಕೆಎಂಶಿ)– ಒಡಿಸ್ಸಾ, ಬಿಹಾರ, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಕೇಸರಿ ಬಾವುಟ ಹಾರಿಸಲು ಕಾರಣೀಭೂತವಾದ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್), ಇದೀಗ ಕರ್ನಾಟಕದತ್ತ ಮುಖ ಮಾಡಿದೆ.


ಮೋಹನ್ ಭಾಗವತ್

ರಾಜ್ಯ ವಿಧಾನಸಭೆಗೆ 2028ರಲ್ಲಿ ಚುನಾವಣೆ ನಡೆಯಲಿದ್ದು, ಈಗಿನಿಂದಲೇ ಚುನಾವಣಾ ಪೂರ್ವ ಸಿದ್ಧತೆಯನ್ನು ಆರ್‌ಎಸ್‌ಎಸ್ ಆರಂಭಿಸಿದೆ. ಕಳೆದ ಐದು ದಿನಗಳಿಂದ ಬೆಂಗಳೂರಿನಲ್ಲಿ ಬೀಡು ಬಿಟ್ಟಿರುವ ಆರ್‌ಎಸ್‌ಎಸ್‌ನ ಸರ ಸಂಘ ಚಾಲಕ ಮೋಹನ್ ಭಾಗವತ್ ಅವರು, ಕರ್ನಾಟಕ ವಿಧಾನಸಭೆ ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು ಸಂಘ ಪರಿವಾರದ ನಾಯಕರೊಂದಿಗೆ ಸರಣಿ ಸಭೆಗಳನ್ನು ನಡೆಸಿದ್ದಾರೆ.

ಬಿಜೆಪಿಗರಿಗಿಲ್ಲ ಆಹ್ವಾನ: ಬೆಂಗಳೂರು ಹೊರ ವಲಯದ ಚನ್ನೇನಹಳ್ಳಿಯಲ್ಲಿ ನಡೆಯುತ್ತಿರುವ ಈ ಸಭೆಗೆ ರಾಜ್ಯದ ಯಾವುದೇ ಬಿಜೆಪಿ ನಾಯಕರಿಗೂ ಆಹ್ವಾನ ನೀಡಿಲ್ಲ. ಬದಲಾಗಿ ಪರಿವಾರದ ಎಲ್ಲಾ ಪ್ರಮುಖ ನಾಯಕರು ಪಾಲ್ಗೊಂಡಿರುವ ಸಭೆಯಲ್ಲಿ ಸಂಘದ ಚಟುವಟಿಕೆಗಳ ವಿಸ್ತರಣೆಯ ಜೊತೆಗೆ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಗೆಲುವಿಗೆ ಮಾಡಬೇಕಾದ ತಂತ್ರಗಾರಿಕೆ ಕುರಿತು ಚರ್ಚೆ ನಡೆಯುತ್ತಿದೆ.

ಕೇವಲ ಒಂದು ಚುನಾವಣೆ ಗೆಲ್ಲುವುದಕ್ಕಿಂತ ತಮ್ಮ ಗಮನ ಬಿಜೆಪಿಗೆ ದೊಡ್ಡ ಪ್ರಮಾಣದ ಮತ ಬ್ಯಾಂಕ್ ಸೃಷ್ಟಿಸುವ ಕಡೆ ಇರಬೇಕು ಎಂದು ಸಭೆಯಲ್ಲಿ ತಿಳಿಸಿರುವ ನಾಯಕರು, ಮತ ಬ್ಯಾಂಕ್ ಗಟ್ಟಿಯಾದರೆ ಯಾರು ಬೇಕಾದರೂ ಚುನಾವಣೆ ಗೆಲ್ಲಬಹುದು. ಈ ನಿಟ್ಟಿನಲ್ಲಿ ಸ್ವಯಂ ಸೇವಕರು ಕೆಲಸ ಮಾಡಬೇಕು ಎಂದು ಮಾರ್ಗದರ್ಶನ ಮಾಡಿದ್ದಾರೆ.

ಮೊದಲಿಗೆ ಬಿಜೆಪಿ ಮೇಲ್ವರ್ಗದ ಪರವಾದ ಪಕ್ಷ ಎಂಬ ಹಣೆಪಟ್ಟಿ ಕಳೆದುಕೊಳ್ಳಬೇಕು. ಶೋಷಿತರು, ದಲಿತರಿಗೆ ಬಿಜೆಪಿ ಮತ್ತು ಸಂಘ ಪರಿವಾರದಲ್ಲಿ ಮಾನ್ಯತೆ ಇಲ್ಲ ಎಂದು ಪ್ರಚಾರ ಮಾಡಲಾಗುತ್ತಿದೆ.

ಇದನ್ನು ಸುಳ್ಳು ಎಂದು ಸಾಬೀತುಪಡಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಈ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಮೀಸಲಿರುವ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸುವಂತಾಗಬೇಕು ಎಂದು ಹೇಳಿದ್ದಾರೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಅತೀ ಹೆಚ್ಚಿನ ಪ್ರಮಾಣದಲ್ಲಿರುವ ಹಿಂದುಳಿದ ವರ್ಗಗಳಂತೂ ಅತ್ತ ಮೀಸಲಾತಿಯು ಇಲ್ಲ, ಇತ್ತ ಸ್ವಂತ ಬಲದ ಮೇಲೆ ಚುನಾವಣೆ ಸ್ಪರ್ಧಿಸಿ ಆಯ್ಕೆಯಾಗುವ ಪರಿಸ್ಥಿತಿಯು ಇಲ್ಲ. ಹೀಗಾಗಿ ಈ ಸಮುದಾಯಗಳಿಗೆ ಸಂಘ ಪರಿವಾರ ಧ್ವನಿಯಾಗಬೇಕು.



ದಲಿತರು, ಹಿಂದುಳಿದವರತ್ತ ಆದ್ಯತೆ: ದಲಿತ ಮತ್ತು ಹಿಂದುಳಿದ ವರ್ಗಗಳನ್ನು ಪ್ರಮುಖವಾಗಿಟ್ಟುಕೊಂಡು ಕರ್ನಾಟಕದಲ್ಲಿ ಸಿದ್ದರಾಮಯ್ಯ ಮತ್ತು ಡಿಕೆ ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಹೊಸ ಪ್ರಯೋಗ ಮಾಡಿ ಯಶಸ್ವಿಯಾಗಿದ್ದಾರೆ.

ಬಿಜೆಪಿ ಮತ್ತು ಜೆಡಿಎಸ್ ರಾಜ್ಯದ ಪ್ರಭಾವಿ ಸಮುದಾಯಗಳಾದ ವೀರಶೈವ ಮತ್ತು ಒಕ್ಕಲಿಗ ಮತ ಬ್ಯಾಂಕ್‌ನೊಂದಿಗೆ ನಡೆಸಿದ ರಾಜಕಾರಣಕ್ಕೆ ಅಹಿಂದ ರಾಜಕಾರಣದ ■ 6ನೇ ಪುಟಕ್ಕೆ

ಮೈಸೂರಿಂದ ಪ್ರಯಾಣ ಬೆಳೆಸಿದ ರಾಜ್ಯ ರಾಣಿ ಎಕ್ಸ್‌ಪ್ರೆಸ್ ರೈಲಿನಲ್ಲಿ ದುಷ್ಕರ್ಮಿಗಳ ಕಾದಾಟ

ಜಗಳ ಬಿಡಿಸಲು ಬಂದ ಇಬ್ಬರಿಗೆ ಇರಿತ; ಪ್ರಯಾಣಿಕರು, ಗ್ರಾಮಸ್ಥರಿಂದ ಧರ್ಮದೇಟು

● ರೈಲ್ವೆ ಗೇಟ್ ಮ್ಯಾನ್‌ಗೂ ಇರಿತ ● ಸದ್ಯ ಪೊಲೀಸರ ವಶದಲ್ಲಿ ಪುಂಡರು ● ಮದ್ದೂರು ಬಳಿ ಘಟನೆ; ರೈಲು ಪ್ರಯಾಣಿಕರಲ್ಲಿ ಆತಂಕ

ಮದ್ದೂರು, ಮೇ 6– ಈಗ ರೈಲು ಪ್ರಯಾಣವೂ ಸುರಕ್ಷಿತವಲ್ಲ ಎಂಬಂತಾಗಿದೆ. ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಗುಂಪೊಂದು ಕಾದಾಟಕ್ಕಿಳಿದಿದ್ದು, ಪ್ರಯಾಣಿಕರಲ್ಲಿ ಆತಂಕದ ವಾತಾವರಣ ಸೃಷ್ಟಿ ಮಾಡಿದೆ. ಇಷ್ಟೇ ಅಲ್ಲ, ತಮ್ಮ ನಡುವಿನ ಜಗಳ ಬಿಡಿಸಲು ಬಂದವರಿಬ್ಬರನ್ನು ಚಾಕುವಿನಿಂದ ಇರಿದು ಗಾಯಗೊಳಿಸಿದೆ. ಕೊನೆಗೆ ಪರಾರಿಯಾಗಲು ಯತ್ನಿಸಿದ ದುಷ್ಕರ್ಮಿಗಳನ್ನು ಗ್ರಾಮಸ್ಥರು ಮತ್ತು ಪ್ರಯಾಣಿಕರು ಹಿಡಿದು ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಈ ಘಟನೆ ಮದ್ದೂರು ಬಳಿಯ ಹೆಚ್‌ಕೆವಿ ನಗರ ಮತ್ತು ಚೆನ್ನೇಗೌಡನ ಕೊಪ್ಪಲಿನ ನಡುವೆ ಸಂಭವಿಸಿದೆ. ಇರಿತದಿಂದ ಗಾಯಗೊಂಡಿರುವವರನ್ನು ಶಿವಕುಮಾರ್ ಮತ್ತು ರೈಲ್ವೆ ■ 6ನೇ ಪುಟಕ್ಕೆ



ಇರಿತಕ್ಕೊಳಗಾದ ರೈಲ್ವೆ ಗೇಟ್‌ಮ್ಯಾನ್ ಕುಮಾರ್. ಬಲಚಿತ್ರದಲ್ಲಿ ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ದುಷ್ಕರ್ಮಿಗಳನ್ನು ಕಾಣಬಹುದು.

ಆಸ್ತಿ ವಿಷಯವಾಗಿ ದಾಯಾದಿ ಕಲಹ, ಹಳೇ ದ್ವೇಷದ ಹಿನ್ನೆಲೆ

ಮಾರಕಾಸ್ತ್ರದಿಂದ ಕೊಚ್ಚಿ ಸಹೋದರರ ಬರ್ಬರ ಹತ್ಯೆ

ಕೆ.ಆರ್.ನಗರ, ಮೇ 6– ಆಸ್ತಿ ವಿಷಯವಾಗಿ ದಾಯಾದಿ ಕಲಹ, ಹಳೇ ದ್ವೇಷದ ಹಿನ್ನೆಲೆಯಲ್ಲಿ ಸಹೋದರರನ್ನು ಮಾರಕಾಸ್ತ್ರಗಳಿಂದ ಬರ್ಬರವಾಗಿ ಕೊಚ್ಚಿ ಹತ್ಯೆಗೈದಿರುವ ಘಟನೆ ತಾಲೂಕಿನ ಅರ್ಜುನಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ದಿ.ರಮೇಶ್ ರಾಜು ಅವರ 2ನೇ ಹೆಂಡತಿ ಪುತ್ರರಾದ ಡಿಸ್ಕವರಿ ರಾಘು(35), ಹರ್ಷವರ್ಧನ್ (30), ಹತ್ಯೆಗೀಡಾದ ಸಹೋದರರಾಗಿದ್ದು, ಮೊದಲ ಹೆಂಡತಿ ಪುತ್ರ ರೋಹಿತ್ ಹತ್ಯೆಗೈದ ಆರೋಪಿ.


ಘಟನಾ ಸ್ಥಳಕ್ಕೆ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಭೇಟಿ ನೀಡಿ, ಪರಿಶೀಲನೆ ನಡೆಸಿ ಮಾಹಿತಿ ಪಡೆದರು.

ವಿವರ: ದಿ.ರಮೇಶ್ ರಾಜು ಅವರಿಗೆ ಇಬ್ಬರು ಹೆಂಡತಿಯರಿದ್ದು, ಮೊದಲನೆ ■ 6ನೇ ಪುಟಕ್ಕೆ

ಶ್ರೀರಂಗಪಟ್ಟಣದಲ್ಲಿ ಮೈಸೂರಿನ ರೌಡಿಶೀಟರ್ ಭೀಕರ ಹತ್ಯೆ

ಕೈ, ಕಾಲು, ತಲೆ, ಹೊಟ್ಟೆ ಭಾಗಗಳಲ್ಲಿ ಕೊಚ್ಚಿ ಬರ್ಬರ ಕೊಲೆ

● ಬೇರೆಲ್ಲೋ ಕೊಂದು ದೇಹ ತಂದು ಬಿಸಾಡಿರುವ ಶಂಕೆ
● ಸಹಚರರಿಂದಲೇ ಕೃತ್ಯ: ಪೊಲೀಸರಿಗೆ ಅನುಮಾನ

ಶ್ರೀರಂಗಪಟ್ಟಣ, ಮೇ 6– ತಾಲೂಕಿನ ಮೈಸೂರು–ಬೆಂಗಳೂರು ಹೆದ್ದಾರಿ ಹಳ್ಳಿಮನೆ ಹೋಟೆಲ್ ಹಿಂಬಾಗ ಮೈಸೂರಿನ ರೌಡಿಶೀಟರ್ ಮೃತದೇಹ ಪತ್ತೆಯಾಗಿದ್ದು, ಈತನನ್ನು ಭೀಕರವಾಗಿ ಕೊಚ್ಚಿ ಕೊಲೆ ಮಾಡಲಾಗಿದೆ.


ಮಹಮದ್ ಸಾಹಿಲ್ ಆಲಮ್

ಮೈಸೂರಿನ ಮಂಡಿ ಮೊಹಲ್ಲಾದ ನಿವಾಸಿ ಮಹಮದ್ ಸಾಹಿಲ್ ಆಲಮ್ ಆಲಿಯಾಸ್ ಚುವ್ವಾ (38) ಕೊಲೆಯಾದ ರೌಡಿಶೀಟರ್. ಈತ ಕಳೆದ 4–5 ವರ್ಷಗಳಿಂದ ಪೊಲೀಸರ ಕೈಗೆ ಸಿಗದೆ ತಲೆ ಮರೆಸಿಕೊಂಡು ಓಡಾಡುತ್ತಿದ್ದ. ಬೆಂಗಳೂರಲ್ಲಿ ವಾಸವಾಗಿದ್ದ ಈತ ಆಗಾಗ ಮೈಸೂರು, ಮಂಡ್ಯ, ಶ್ರೀರಂಗಪಟ್ಟಣಕ್ಕೆ ಬಂದು ಹೋಗುತ್ತಿದ್ದ ನಂತೆ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಯ ವಿವರ: ಮಂಗಳವಾರ ತಡರಾತ್ರಿ ಬೇರೆಲ್ಲೋ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿ, ಮೈಸೂರು– ■ 6ನೇ ಪುಟಕ್ಕೆ

ಮೈಸೂರಲ್ಲಿ ಅದ್ದೂರಿ ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ಆಚರಣೆ

● ನಾಡಿನ ಸಂಪತ್ತು ಎಲ್ಲರಿಗೂ ಸಮಾನ ಹಂಚಿಕೆಯಾಗಬೇಕು: ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದನೆ
● ಸಿದ್ದರಾಮೇಶ್ವರರು ಕೇವಲ ಶರಣರಲ್ಲ; ಕಾಯಕ ಯೋಗಿಗಳು: ಭೋವಿ ಗುರುಪೀಠದ ಶ್ರೀಗಳು

ಮೈಸೂರು, ಮೇ 6(ಎಂಕೆ)– ಸಂಪತ್ತು ಮತ್ತು ಆಡಳಿತ ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಬೇಕು ಎಂಬ ಶಿವಯೋಗಿ ಶ್ರೀ ಸಿದ್ದರಾಮೇಶ್ವರ ತತ್ವ–ಆದರ್ಶಗಳಿಗೆ ಅನುಗುಣವಾಗಿ ಎಲ್ಲಾ ಸಮುದಾಯಗಳಿಗೂ ಸಾಮಾಜಿಕ ನ್ಯಾಯ ಒದಗಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತ್ಯೋತ್ಸವ ಸಮಿತಿ ವತಿಯಿಂದ ಬುಧವಾರ ಆಯೋಜಿಸಿದ್ದ 'ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ' ಉದ್ಘಾಟಿಸಿ ಮಾತನಾಡಿದ ಅವರು, ಕಾಯಕ ಮಾಡದೆ ಯಾರು ಬದುಕಬಾರದು. ಉತ್ಪಾದನಾ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬರು ಭಾಗವಹಿಸಬೇಕು. ಮಾಡಿದ ಸಂಪಾದನೆಯನ್ನು ಸಮಾನವಾಗಿ ಹಂಚಿಕೊಳ್ಳಬೇಕು ಎಂಬುದನ್ನೇ ಸಿದ್ದರಾಮೇಶ್ವರರು ಹೇಳಿದ್ದು. ಅದರಂತೆಯೇ ನಮ್ಮ ಸರ್ಕಾರ ನಡೆದುಕೊಳ್ಳುತ್ತಿದೆ ಎಂದು ಪ್ರತಿಪಾದಿಸಿದರು.

ಎಲ್ಲಿಯವರೆಗೆ ಸಮ–ಸಮಾಜ ನಿರ್ಮಾಣವಾಗುವುದಿಲ್ಲವೋ, ಅಲ್ಲಿಯವರೆಗೆ ತಳ ಹಂತದಲ್ಲಿರುವ ಸಮುದಾಯಗಳ ಬೇಡಿಕೆಗಳು ಇದ್ದೇ ಇರುತ್ತವೆ. ಎಲ್ಲರಿಗೂ ಸಮಾನ ಅವಕಾಶಗಳು ಸಿಗಬೇಕು. ನಾಡಿನ ಸಂಪತ್ತು ಮತ್ತು ಅಧಿಕಾರ ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಬೇಕು. ಇದಕ್ಕೆ ಸರ್ಕಾರ ಬದ್ಧವಾಗಿದೆ. ಸರ್ವರಿಗೂ ಸಮಪಾಲು–ಸಮಬಾಳು ದೊರೆಯುವಂತಾಗಬೇಕು ಎಂಬ ಉದ್ದೇಶದಿಂದ ರಾಜ್ಯದ 7 ಕೋಟಿ ಜನರಿಗೂ ಅನ್ವಯವಾಗುವಂತೆ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ಇದರಲ್ಲಿ ಯಾವುದೇ ತಾರತಮ್ಯವಿಲ್ಲ ಎಂದು ಹೇಳಿದರು. ಜಾತಿ ವ್ಯವಸ್ಥೆ ಅಷ್ಟು ಸುಲಭವಾಗಿ ಹೋಗುವುದಿಲ್ಲ. ಬಸವಣ್ಣನವರು ■ 6ನೇ ಪುಟಕ್ಕೆ


ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತ್ಯೋತ್ಸವ ಸಮಿತಿ ವತಿಯಿಂದ 'ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ' ಆಚರಿಸಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಪುಷ್ಪಾರ್ಚನೆ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಸಚಿವರಾದ ಶಿವರಾಜ್ ತಂಗಡಗಿ, ಕೆ.ವೆಂಕಟೇಶ್, ಶಾಸಕರಾದ ಕೆ.ಹರೀಶ್‌ಗೌಡ, ಅನಿಲ್ ಚಿಕ್ಕಮಾದು, ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ ಮತ್ತಿತರರಿದ್ದರು.

ಇರು ಅಂದ್ರೆ ಇರ್ತೇನೆ... ಬಿಡು ಅಂದ್ರೆ ಬಿಡ್ತೇನೆ...

ಮುಖ್ಯಮಂತ್ರಿ ಬದಲಾವಣೆ ಕುರಿತ ಪ್ರಶ್ನೆಗೆ ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯೆ

ಮೈಸೂರು, ಮೇ 6(ಎಂಕೆ)– ಇರು ಅಂದ್ರೆ ಇರ್ತೀನಿ... ಬಿಡು ಅಂದ್ರೆ ಬಿಡ್ತೀನಿ... ಹೈಕಮಾಂಡ್ ನಿರ್ಧಾರವೇ ಫೈನಲ್ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚರಿಸಿದರು.

ಮೈಸೂರಿಗೆ ಬುಧವಾರ ಆಗಮಿಸಿದ ವೇಳೆ ಮುಖ್ಯಮಂತ್ರಿ ಬದಲಾವಣೆ ಕುರಿತು ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಹೈಕಮಾಂಡ್ ಹೇಳಿದರೆ ಐದು ವರ್ಷ ಇರುತ್ತೇನೆ. ನಾನು ಹೈಕಮಾಂಡ್ ಮಾತನ್ನು ಮಾತ್ರ ಕೇಳುವುದು. ನೀವು ಎಷ್ಟು ಬಾರಿ ಈ ಪ್ರಶ್ನೆ ಕೇಳಿದರೂ ನನ್ನ ಉತ್ತರ ಹೈಕಮಾಂಡ್ ಅಷ್ಟೇ ಎಂದು ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ 5 ವರ್ಷವೂ ಕಾಂಗ್ರೆಸ್ ಸರ್ಕಾರ ಇರುತ್ತದೆ. ನನ್ನನ್ನು ಇರಿ ಎಂದರೆ ಇರುತ್ತೇನೆ. ಎಲ್ಲಾ ತೀರ್ಮಾನ ಮಾಡುವುದು ಹೈಕಮಾಂಡ್. ಬೇರೆ ಯಾರ್ ಯಾರೋ ಮಾತನಾಡಿದರೆ ಅದು ಅವರ ವೈಯಕ್ತಿಕ ಅಭಿಪ್ರಾಯ ಮಾತ್ರ ಎಂದರು. ದೆಹಲಿ ಭೇಟಿ ಕುರಿತು ಮಾತನಾಡಿದ ಅವರು, ರಾಹುಲ್ ಗಾಂಧಿ ನನ್ನನ್ನು ಇಲ್ಲಿಯ ವರೆಗೆ ದೆಹಲಿಗೆ ಕರೆದಿಲ್ಲ. ನಾನು ಕೂಡ ರಾಹುಲ್ ಗಾಂಧಿಯ ಅಪಾಯಿಂಟ್‌ಮೆಂಟ್ ಕೇಳಿಲ್ಲ. ರಾಹುಲ್ ಗಾಂಧಿ ತಾವಾಗಿಯೇ ನನ್ನನ್ನು ಕರೆದರೆ ನಾನು ಹೋಗುತ್ತೇನೆ. ಅಪಾಯಿಂಟ್ಮೆಂಟ್ ಫಿಕ್ಸ್ ಆದ ಮೇಲೆ ಸಂಪುಟ ಪುನರ್ ರಚನೆಯಾ... ಸಂಪುಟ ವಿಸ್ತರಣೆಯಾ... ಯಾವ ವಿಷಯದ ಚರ್ಚೆ ಎಂಬುದು ಆವಾಗ ಗೊತ್ತಾಗಲಿದೆ. ಅವರು ನನ್ನನ್ನು ಕರೆದೇ ಇಲ್ಲ ಎಂದ ಮೇಲೆ ಸಭೆಯ ಅಜೆಂಡಾ ಹೇಗೆ ಫಿಕ್ಸ್ ಆಗುತ್ತದೆ. ನಾನು ಅವರು ಕರೆದರೆ ಮಾತ್ರ ಹೋಗುವುದು. ಸದ್ಯಕ್ಕಂತೂ ದೆಹಲಿಯ ಪ್ರವಾಸ ಇಲ್ಲ ಎಂದು ತಿಳಿಸಿದರು.

ಅಂಚೆ ಮತಪತ್ರ ತಿದ್ದಿದ್ದಾರೆ: ಶೃಂಗೇರಿ ಕ್ಷೇತ್ರದ ಚುನಾವಣೆ ಫಲಿತಾಂಶ ವಿವಾದ ವಿಚಾರ ಕುರಿತು ಪ್ರತಿಕ್ರಿಯಿಸಿದ ಸಿಎಂ, ಅಂಚೆ ಮತಗಳನ್ನು ಖುದ್ದು ಜೀವರಾಜ್ ಮತ್ತು ಚುನಾವಣಾ ಸಿಬ್ಬಂದಿ ಸೇರಿಕೊಂಡು ತಿದ್ದಿದ್ದಾರೆ. ಅವತ್ತು ಫಲಿತಾಂಶ ಬರುವಾಗ ಬಿಜೆಪಿ ಸರ್ಕಾರ ಇತ್ತು. ಅವರ ನಿರ್ದೇಶನದಂತೆ ಚುನಾವಣಾ ಸಿಬ್ಬಂದಿ ಜೀವರಾಜ್ ಜೊತೆ ಸೇರಿಕೊಂಡು ಅಂಚೆ ಮತಗಳನ್ನು ತಿದ್ದಿದ್ದಾರೆ. ಫಲಿತಾಂಶದ ದಿನ ವ್ಯಾಲಿಡ್ ಆಗಿದ್ದ ಮತ ಪತ್ರದಲ್ಲಿ ಇಲ್ಲದ ಗೆರೆ ಈಗ ಹೇಗೆ ಬಂತು. ಈ ವಿಚಾರದಲ್ಲಿ ನಾವು ಕೋರ್ಟ್ ಮೊರೆ ಹೋಗುತ್ತೇವೆ ಎಂದರು.

ಮೈಸೂರು ಮಿತ್ರ ಗುರುವಾರ 7 ಮೇ 2026

ಮೇ 9 'ಮೈಸೂರು ಸಿತಾರ್ ಸಂಭ್ರಮ'

■ ಸಿಎಂ ಸಿದ್ದರಾಮಯ್ಯ ಅವರಿಂದ ಉದ್ಘಾಟನೆ



ಮೈಸೂರು, ಮೇ 6(ಜಿಎ)–ಮೈಸೂರಿನ ಕಲಾ ಸಂವಹನ ಟ್ರಸ್ಟ್ ವತಿಯಿಂದ ಮೇ 9ರಂದು ಸಂಜೆ 5 ಗಂಟೆಗೆ ಕಲಾ ಮಂದಿರದಲ್ಲಿ 'ಮೈಸೂರು ಸಿತಾರ್ ಸಂಭ್ರಮ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಟ್ರಸ್ಟ್‌ನ ಪದಾಧಿಕಾರಿ ಅರ್ಚನಾ ನಾಯಕ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂತಾರಾಷ್ಟ್ರೀಯ ಖ್ಯಾತಿಯ ಉಸ್ತಾದ್ ಡಾ.ಮೊಹಸಿನ್ ಖಾನ್ ಅವರು ನಗರದಲ್ಲಿ ಸಿತಾರ್ ಕಲಿಕೆ ತರ ಬೇತಿ ಆರಂಭಿಸಿ ಒಂದು ವರ್ಷ ತುಂಬಿದ ನೆನಪಿನಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆ ವಹಿಸುವರು. ಚಿನ್ಮಯ ಮಿಷನ್‌ನ ಸ್ವಾಮಿ ಕೃತಾತ್ಮಾನಂದ ಸಾನ್ನಿಧ್ಯ ವಹಿಸುವರು.

ಖ್ಯಾತ ಗಾಯಕಿ ಹೆಚ್.ಆರ್. ಲೀಲಾವತಿ, ಉದ್ಯಮಿ ಡಾ.ಎಂ.ಜಗನ್ನಾಥ ಶೆಣೈ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಹಿಂದೂಸ್ತಾನಿ ಗಾಯಕ ಪಂಡಿತ್ ವೆಂಕಟೇಶ್ ಕುಮಾರ್ ಗಾಯನ, ಸಿತಾರ್ ಸಮೂಹ ವಾದನವಾದ ಸಿತಾರ್ ಸಿಂಚನ, ಉಸ್ತಾದ್ ಮೊಹಸಿನ್ ಖಾನ್‌ರಿಂದ ಸಿತಾರ್ ವಾದನ, ಸಾಥ್ ಸಂಗೀತ್ ಕಾರ್ಯಕ್ರಮ ಜರುಗಲಿವೆ. 50 ಮಂದಿ ಏಕಕಾಲದಲ್ಲಿ ಸಿತಾರ್ ನುಡಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಕಾರ್ಯದರ್ಶಿ ಉಸ್ತಾದ್ ಡಾ.ಮೊಹಸಿನ್ ಖಾನ್, ಡಾ.ಶಭಾನ ಮೈಸೂರು, ಡಾ.ಸಿ.ಎಸ್.ಅರುಣ್ ಉಪಸ್ಥಿತರಿದ್ದರು.

ಫ್ಲೈಓವರ್, ರಸ್ತೆ ಅಭಿವೃದ್ಧಿಗೆ ತೆರವುಗೊಳಿಸಲುದ್ದೇಶಿಸಿರುವ ಮರಗಳ ಮಾಹಿತಿ ಪಡೆದ ಅರಣ್ಯ ಸಚಿವರು!

ಸಾಧ್ಯವಾದಷ್ಟು ಮರಗಳ ಸುರಕ್ಷತೆಗೆ ಆದ್ಯತೆ ನೀಡಿ: ಅಧಿಕಾರಿಗಳಿಗೆ ಈಶ್ವರ್‌ಖಂಡ್ರೆ ಕಟ್ಟುನಿಟ್ಟಿನ ಸೂಚನೆ



ಮೈಸೂರಿನ ಮಣಿಪಾಲ್ ಆಸ್ಪತ್ರೆಯ ಜಂಕ್ಷನ್ ಬಳಿ ಫ್ಲೈಓವರ್ ನಿರ್ಮಾಣಕ್ಕೆ ತೆರವುಗೊಳಿಸಲು ಗುರುತಿಸಿರುವ ಮರಗಳ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಪರಿಶೀಲಿಸಿ, ಅರಣ್ಯಾಧಿಕಾರಿಗಳಿಂದ ಮಾಹಿತಿ ಪಡೆದರು.

ಮೈಸೂರು,ಮೇ 6(ಎಂಟಿವೈ)– ಮೈಸೂರು–ಬೆಂಗಳೂರು ರಸ್ತೆಯ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ನಿರ್ಮಿಸುತ್ತಿರುವ ಫ್ಲೈಓವರ್ ಕಾಮಗಾರಿಗೆ ತೆರವುಗೊಳಿಸಲು ಗುರುತಿಸಿರುವ ಮರಗಳನ್ನು ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಬುಧವಾರ ಬೆಳಗ್ಗೆ ಪರಿಶೀಲಿಸಿ, ಸಾಧ್ಯವಾದಷ್ಟು ಮರಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುವಂತೆ ಸೂಚಿಸಿದರು.

ಕೊಡಗು ಜಿಲ್ಲೆಯ ದುಬಾರೆ ಆನೆ ಕ್ಯಾಂಪ್ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಲು ಉದ್ದೇಶಿಸಿರುವ ತೂಗು ಸೇತುವೆ ಶಂಕುಸ್ಥಾಪನಾ ಕಾರ್ಯಕ್ರಮಕ್ಕೆ ತೆರಳುವ ಮಾರ್ಗ ಮಧ್ಯೆ ಮೈಸೂರಿನ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ಫ್ಲೈಓವರ್ ನಿರ್ಮಾಣಕ್ಕೆ ತೆರವು ಮಾಡಲು ಉದ್ದೇಶಿಸಿರುವ 347 ಮರಗಳ ಮಾಹಿತಿ ಪಡೆದರು. ಈ ವೇಳೆ ಮೈಸೂರು ಪ್ರಾದೇಶಿಕ ಅರಣ್ಯ ವಲಯದ ಡಿಸಿಎಫ್ ಕೆ.ಪರಮೇಶ್, ಸಚಿವರಿಗೆ ಈ ಮರಗಳ ಮಾಹಿತಿ ನೀಡಿದರು. ಅಲ್ಲದೆ, ವಿವಿಧೆಡೆ ಎಷ್ಟು ಮರಗಳ ತೆರವಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸಲ್ಲಿಸಿರುವ ಮನವಿಯ ಮಾಹಿತಿ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಈಶ್ವರ್ ಬಿ.ಖಂಡ್ರೆ, ಅಭಿವೃದ್ಧಿ ಕಾರ್ಯ ನಡೆಯಬೇಕು, ಹಾಗೆಯೇ ಪರಿಸರ ಸಂರಕ್ಷಣೆಯೂ ಆಗಬೇಕು. ಫ್ಲೈಓವರ್ ನಿರ್ಮಾಣಕ್ಕಾಗಿ ತೆರವು ಮಾಡಬೇಕಾಗಿರುವ ಮರಗಳನ್ನು ಸಾಧ್ಯವಾದಷ್ಟು ಸ್ಥಳಾಂತರಿಸಲು ಕ್ರಮ ಕೈಗೊಳ್ಳಬೇಕು. ಅಲ್ಲದೆ, ಫ್ಲೈಓವರ್ ಕಾಮಗಾರಿಗಾಗಿ ಗುರುತಿಸಿರುವ ಮರಗಳಲ್ಲಿ ಅನಗತ್ಯವಾಗಿ ತೆರವು ಮಾಡಲು ಯಾವುದಾದರೂ ಮರ ಗುರುತಿಸಲಾಗಿದೆಯಾ ಎಂಬುದನ್ನು ಪರಿಶೀಲಿಸಬೇಕು. ಅಲ್ಲದೆ, ಸ್ಥಳೀಯ ಸಚಿವರು, ಜನಪ್ರತಿನಿಧಿಗಳು, ಪರಿಸರವಾದಿಗಳಿಂದ ಸಲಹೆ–ಸೂಚನೆ ಪಡೆಯುವಂತೆ ಸೂಚಿಸಿದರು. ಬೀಟೆ, ರೈನ್ ಟ್ರೀ, ಹೊಂಗೆ, ಆಕಾಶ ಮಲ್ಲಿಗೆ, ಗಸಗಸೆ, ಮಹಾಗನಿ, ಮಾವು, ಬೇವು ಸೇರಿದಂತೆ ವಿವಿಧ ಮರಗಳನ್ನು ಕಾಮಗಾರಿಗಾಗಿ ತೆರವುಗೊಳಿಸುವ ಪ್ರಸ್ತಾಪ ಸಲ್ಲಿಸಲಾಗಿದೆ.

ಸಚಿವರಿಗೆ ಮರಗಳ ಮಾಹಿತಿ: ಇದೇ ವೇಳೆ ಅರಣ್ಯಾಧಿಕಾರಿಗಳು ಅರಣ್ಯ ಸಚಿವರಿಗೆ ಎಲ್ಲೆಲ್ಲಿ ಎಷ್ಟು ಮರಗಳನ್ನು ತೆರವು ಮಾಡಬೇಕಾಗುತ್ತದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಗುರುತಿಸಿರುವ ಮರಗಳ ಬಗ್ಗೆ ವಿವರಿಸಿದರು. ಫ್ಲೈಓವರ್‌ಗೆ ಸಿದ್ದಿಕ್ಕಿನಗರದಿಂದ ಫೌಂಟೇನ್ ವೃತ್ತದ ಕಡೆಗೆ ಬರುವ ರಸ್ತೆಯಲ್ಲಿ 19 ಮರ, ಬನ್ನಿಮಂಟಪದ ರಸ್ತೆಯ ಪಾರ್ಕ್ ಆವರಣದಲ್ಲಿರುವ 256 ಗಿಡ–ಮರ, ಮಣಿಪಾಲ್ ಜಂಕ್ಷನ್‌ನಿಂದ ಹುಣಸೂರು ಕಡೆಗೆ ಹೋಗುವ ರಿಂಗ್ ರಸ್ತೆಯ ವಿಭಜಕದಲ್ಲಿರುವ 52 ಮರ, ಮಣಿಪಾಲ್ ಜಂಕ್ಷನ್‌ನಿಂದ ಮಹದೇವಪುರ(ಬನ್ನೂರು) ಕಡೆಗೆ ಹೋಗುವ ರಿಂಗ್ ರಸ್ತೆಯ ವಿಭಜಕದಲ್ಲಿರುವ 20 ಮರಗಳನ್ನು ತೆರವು ಮಾಡಲು ಗುರುತಿಸಲಾಗಿದೆ. ಈ 350 ಮರಗಳಲ್ಲಿ 3 ಶ್ರೀಗಂಧದ ಮರವೂ ಸೇರಿದಂತೆ 347 ಜಾತಿಯ ಮರ ಸೇರಿವೆ.

ಮೈಸೂರು–ನಂಜನಗೂಡು(ರಾಷ್ಟ್ರೀಯ ಹೆದ್ದಾರಿ 766) ಮುಖ್ಯರಸ್ತೆಯಲ್ಲಿ ಕಡಕೊಳದ ಟಿವಿಎಸ್ ಕಾರ್ಖಾನೆ ವೃತ್ತ ಹಾಗೂ ಮಂಡಕಳ್ಳಿ ಬಳಿ ರಸ್ತೆ ಅಗಲೀಕರಣಕ್ಕೆ 15 ಮರ ತೆರವಿಗೆ ಗುರುತಿಸಲಾಗಿದೆ. ಕಡಕೊಳದ ಟಿವಿಎಸ್ ಸರ್ಕಲ್ ಬಳಿ 11, ಮಂಡಕಳ್ಳಿ ಬಳಿ 4 ಮರಗಳು. ತಿ.ನರಸೀಪುರ(ರಾಷ್ಟ್ರೀಯ ಹೆದ್ದಾರಿ 766) ರಸ್ತೆಯ ಅಗಲೀಕರಣ ಕಾಮಗಾರಿಗಾಗಿ ವಿವಿಧೆಡೆ 196 ಮರಗಳ ತೆರವಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮನವಿ ಮಾಡಿದೆ. ಅದರಲ್ಲಿ ವರುಣ ವೃತ್ತದಲ್ಲಿ 26 ಮರ, ದುದ್ದಗೆರೆಯಿಂದ ಪುಟ್ಟೇಗೌಡನ ಹುಂಡಿವರೆಗೆ ರಸ್ತೆಯ ಎರಡೂ ಬದಿಯಲ್ಲಿರುವ 110, ಎಂ.ಸಿ.ಹುಂಡಿ ಬಳಿ ರಸ್ತೆ ಬದಿಯಲ್ಲಿರುವ 60 ಮರಗಳನ್ನು ತೆರವು ಮಾಡುವಂತೆ ಅರಣ್ಯ ಇಲಾಖೆಗೆ ಮನವಿ ಸಲ್ಲಿಸಲಾಗಿದೆ ಎಂದು ಅರಣ್ಯಾಧಿಕಾರಿಗಳು ಸಚಿವರಿಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸಾಮಾಜಿಕ ಅರಣ್ಯ ವಿಭಾಗದ ಡಿಸಿಎಫ್ ಶಂಕರೇಗೌಡ, ಆರ್‌ಎಫ್‌ಓ ಜೀಷನ್ ಮತ್ತಿತರರು ಇದ್ದರು.

ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಲ್ಲಿ ಹೊಸ ಸಂಗ್ರಹ ತನ್ವಿಕ 2.0 ಉದ್ಘಾಟನೆ



ಮೈಸೂರಿನ ಪ್ರತಿಷ್ಠಿತ ಆಭರಣ ಸಂಸ್ಥೆ ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಲ್ಲಿ ಹೊಸ ಸಂಗ್ರಹ ತನ್ವಿಕ 2.0 ಉದ್ಘಾಟನೆಗೊಂಡಿತು.

ಮೈಸೂರು, ಮೇ 6–ಮೈಸೂರಿನ ಪ್ರತಿಷ್ಠಿತ ಆಭರಣ ಸಂಸ್ಥೆ ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಲ್ಲಿ ಹೊಸ ಸಂಗ್ರಹ ತನ್ವಿಕ 2.0 ಉದ್ಘಾಟನೆಗೊಂಡಿತು.

ವಿಶೇಷ ಗ್ರಾಹಕರು ಹಾಗೂ ರೂಪದರ್ಶಿಗಳಾದ ಡಾ॥ಸಿರಿ, ಡಾ॥ ನಿಲಿನಾ ಜೇಮ್ಸ್, ಮಿಸ್ ಸಂಜನಾ, ಮಿಸ್ ಸಹನಾ ಉಪಸ್ಥಿತಿಯಲ್ಲಿ ಈ ಕಾರ್ಯಕ್ರಮವನ್ನು ಅದ್ದೂರಿಯಾಗಿ ಅನಾವರಣಗೊಳಿಸಲಾಯಿತು. ಕಾರ್ಯಕ್ರಮದಲ್ಲಿ ಮಲಬಾರ್ ಗೋಲ್ಡ್ ಮುಖ್ಯಸ್ಥರು ಮತ್ತು ದಕ್ಷಿಣ ವಲಯ ಮುಖ್ಯಸ್ಥ ಶರಫುದ್ದೀನ್ ಹಾಗೂ ಸಹಾಯಕ ಮುಖ್ಯಸ್ಥ ದಯಾನಂದ, ಗ್ರಾಹಕರು ಮತ್ತು ಮಲಬಾರ್ ಗೋಲ್ಡ್ ಸಿಬ್ಬಂದಿ ಈ ವೇಳೆ ಉಪಸ್ಥಿತರಿದ್ದರು.

'ತನ್ವಿಕ' ದೈವತ್ವದಿಂದ ಪ್ರೇರಿತವಾದ ವಿಶಿಷ್ಟ ಆಭರಣ ಸಂಗ್ರಹವಾಗಿದೆ. ಈ ಸಂಗ್ರಹದ ವಿಷಯವು ಸಂಪತ್ತು, ಸಮೃದ್ಧಿ ಮತ್ತು ಅದೃಷ್ಟ ದೇವತೆಯಾದ ಲಕ್ಷ್ಮಿಯ ಸುತ್ತ ಸುತ್ತುತ್ತದೆ. ಪ್ರತಿಯೊಂದು ಆಭರಣವು ದೇವಾಲಯದ ವಾಸ್ತುಶಿಲ್ಪ–ಪ್ರೇರಿತ ವಿನ್ಯಾಸಗಳೊಂದಿಗೆ ಕರಕುಶಲತೆಯನ್ನು ಸುಂದರವಾಗಿ ವಿಲೀನಗೊಳಿಸುತ್ತದೆ ಇದು ಸಂಪ್ರದಾಯ ಮತ್ತು ಭಕ್ತಿಯನ್ನು ಸಂಕೇತಿಸುತ್ತದೆ.

ವಿಶ್ವದ ಅತಿದೊಡ್ಡ ಚಿನ್ನ ಮತ್ತು ವಜ್ರ ಚಿಲ್ಲರೆ ಸರಪಳಿಗಳಲ್ಲಿ ಒಂದಾದ ಮಲಬಾರ್ ಗೋಲ್ಡ್ & ಡೈಮಂಡ್ಸ್, ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯಲ್ಲಿ ವಧುವಿನ ಆಭರಣಗಳ ಮಹತ್ವವನ್ನು ಬಹಳ ಹಿಂದಿನಿಂದಲೂ ಅರ್ಥಮಾಡಿಕೊಂಡಿದೆ. ವಧುವಿನ ಶ್ರೇಣಿಯು ಮಲಬಾರ್ ಗೋಲ್ಡ್ & ಡೈಮಂಡ್ಸ್ ರಚಿಸಿದ ಮತ್ತು ಅಭಿವೃದ್ಧಿಪಡಿಸಿದ ವಿನ್ಯಾಸಗಳ ಸಂಗ್ರಹವಾಗಿದ್ದು, ಪ್ರತಿಯೊಬ್ಬ ವಧುವಿನ ಸಂಪ್ರದಾಯಗಳನ್ನು ಶುದ್ಧತೆ, ಉದ್ದೇಶ ಮತ್ತು ಕರಕುಶಲತೆಯಿಂದ ಗೌರವಿಸಲಾಗುತ್ತದೆ ಎಂದು ಖಚಿತಪಡಿಸುತ್ತದೆ. ವಧುವಿನ ಕರಕುಶಲತೆಯಲ್ಲಿ ಆಳವಾದ ಪರಿಣಿತಿಯೊಂದಿಗೆ, ಮಲಬಾರ್ ದೇಶಾದ್ಯಂತ ವಧುಗಳ ವೈವಿಧ್ಯಮಯ ಸಂಪ್ರದಾಯಗಳನ್ನು ಗೌರವಿಸುವ ವಿನ್ಯಾಸಗಳನ್ನು ರಚಿಸುವಲ್ಲಿ ಸಾಟಿಯಿಲ್ಲದ ಪರಂಪರೆಯನ್ನು ಉಳಿಸಿಕೊಂಡಿದೆ.

ತನ್ವಿಕ ಕಲೆಕ್ಷನ್ ಸುಂದರವಾದ ವಿನ್ಯಾಸಗಳು ಮತ್ತು ಕಾಲಾತೀತ ಕಲೆಯನ್ನು ಒಟ್ಟುಗೂಡಿಸುತ್ತದೆ. ಪ್ರತಿಯೊಂದು ತುಣುಕು ಶುದ್ಧ ಸೊಬಗು, ಆಳವಾದ ಸಾಂಸ್ಕೃತಿಕ ಅರ್ಥ ಮತ್ತು ಪವಿತ್ರ ಸಂಪ್ರದಾಯಗಳನ್ನು ಪ್ರದರ್ಶಿಸುತ್ತದೆ.

ಪ್ರತಿಯೊಂದು ತುಣುಕನ್ನು ಎಲೆಕ್ಟ್ರೋಫಾರ್ಮಿಂಗ್ ಮತ್ತು ಡೈರೆಕ್ಟ್ ಎರಕಹೊಯ್ದದೊಂದಿಗೆ ತಯಾರಿಸಲಾಗುತ್ತದೆ – ಹಗುರವಾದ ಉತ್ಪನ್ನಗಳಿಗೆ ಹೊಸ ತಂತ್ರಜ್ಞಾನಗಳು, ತಲೆಮಾರುಗಳಿಂದ ರವಾನಿಸಲಾದ ಸಾಂಪ್ರದಾಯಿಕ ವಿಧಾನಗಳನ್ನು ಬಳಸುವ ಕೌಶಲ್ಯ ಪೂರ್ಣ ಕುಶಲಕರ್ಮಿಗಳೊಂದಿಗೆ ಸಂಯೋಜಿಸಿ, ಪರಿಪೂರ್ಣತೆಯನ್ನು ಖಚಿತಪಡಿಸುತ್ತದೆ. ಈ ಆಭರಣಗಳು ದೇಶದ ಗಮನಾರ್ಹ ಕರಕುಶಲತೆ ಮತ್ತು ಕಲಾತ್ಮಕ ಪ್ರತಿಭೆಗೆ ಅದ್ಭುತ ಉದಾಹರಣೆಯಾಗಿದೆ.

ವಿವಿಧ ಸೇವಾ ಕಾರ್ಯದೊಂದಿಗೆ ಹುಟ್ಟುಹಬ್ಬ ಆಚರಣೆ...



ಬಂಡಿಪಾಳ್ಯ ಗಿರೀಶ್ ಮತ್ತು ಚಿನಕುರಳಿ ಪ್ರದೀಪ್ ಅವರ ಹುಟ್ಟುಹಬ್ಬವನ್ನು ಅಖಿಲ ಕರ್ನಾಟಕ ಹೆಚ್.ಡಿ.ಕುಮಾರಸ್ವಾಮಿ ಮತ್ತು ಜಿ.ಟಿ.ದೇವೇಗೌಡರ ಅಭಿಮಾನಿಗಳ ಸಂಘದ ವತಿಯಿಂದ ಆಚರಿಸಲಾಯಿತು. ಇದೇ ವೇಳೆ ಶಾಸಕ ಜಿ.ಟಿ.ದೇವೇಗೌಡರು ಶುಭ ಕೋರಿದರು. ಪಿಯುಸಿ ಪರೀಕ್ಷೆಯಲ್ಲಿ ರ‍್ಯಾಂಕ್ ಪಡೆದ ಪಲ್ಲವಿ ಎಂ. ಹಾಗೂ ಇಬ್ಬರು ವಿದ್ಯಾರ್ಥಿನಿಯರಿಗೆ ಶಾಲಾ ಬ್ಯಾಗ್, ನಗದು ಬಹುಮಾನ ವಿತರಿಸಲಾಯಿತು. ಗಾಂಧಿನಗರದ ವೃದ್ಧಾಶ್ರಮದಲ್ಲಿ ಹಣ್ಣು ಹಂಪಲು ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ರಾಜ್ಯಾಧ್ಯಕ್ಷ ಶರಾವತಿ ವೆಂಕಟೇಶ್, ಡಾ.ರಾಜ್‌ಕುಮಾರ್ ಭಾಮೈದ ಶ್ರೀನಿವಾಸ್, ಬಿಜೆಪಿ ರಮೇಶ್, ಜುಪಿಟರ್ ಆನಂದ್, ಡಿ.ಡಿ.ಯತೀಶ್, ಗಿರೀಶ್, ಯರಗನಹಳ್ಳಿ ಸ್ವಾಮಿ, ಗಾಂಧಿನಗರ ಸಂತೋಷ್, ಸಿದರಹಳ್ಳಿ ಜಮ್ ಪ್ರಕಾಶ್ ಇನ್ನಿತರರಿದ್ದರು.


ಛಾತ್ರ ದ್ರೌಪದಿ ಏಕ ಪಾತ್ರಾಭಿನಯ



ಮೈಸೂರು, ಮೇ 6–ಡಾ॥ ವಸುಂಧರ ದೊರೆಸ್ವಾಮಿಯವರು ಮೇ 10 ರಂದು ಸಂಜೆ 6 ಗಂಟೆಗೆ ಗೋಕುಲಂನಲ್ಲಿರುವ ಶ್ರೀಕೃಷ್ಣದೇವಸ್ಥಾನದ ಪ್ರಾಂಗಣದಲ್ಲಿರುವ ಆಳ್ವಾರ್ ಕಲಾಮಂದಿರದಲ್ಲಿ ಛಾತ್ರ ದ್ರೌಪದಿ ಏಕ ಪಾತ್ರಾಭಿನಯ ಪ್ರದರ್ಶನ ನೀಡಲಿದ್ದಾರೆ. ಛಾತ್ರದೌಪದಿಯ ದ್ರೌಪದಿಯ ಪಾತ್ರವನ್ನು ಡಾ॥ ವಸುಂಧರ ಅವರು ಹದಿನೈದನೆಯ ಶತಮಾನದಲ್ಲಿ ಕುಮಾರವ್ಯಾಸನು [ನಾರಣಪ್ಪ] ರಚಿಸಿದ ಮಹಾಭಾರತದಿಂದ ಆರಿಸಿಕೊಂಡು ನೃತ್ಯಸಂಯೋಜನೆಯನ್ನು ಮಾಡಿದ್ದಾರೆ. ಈ ಏಕಪಾತ್ರಾಭಿನಯದ ಸಾಹಿತ್ಯ ಪರಿಕಲ್ಪನೆಯನ್ನು ರಚಿಸಿರುವವರು ಡಾ॥ ಜ್ಯೋತಿಶಂಕರ್. ಸಂಗೀತ ವಿದ್ವಾನ್ ಬಾಲ ಸುಬ್ರಮಣ್ಯ ಶರ್ಮಾ ನಟುವಾಂಗ ಮತ್ತು ನಿರೂಪಣೆ ವಿದ್ವಾನ್ ಸಂದೇಶ್ ಭಾರ್ಗವ್, ಮೃದಂಗ ವಿದ್ವಾನ್ ಜನಾರ್ಧನ್ ರಾವ್, ಕೊಳಲು ವಿದ್ವಾನ್ ನೀತಿಶ್ ಅಮ್ಮಣ್ಣಯ, ವಯೋಲಿನ್ ವಿದ್ವಾನ್ ರಾಧೇಶ್ರಿ, ರಿಥಮ್ ಪ್ಯಾಡ್ ವಿದ್ವಾನ್ ಡಿ.ವಿ.ಪ್ರಸನ್ನಕುಮಾರ್ ಅವರದು. ಕಾರ್ಯಕ್ರಮದ ನಂತರ ಡಾ॥ ವಸುಂಧರ ಅವರಿಗೆ ಶ್ರೀಕೃಷ್ಣಗಾನ ಸಭಾ ಟ್ರಸ್ಟ್ ಅಧ್ಯಕ್ಷ ಶ್ರೀಧರ್ ರಾಜೇಅರಸ್ ಅವರಿಂದ ಜೀವಮಾನ ಸಾಧನೆಯ ಪ್ರಶಸ್ತಿಯನ್ನು ನೀಡಲಾಗುತ್ತದೆ. ಮುಖ್ಯ ಅತಿಥಿಯಾಗಿ ಶಾಸಕ ಟಿ.ಎಸ್. ಶ್ರೀವತ್ಸ ಮತ್ತು ಮೈಸೂರಿನ ಗಣೇಶ್ ಬೀಡಿ ವರ್ಕ್ಸ್‌ನ ಪಾಲುದಾರರಾದ ಡಾ॥ ಶ್ರೀ ಜಗನ್ನಾಥ್ ಶೆಣೈ ಉಪಸ್ಥಿತರಿರುತ್ತಾರೆ.

ಇಂದು ಸುತ್ತೂರು ಮಠಕ್ಕೆ ಡಾ.ಮೋಹನ್ ಭಾಗವತ್ ಭೇಟಿ

ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ವಿಶೇಷ ಉಪನ್ಯಾಸ



ಮೈಸೂರು, ಮೇ 6– ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್)ದ ಸರಸಂಘಚಾಲಕ್ ಡಾ.ಮೋಹನ್ ಭಾಗವತ್ ಅವರು ನಾಳೆ (ಮೇ 7) ಮೈಸೂರಿಗೆ ಭೇಟಿ ನೀಡಲಿದ್ದು, ಸುತ್ತೂರು ಮಠದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ವಿಶೇಷ ಉಪನ್ಯಾಸ –15 ಅಡಿ ನಾಳೆ ಬೆಳಗ್ಗೆ 10 ಗಂಟೆಗೆ ರಾಷ್ಟ್ರೀಯ ಅಭಿವೃದ್ಧಿಯ ವೇಗವರ್ಧಕವಾಗಿ ಸಾಮಾಜಿಕ ಸಾಮರಸ್ಯ ಕುರಿತು ಮಾತನಾಡಲಿದ್ದಾರೆ. ಇದೇ ವೇಳೆ ಅವರು ಸದ್ಗುರು ಶ್ರೀ ಮಧುಸೂದನ್ ಸಾಯಿ ಅವರ 14 ನೇ ವಿಶೇಷ ಉಪನ್ಯಾಸ ಪುಸ್ತಕ 'ಆತ್ಮನೋ ಮೋಕ್ಷಾರ್ಥಂ ಜಗತ್ ಹಿತಾಯ ಚ' ಬಿಡುಗಡೆ ಮಾಡಲಿದ್ದಾರೆ.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಈ ಕಾರ್ಯಕ್ರಮವು https://www.youtube.com/jssmahavidyapeethaonline/ streamsನಲ್ಲಿ ಪ್ರಸಾರವಾಗಲಿದೆ.

ಡಾ.ಮೋಹನ್ ಮಧುಕರ್ ಭಾಗವತ್ ಅವರು ಸಮಕಾಲೀನ ಭಾರತದ ಪ್ರಮುಖ ಸಾಮಾಜಿಕ–ಸಾಂಸ್ಕೃತಿಕ ನಾಯಕರಲ್ಲಿ ಒಬ್ಬರು. ಸೆಪ್ಟೆಂಬರ್ 14, 1950ರಂದು ಮಹಾರಾಷ್ಟ್ರದ ಚಂದ್ರಾಪುರದಲ್ಲಿ ಜನಿಸಿದ ಅವರು, 1974 ರಲ್ಲಿ ಪಂಜಾಬ್ರಾವ್ ಕೃಷಿ ವಿಶ್ವವಿದ್ಯಾಲಯ (ಈಗ ಡಾ. ಪಂಜಾಬ್ರಾವ್ ದೇಶಮುಖ್ ಕೃಷಿ ವಿದ್ಯಾಪೀಠ) ದಿಂದ ಪಶುವೈದ್ಯಕೀಯ ವಿಜ್ಞಾನದಲ್ಲಿ ಎಂ.ಎಸ್ಸಿ ಪದವಿ ಪಡೆದರು. ಉನ್ನತ ಅಧ್ಯಯನವನ್ನು ಕೈಬಿಟ್ಟು, ಅವರು ಆರ್‌ಎಸ್‌ಎಸ್‌ನ ಪ್ರಚಾರಕರಾಗಿ ತಮ್ಮ ಪ್ರಯಾಣವನ್ನು ಆರಂಭಿಸಿದರು. 2009ರಿಂದ ಡಾ.ಮೋಹನ್ ಭಾಗವತ್ ಆರ್‌ಎಸ್‌ಎಸ್‌ನ 6ನೇ ಸರಸಂಘಚಾಲಕ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ಆಮಂತ್ರಣ ಪತ್ರಿಕೆ ಬಿಡುಗಡೆ...



ಮೈಸೂರಿನ ಟಿಪ್ಪು ಸುಲ್ತಾನ್ ಶಹೀದ್ ಅವರ 234ನೇ ವರ್ಷದ ಗಂಧದ ಉರುಸ್ ಶರೀಫ್‌ನ ಆಮಂತ್ರಣ ಪತ್ರಿಕೆ ಮತ್ತು ಪೋಸ್ಟರ್ ಅನ್ನು ಶಾಸಕ ತನ್ವೀರ್ ಸೇಠ್ ಬಿಡುಗಡೆ ಮಾಡಿದರು. ಇದೇ ವೇಳೆ ಮಸೀದಿ ಅಕ್ಸಾದ ಇಮಾಮ್ ಮೌಲಾನಾ ಮೊಹಮ್ಮದ್ ಇನಾಯತ್–ಉರ್–ರೆಹಮಾನ್ ರಜ್ವಿ, ಹಿರಿಯ ಕಾಂಗ್ರೆಸ್ ಮುಖಂಡ ಎಂ.ಎಫ್. ಜಂಷೀದ್, ಸೈಯದ್ ಯೂನುಸ್, ಮಜೀದ್ ಅಹ್ಮದ್, ಖ್ವಾಜಾ ಮೊಹಮ್ಮದ್ ಮುಷೀರ್ ಚಿಸ್ಟಿ ಮತ್ತಿತರರು ಉಪಸ್ಥಿತರಿದ್ದರು.

ಇಂದಿನಿಂದ ಬಾಲ ವಿಕಾಸ ಶಿಬಿರ

ಮೈಸೂರು, ಮೇ 6– ಮೈಸೂರು–ಚಾಮರಾಜನಗರ ಅಂತರರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ಸರ್ದಾರ್ ವಲ್ಲಭಭಾಯಿ ಪಟೇಲ್ ನಗರದ ಬ್ರಹ್ಮಾಕುಮಾರಿ ಸೇವಾ ಕೇಂದ್ರದಲ್ಲಿ ಮೇ 7ರಿಂದ 13ರವರೆಗೆ ಬಾಲ ವಿಕಾಸ ಶಿಬಿರವನ್ನು 6ರಿಂದ 16 ವರ್ಷ ವಯಸ್ಸಿನ ಮಕ್ಕಳಿಗೆ ಬೆಳಗ್ಗೆ 10ರಿಂದ ಮಧ್ಯಾಹ್ನ 2.30 ವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ರಶ್ಮಿಜೀ ತಿಳಿಸಿದ್ದಾರೆ.

ಶಿಬಿರದಲ್ಲಿ ಎಳೆಯ ಮಕ್ಕಳ ಮನಸ್ಸಿಗೆ ಏಕಾಗ್ರತೆ ಹಾಗೂ ದೃಢತೆ ಜಾಗೃತಿಗೊಳಿಸುವುದು, ಪರಿಸ್ಥಿತಿಗಳಲ್ಲಿ ಕುಗ್ಗದೆ ಧೈರ್ಯವನ್ನು ಧರಿಸುವುದು, ಬದಲಾದ ಪೀಳಿಗೆಗೆ ಶ್ರೇಷ್ಠ ಮೌಲ್ಯಗಳನ್ನು ತುಂಬುವುದು, ಮಕ್ಕಳನ್ನು ಉತ್ತಮ ಪ್ರಜೆಗಳನ್ನಾಗಿ ಮಾಡುವುದು, ಪರಸ್ಪರದಲ್ಲಿ ಏಕತೆಯ ಭಾವನೆ ಮೂಡಿಸುವುದು, ಆಧ್ಯಾತ್ಮಿಕತೆಯಿಂದ ನವರಾಷ್ಟ್ರ, ಯುವ ರಾಷ್ಟ್ರ ಸಮೃದ್ಧ ರಾಷ್ಟ್ರ, ಕಟ್ಟುವುದು, ಮೌಲ್ಯಭರಿತ ಆಟಗಳು, ರಾಜಯೋಗ ಧ್ಯಾನ, ಉಲ್ಲಾಸ ಹೆಚ್ಚಿಸುವ ಚಟುವಟಿಕೆಗಳು, ವ್ಯಾಯಾಮ, ಧ್ಯಾನ, ಸಕಾರಾತ್ಮಕ ಚಿಂತನೆ, ಸ್ವಚ್ಛ ಮನಸ್ಸು, ಸ್ವಚ್ಛ ಜೀವನದಿಂದ ಸ್ವಚ್ಛ ಭಾರತ ಕಲ್ಪನೆ ಕಟ್ಟಿಕೊಡಲಾಗುವುದು. ಮಾಹಿತಿಗೆ 9900264937, 7899820430 ಸಂಪರ್ಕಿಸಿ.

ನಿಧನ

ಪ್ರಬೋಧ್ ಬಲ್ಲಾಳ್



ಮೈಸೂರು, ಮೇ 6– ಮೂಲತಃ ಮೈಸೂರು ಕೃಷ್ಣಮೂರ್ತಿಪುರಂ ನಿವಾಸಿಯಾಗಿದ್ದು, ಬೆಂಗಳೂರಿನಲ್ಲಿ ನೆಲೆಸಿದ್ದ ಪ್ರಬೋಧ್ ಬಲ್ಲಾಳ್ (48) ಅಲ್ಪಕಾಲದ ಅಸ್ವಸ್ಥತೆ ನಂತರ ಇಂದು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ತಾಯಿ ಇಂದ್ರ ಬಲ್ಲಾಳ್, ಪತ್ನಿ ಮಮತಾ ಬಲ್ಲಾಳ್, ಪುತ್ರರಾದ ಕುಶಬ್ ಬಲ್ಲಾಳ್, ನೀರವ್ ಬಲ್ಲಾಳ್, ಕಿರಿಯ ಸಹೋದರ ಪ್ರಮುಖ್ ಬಲ್ಲಾಳ್ ಸೇರಿದಂತೆ ಅಪಾರ ಬಂಧು–ವರ್ಗ ಹಾಗೂ ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಗುರುವಾರ) ಬೆಳಗ್ಗೆ ಬೆಂಗಳೂರಿನ ಹೆಬ್ಬಾಳು ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಪ್ರಭೋದ್, ಮೈಸೂರಿನ ಹೆಸರಾಂತ ವಕೀಲರಾದ ದಿವಂಗತ ಶ್ರೀನಿವಾಸ ಬಲ್ಲಾಳ್ ಅವರ ಪುತ್ರ, ಇವರ ತಾತಾ ರಾಘವೇಂದ್ರ ಬಲ್ಲಾಳ್, ಮೈಸೂರಿನ ಪ್ರಸಿದ್ಧ ಬಲ್ಲಾಳ್ ಹೋಟೆಲ್ ಮಾಲೀಕರು.

ಅಕ್ಕಮ್ಮ



ಮೈಸೂರಿನ ಬಂಡಿಕೇರಿ ನಿವಾಸಿ ಅಕ್ಕಮ್ಮ (97) ಅವರು ಬುಧವಾರ ಬೆಳಗ್ಗೆ ನಿಧನರಾದರು. ಮೃತರು ನಾಲ್ವರು ಪುತ್ರರು, ಇಬ್ಬರು ಹೆಣ್ಣು ಮಕ್ಕಳು, ಮೊಮ್ಮಕ್ಕಳು, ಮರಿ ಮಕ್ಕಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿ ಬೆಟ್ಟದ ತಪ್ಪಲಿನ ಸ್ಮಶಾನದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

07.5.2026 ಗುರುವಾರ, ಮಳೆ ನಕ್ಷತ್ರ: ಭರಣಿ 27.04.2026ರಿಂದ 10.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಪೂರ್ವಾಷಾಢ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

■ **ಕ್ಷೇಮಧಾಮ ಟ್ರಸ್ಟ್ ಹಾಗೂ ಅರಿವು ಸಂಸ್ಥೆ** : ಪ್ಲಾಸ್ಟಿಕ್ ಬಿಡಿ ಬಟ್ಟೆ ಬ್ಯಾಗ್ ಬಳಸಿ ಜಾಗೃತಿ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಕ್ಷೇಮ ಧಾಮ ಟ್ರಸ್ಟ್ ಅಧ್ಯಕ್ಷ ಎಚ್‌ವಿಎಲ್‌ಎನ್ ಆಚಾರ್, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಅರಿವು ಸಂಸ್ಥೆ ಅಧ್ಯಕ್ಷ ಶ್ರೀಕಾಂತ್ ಕಶ್ಯಪ್, ಸ್ಥಳ: ಶ್ರೀರಾಂಪುರದ ಬಿಎಸ್‌ಎನ್‌ಎಲ್ ಆರ್ಚ್ ಹತ್ತಿರ, ಬೆಳಗ್ಗೆ 8ಕ್ಕೆ.

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ** : ಇಂಡೋಕ್ಲೆಫ್ಟ್‌ಕಾನ್–2026, ಮುಖ್ಯ ಅತಿಥಿಗಳು: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶ್ರೀಮತಿ ರೇಣು ಮೆಹ್ತಾ, ಪ್ರೊ.ಎಂ.ಪುಷ್ಪವತಿ, ಸ್ಥಳ: ನಾಲೆಡ್ಜ್ ಪಾರ್ಕ್, ನೈಮಿಷಂ ಆವರಣ, ಆಯಿಷ್, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಬೊಜ್ಜು, ಸಕ್ಕರೆ ಕಾಯಿಲೆ, ಬಿಪಿ, ಕೀಲು ನೋವು, ಅಲರ್ಜಿ, ಚರ್ಮದ ರೋಗಗಳು, ಒತ್ತಡ, ಆತಂಕ, ಬಾಲನೆರೆ, ವಯೋಸಹಜ ಗುಣಗಳು, ದೃಷ್ಟಿಮಾಂದ್ಯ, ತಲೆ ನೋವು, ಕೆಮ್ಮು, ಅಸ್ತಮಾ, ಪಿಸಿಓಡಿ, ಪುರುಷ ಹಾಗೂ ಸ್ತ್ರೀ ಬಂಜೆತನ ತಪಾಸಣಾ ಶಿಬಿರ, ಬೆಳಗ್ಗೆ 9.30ರಿಂದ ಆರೋಗ್ಯ ತಪಾಸಣೆ ಮತ್ತು ಜಾಗೃತಿ ಶಿಬಿರ, ಚರ್ಮ ಆರೈಕೆ ಮತ್ತು ಡಿಟಾಕ್ಸಿಫಿಕೇಶನ್ ಯೋಗ ಶಿಬಿರ, ಮಧುಮೇಹದ ಗಾಯಗಳ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಜೆಎಸ್‌ಎಸ್ ಹಿರಿಯ ಪ್ರಸಾದ ನಿಲಯಗಳ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಹಕಾರ ಸಂಘ, ಜೆಎಸ್‌ಎಸ್ ಹಿರಿಯ ವಿದ್ಯಾರ್ಥಿಗಳ ಸಂಘ, ಮೈಸೂರು–ಚಾಮರಾಜನಗರ ಜಿಲ್ಲಾ ಗುಬ್ಬಿ ತೋಟದಪ್ಪನವರ ವಿದ್ಯಾರ್ಥಿ ನಿಲಯಗಳು** : ನಿವೃತ್ತ ಡಿಜಿಪಿ ಡಾ. ಎಲ್. ರೇವಣ್ಣಸಿದ್ದಯ್ಯರವರಿಗೆ ಅಭಿನಂದನಾ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಜೆಎಸ್‌ಎಸ್ ಹಿರಿಯ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಎ.ಎಸ್.ಚನ್ನಬಸಪ್ಪ, ಅಭಿನಂದನಾ ನುಡಿ: ಹಿರಿಯ ವಕೀಲ ಎಚ್.ಎಸ್.ಚಂದ್ರಮೌಳಿ, ಡಿ.ಪಿ.ಸತೀಶ್, ನಿವೃತ್ತ ಉಪ ಪೊಲೀಸ್ ಅಧೀಕ್ಷಕ ಜೆ.ಬಿ. ರಂಗಸ್ವಾಮಿ, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಅನುಭವ ಮಂಟಪ, ರಾಜೇಂದ್ರನಗರ, ಮಧ್ಯಾಹ್ನ 2ಕ್ಕೆ.

■ **ಸುರಭಿ ಗಾನಕಲಾಮಂದಿರ ಚಾರಿಟಬಲ್ ಟ್ರಸ್ಟ್:** ವಿದುಷಿ ಡಾ.ಸುಕನ್ಯಾ ಪ್ರಭಾಕರ್ ಅವರಿಂದ ಶ್ರೀ ಸ್ವಾತಿ ತಿರುನಾಳ್ ಮಹಾರಾಜರ ಕೃಷ್ಣಪರ ರಚನೆಗಳ ಅಧ್ಯಯನ ಶಿಬಿರ, ಸ್ಥಳ: ಶ್ರೀಮತಿ ಲೀಲಾ ನಾಗರಾಜ್ ಅವರ ಸ್ವಗೃಹ, 13ನೇ ಮುಖ್ಯರಸ್ತೆ, ಸರಸ್ವತಿಪುರಂ, ಸಂಜೆ 4ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ:** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ದೈಹಿಕ ದೀಕ್ಷೆ ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಡಾ. ಕುಲದೀಪ್.ಎನ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಮತ್ತು ಸಂಜೆ 5.30– ಚೂಟಿ ಚೂಟಿ ಚುಟುಕ್ ಗುಳುಂ ಗುಟುಕ್–ಶಿಶು ಗೀತೆಗಳ ಕಾರ್ಯಕ್ರಮ, 8.35 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಪಿ. ಗುರುಪ್ರಸಾದ್–ಸ್ಯಾಕ್ಸೋಫೋನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಸುತ್ತಮುತ್ತ : ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಪ್ರಮುಖ ಸಭೆ ಸಮಾರಂಭಗಳ ಪರಿಚಯಾತ್ಮಕ ಕಾರ್ಯಕ್ರಮ. ಪ್ರಸ್ತುತಿ–ಚಂದನಾ .ಸಿ ಹಾಗೂ ಅರ್ಚನಾ. ಪಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಸಂಧ್ಯಾರಾಗ 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಹಣ್ಣು ಹೊನ್ನು– ತೋಟಗಾರಿಕಾ ಬೆಳೆಗಳ ಸುಸ್ಥಿರ ಬೇಸಾಯ ಕುರಿತ ಬಾನುಲಿ ಸರಣಿ. ತಾಳೆ ಬೆಳೆ ವಿಸ್ತರಣೆ, ಅವಕಾಶಗಳು ಮತ್ತು ಇಲಾಖೆ ಸವಲತ್ತುಗಳನ್ನ ಕುರಿತು ಸಂವಾದ. ಭಾಗವಹಿಸುತ್ತಾರೆ–ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರಾದ ಎಚ್. ಎಂ. ನಾಗರಾಜ್ ಮತ್ತು ಮೈಸೂರಿನ ಪತಾಂಜಲಿ ಫುಡ್ ಸಂಸ್ಥೆಯ ಸಹಾಯಕ ಮಹಾ ಪ್ರಬಂಧಕರಾದ ಎ.ಎಸ್. ಪ್ರಸಾದ್ ಬಾಬು, ಪ್ರಸ್ತುತಿ–ಎನ್. ಕೇಶವ ಮೂರ್ತಿ, 7.45 ಚಿತ್ರಗೀತೆಗಳು, 8.00 ಯುವವಾಣಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಓ.ಎಸ್. ಅರುಣ್, ಹಾಡುಗಾರಿಕೆ–ಊತುಕ್ಕಾಡು ವೆಂಕಟ ಸುಬ್ಬಯ್ಯರ್ ರಚನೆಗಳು, 10.00 ರಾಷ್ಟ್ರೀಯ ಪ್ರಾದೇಶಿಕ ಜನಪದ ಹಾಗೂ ಲಘು ಸಂಗೀತ ಕಾರ್ಯಕ್ರಮ, ರಾಜೇಶ್ ಕುಮಾರ್ ಸೊಧಾತರ್–ಗುಜರಾತಿ ಜನಪದಗೀತೆ ಎಂ. ಡಿ. ವಕೀಲ್–ಲಘು ಘಜಲ್

ಕಂಡ ಕಂಡಲ್ಲಿ ಮೂತ್ರ ವಿಸರ್ಜನೆ ಮಾಡುವವರಿಗೇ ಮುಜುಗರ ಉಂಟು ಮಾಡುವ 'ಕನ್ನಡಿ'!



ಮಾತು ಕೇಳದವರ ಮಾನ ತೆಗೆಯುವ ತಂತ್ರಗಾರಿಕೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಸದ್ಯ ಯಶಸ್ವಿ...!



ಮೈಸೂರು, ಮೇ 6(ಎಂಟಿವೈ)– ಕಂಡ ಕಂಡಲ್ಲಿ ಮೂತ್ರ ವಿಸರ್ಜಿಸಲು ಮುಂದಾಗುವವರಿಗೆ ಮುಜುಗರವಾಗುವಂತಹ ತಂತ್ರಗಾರಿಕೆಯನ್ನು ಮೈಸೂರು ಮಹಾನಗರ ಪಾಲಿಕೆ ರೂಪಿಸಿ, ಅದರಲ್ಲಿ ಯಶಸ್ವಿಯೂ ಆಗಿದೆ. ಎಚ್ಚರಿಕಾ ಫಲಕ ಹಾಕಿ... ಹಾಕಿ... ಎಷ್ಟೇ ಮನವಿ ಮಾಡಿದರೂ ಕೇರ್ ಮಾಡದವರ ಮಾನ ತೆಗೆಯುವ ಹೊಸ ಪ್ರಯೋಗದಿಂದ ಕೈಹಾಕಿದ ಕೆಲಸದಲ್ಲಿ ಅಂತೂ ಗೆದ್ದಿದೆ!

ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದ ಮುಂಭಾಗ ಪೀಪಲ್ಸ್ ಪಾರ್ಕ್‌ಗೆ ಹೊಂದಿಕೊಂಡಂತಿರುವ ದೊಡ್ಡ ಚರಂಡಿ ಉದ್ದಕ್ಕೂ ಪ್ರತಿನಿತ್ಯ ನೂರಾರು ಮಂದಿ ಮೂತ್ರ ವಿಸರ್ಜಿಸಿ, ಬಿ.ಎನ್. ರಸ್ತೆಯಲ್ಲಿ ಸಂಚರಿಸುವ ಮಹಿಳೆಯರು, ಮಕ್ಕಳಿಗೆ ತೀವ್ರ ಮುಜುಗರ ಉಂಟು ಮಾಡುತ್ತಿದ್ದರು. ಪಕ್ಕದಲ್ಲಿಯೇ ಸಾರ್ವಜನಿಕ ಶೌಚಾಲಯವಿದ್ದರೂ, ಜನ ಮಾತ್ರ ಬಯಲಲ್ಲಿಯೇ ಮೂತ್ರ ವಿಸರ್ಜಿಸುತ್ತಿದ್ದರು. ಇದರಿಂದ, ಸ್ವಚ್ಛ ನಗರಿಗೆ ಅಪವಾದ ಎಂಬಂತೆ ಆ ಭಾಗದಲ್ಲಿ ಜನ ಮೂಗು ಮುಚ್ಚಿಕೊಂಡು ಓಡಾಡುವಂತಾಗಿತ್ತು.

ದಂಡದ ಬೋರ್ಡಿಗೂ ಜಗ್ಗಲಿಲ್ಲ!: ಗ್ರಾಮಾಂತರ ಬಸ್ ನಿಲ್ದಾಣದ ಎದುರು ಬಿ.ಎನ್.ರಸ್ತೆ ಬದಿ ಸಾರ್ವಜನಿಕವಾಗಿ ಮೂತ್ರ ವಿಸರ್ಜನೆ ಮಾಡುವುದರಿಂದ ಆ ಸ್ಥಳವನ್ನು ಸ್ವಚ್ಛ ಸರ್ವೇಕ್ಷಣೆಯಲ್ಲಿ 'ಹಳದಿ ವಲಯ' ಎಂದು ಘೋಷಿಸಲಾಗಿತ್ತು ಈ ಹಿನ್ನೆಲೆಯಲ್ಲಿ ಆ ಸ್ಥಳದಲ್ಲಿ ಮೂತ್ರ ವಿಸರ್ಜಿಸಿದರೆ ದಂಡಾಸ್ತ್ರ ಪ್ರಯೋಗಿಸುವುದಾಗಿ ಎಚ್ಚರಿಕೆ ಸಂದೇಶದ ಬ್ಯಾನರ್ ಹಾಗೂ ಬೋರ್ಡ್ ಅಳವಡಿಸಲಾಗಿತ್ತು. ಆದರೂ, ಅದಕ್ಕೆ ಸೊಪ್ಪು ಹಾಕದೆ ಮೂತ್ರ ವಿಸರ್ಜಿಸಿ ವಾತಾವರಣ ಕಲುಷಿತಗೊಳ್ಳುವಂತೆ ಮಾಡುತ್ತಿದ್ದರು.

ಹೊಸ ಪ್ರಯೋಗ: ಗ್ರಾಮಾಂತರ ಬಸ್ ನಿಲ್ದಾಣಕ್ಕೆ ರಾಜ್ಯದ ವಿವಿಧ ಜಿಲ್ಲೆ ಮಾತ್ರವಲ್ಲದೆ, ಹೊರ ರಾಜ್ಯ, ದೇಶಗಳಿಂದ ಬರುವ ಪ್ರಯಾಣಿಕರು, ಪ್ರವಾಸಿಗರು ತೀವ್ರ ಮುಜುಗರಕ್ಕೀಡಾಗುವಂತಹ ಹೀನಾಯ ಪರಿಸ್ಥಿತಿ ಉಂಟಾಗಿತ್ತು. ಈ ಹಿನ್ನೆಲೆಯಲ್ಲಿ ಆ ಭಾಗದಲ್ಲಿ ಬಯಲು ಮೂತ್ರ ವಿಸರ್ಜನೆ ತಡೆಗೆ ಶಾಶ್ವತ ಕ್ರಮ ಕೈಗೊಳ್ಳಲು ಚಿಂತಿಸುತ್ತಿದ್ದ ಮೈಸೂರು ಮಹಾನಗರ ಪಾಲಿಕೆಯ, ವಾಣಿ ವಿಲಾಸ ನೀರು ಸರಬರಾಜು ಮಂಡಳಿ (ಒಳಚರಂಡಿ ವಿಭಾಗ) ಹೊಸ ಪ್ರಯೋಗ ಮಾಡಿದೆ. ಗ್ರಾಮಾಂತರ ಬಸ್ ನಿಲ್ದಾಣದ ಬಳಿಯ ಆರ್ಚ್ ಬಳಿಯಿಂದ ಹಾರ್ಡಿಂಗ್ ವೃತ್ತದ ಕಡೆಗೆ ಪೀಪಲ್ಸ್ ಪಾರ್ಕ್ ಪಕ್ಕದಲ್ಲಿ ಹಾದು ಹೋಗಿರುವ ದೊಡ್ಡ ಚರಂಡಿ ಪಕ್ಕ 85 ಮೀಟರ್ ಪಾಲಿಶ್ ಮಾಡಿರುವ 'ರಿಫ್ಲೆಕ್ಟಿವ್ ಸ್ಟೈನ್‌ಲೆಸ್ ಸ್ಟೀಲ್ ಶೀಟ್' ಗಳನ್ನು ತಡೆಗೋಡೆ ಮಾದರಿಯಲ್ಲಿ ಅಳವಡಿಸಲಾಗಿದೆ. ಕನ್ನಡಿಯಂತಿರುವ ಈ ರಿಫ್ಲೆಕ್ಟಿವ್ ಸ್ಟೈನ್‌ಲೆಸ್ ಸ್ಟೀಲ್ ಶೀಟ್ ಮುಂದೆ ನಿಂತವರ ಮುಖ ಚಹರೆ ಪ್ರತಿಬಿಂಬಿಸುತ್ತದೆ. ಇಲ್ಲಿ ಮೂತ್ರ ವಿಸರ್ಜನೆಗೆ ಮುಂದಾಗುವವರ ಮುಖಕ್ಕೆ ಹೊಡೆದಂತೆ ಅವರು ಮಾಡುವ ಹೇಸಿಗೆ ರಾಚುತ್ತದೆ. ಹಾಗಾಗಿ ಅವರು ಮುಜುಗರದಿಂದ ಅಲ್ಲಿ ಮೂತ್ರ ವಿಸರ್ಜನೆಗೆ ಮುಂದಾಗದೆ ವಾಪಸ್ ಹೋಗಲಿದ್ದಾರೆ.

ಈ ಭಾಗದಲ್ಲಿ ಹೊಸದಾಗಿ ಇಂಟರ್‌ಲಾಕ್ ಅಳವಡಿಸಿ, ಅಚ್ಚುಕಟ್ಟಾಗಿ ಪಾದಚಾರಿ ಮಾರ್ಗ ನಿರ್ಮಿಸಲಾಗಿದೆ. ಪಾಲಿಶ್ ಮಾಡಿರುವ ರಿಫ್ಲೆಕ್ಟಿವ್ ಸ್ಟೈನ್‌ಲೆಸ್ ಸ್ಟೀಲ್ ಶೀಟ್ ಸುತ್ತಲೂ ಎಲ್‌ಇಡಿ ಲೈಟ್ ಅಳವಡಿಸಿರುವುದರಿಂದ ರಾತ್ರಿ ವೇಳೆ ಬೀದಿ ದೀಪ ಆನ್ ಆಗುತ್ತಿದ್ದಂತೆ ಎಲ್‌ಇಡಿ ಬಲ್ಬ್ ಆನ್ ಆಗುವುದರಿಂದ ಆ ಸ್ಥಳ ದೀಪಾಲಂಕಾರ ಮಾಡಿದಂತೆ ಗೋಚರಿಸುತ್ತದೆ. ಹಾಗಾಗಿ ರಾತ್ರಿ ವೇಳೆ ಮೂತ್ರ ವಿಸರ್ಜನೆ ಮಾಡಲು ಬರುವವರಿಗೆ ಮುಜುಗರವಾಗಲಿದೆ.

ಇದು ಪ್ರಾಯೋಗಿಕ ಕ್ರಮ

ಗ್ರಾಮಾಂತರ ಬಸ್ ನಿಲ್ದಾಣದ ಮುಂದೆ ವ್ಯಾಪಕ ರೀತಿ ಮೂತ್ರ ವಿಸರ್ಜನೆ ಹಿನ್ನೆಲೆಯಲ್ಲಿ 'ಹಳದಿ ಸ್ಪಾಟ್' ಎಂದು ಗುರುತಿಸಲಾಗಿತ್ತು. ಎಚ್ಚರಿಕಾ ಫಲಕ ಹಾಕಿದ್ದರೂ, ಜನ ಸ್ಪಂದಿಸುತ್ತಿರಲಿಲ್ಲ. ಇದರಿಂದ ಪರಿಣಾಮಕಾರಿಯಾಗಿ ಏನಾದರೂ ಕ್ರಮ ಕೈಗೊಳ್ಳಬೇಕು ಎಂದು ಉದ್ದೇಶಿಸಲಾಗಿತ್ತು. ಈ ವೇಳೆ ಪಾಲಿಶ್ ಮಾಡಿದ ರಿಫ್ಲೆಕ್ಟಿವ್ ಸ್ಟೈನ್‌ಲೆಸ್ ಸ್ಟೀಲ್ ಶೀಟ್ ಅಳವಡಿಸಲಾಗಿದೆ. ಇದು ಪ್ರಾಯೋಗಿಕವಾಗಿ ಕೈಗೊಂಡ ಕ್ರಮವಾಗಿದ್ದು, ಸಾರ್ವಜನಿಕ ವಲಯದಿಂದ ಭಾರೀ ಪ್ರಶಂಸೆ ವ್ಯಕ್ತವಾಗಿದೆ. ಪಾದಚಾರಿ ಮಾರ್ಗ ಒಳಗೊಂಡಂತೆ ಈ ಕಾಮಗಾರಿಗೆ 9.50 ಲಕ್ಷ ರೂ. ವೆಚ್ಚವಾಗಬಹುದು ಎಂದು ಅಂದಾಜಿಸಲಾಗಿದೆ.

– ಮುಸ್ತಫಾ, ಎಇಇ, ವಾಣಿವಿಲಾಸ ನೀರು ಸರಬರಾಜು ಮಂಡಳಿ



ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದ ಎದುರು ಬಯಲು ಮೂತ್ರ ವಿಸರ್ಜನೆ ಸ್ಥಳದ ಉದ್ದಕ್ಕೂ ಪಾಲಿಶ್ ಮಾಡಿರುವ ರಿಫ್ಲೆಕ್ಟಿವ್ ಸ್ಟೈನ್‌ಲೆಸ್ ಸ್ಟೀಲ್ ಶೀಟ್ ಅಳವಡಿಸಿರುವುದು.

ಮೈಸೂರಲ್ಲಿವೆ 23 ಹಳದಿ ವಲಯ

ಸ್ವಚ್ಛ ಸರ್ವೇಕ್ಷಣೆಯಲ್ಲಿ ಮೈಸೂರಿನ ವಿವಿಧೆಡೆ ಬಯಲು ಮೂತ್ರ ವಿಸರ್ಜನೆಯ 23 ಸ್ಥಳವನ್ನು 'ಹಳದಿ ವಲಯ' ಎಂದು ಘೋಷಿಸಲಾಗಿದೆ. ಆ 23 ಹಳದಿ ಪ್ರದೇಶದಲ್ಲಿ ಗ್ರಾಮಾಂತರ ಬಸ್ ನಿಲ್ದಾಣದ ಮುಂಭಾಗದ ಸ್ಥಳ ಮುಂಚೂಣಿಯಲ್ಲಿತ್ತು. ಕನ್ನಡಿ ಮಾದರಿ ಶೀಟ್ ಅಳವಡಿಸಿರುವುದು ಯಶಸ್ವಿಯಾದರೆ ಮುಂಬರುವ ದಿನಗಳಲ್ಲಿ ಎಲ್ಲಾ 23 ಹಳದಿ ವಲಯದಲ್ಲೂ ಪಾಲಿಶ್ ಮಾಡಿರುವ ರಿಫ್ಲೆಕ್ಟಿವ್ ಸ್ಟೈನ್‌ಲೆಸ್ ಸ್ಟೀಲ್ ಶೀಟ್ ಅಳವಡಿಸುವ ಆಲೋಚನೆ ಮೈಸೂರು ಮಹಾನಗರ ಪಾಲಿಕೆ ಮಾಡಲಿದೆ.

ಅಧಿಕಾರ ಹಂಚಿಕೆ ಗೊಂದಲ ವಿಚಾರ

ವರಿಷ್ಠರು ದೆಹಲಿಗೆ ಕರೆದಾಗ ನಾನು, ಸಿಎಂ ಹೋಗ್ತೇವೆ

ಬೆಂಗಳೂರು, ಮೇ 6(ಕೆಎಂಶಿ)– ಅಧಿಕಾರ ಹಂಚಿಕೆ ಗೊಂದಲ ನಿವಾರಿಸಲು ಕಾಂಗ್ರೆಸ್ ವರಿಷ್ಠರು ಯಾವುದೇ ಸಂದರ್ಭದಲ್ಲಿ ನಮಗೆ ಬುಲಾವ್ ಮಾಡಬಹುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಕರಿತೀವಿ ಎಂದು ಹೇಳಿದ್ದಾರೆ, ಕರೀತಾರೆ. ಆ ಸಂದರ್ಭದಲ್ಲಿ ನಾನು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಗೆ ತೆರಳುವುದಾಗಿ ಅವರು ಹೇಳಿದ್ದಾರೆ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೆಹಲಿ ನಾಯಕರು ಕರೆಯದೇ ನಾವು ಹೋಗುವುದಿಲ್ಲ. ಆದರೆ, ಅವರು ಕರೆದೇ ಕರೀತಾರೆ ಎಂದು ಹೇಳಿದರು.

ಪ್ರತಿಕ್ರಿಯೆಗೆ ನಕಾರ: ದಾವಣಗೆರೆಯಲ್ಲಿ ಮುಸ್ಲಿಂ ನಾಯಕರ ಅಮಾನತನ್ನು ವಾಪಸ್ ಪಡೆಯುವ ಬಗ್ಗೆ ಏನೂ ಮಾತನಾಡುವುದಿಲ್ಲ. ಪಕ್ಷ ಈ ತೀರ್ಮಾನ ಮಾಡಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.



ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಯಾಗಿದ್ದ ನಸೀರ್ ಅಹ್ಮದ್ ಅವರಿಗೆ ಪಕ್ಷ ಕೆಲವು ಜವಾಬ್ದಾರಿಗಳನ್ನು ನೀಡಿತ್ತು. ಅದನ್ನು ಅವರು ಸರಿಯಾಗಿ ನಿಭಾಯಿಸಲಿಲ್ಲ. ಈ ಕಾರಣದಿಂದ ಅವರನ್ನು ಕೈ ಬಿಡಲಾಯಿತು ಎಂದರು. ತಮಿಳುನಾಡಿನಲ್ಲಿ ಬಿಜೆಪಿಯನ್ನು ಅಧಿಕಾರದಿಂದ ದೂರ ಇಡಬೇಕು. ಜಾತ್ಯಾತೀತ ಶಕ್ತಿಗಳು ಒಂದಾಗಿರಬೇಕು ಎಂಬ ಉದ್ದೇಶದಿಂದ ಟಿವಿಕೆ ನಮ್ಮ ಪಕ್ಷದ ಬೆಂಬಲ ಕೋರಿದೆ ಎಂದು ಹೇಳಿದರು.

ಟಿಕೆಟ್ ವಿಚಾರಕ್ಕೆ ಸ್ಥಳಾಂತರವಾಗಿಲ್ಲ: ಅಹಮದಾಬಾದ್‌ನಲ್ಲಿ ದೊಡ್ಡ ಕ್ರೀಡಾಂಗಣವಿದೆ. ಹೆಚ್ಚು ಜನ ಸೇರುತ್ತಾರೆ ಎಂಬ ಉದ್ದೇಶದಿಂದ ಐಪಿಎಲ್ ಫೈನಲ್ ಪಂದ್ಯವನ್ನು ಸ್ಥಳಾಂತರ ಮಾಡಿರಬೇಕು. ಶಾಸಕರಿಗೆ ಟಿಕೆಟ್ ವಿತರಣೆಗೂ ಅಂತಿಮ ಪಂದ್ಯ ಸ್ಥಳಾಂತರಕ್ಕೂ ಸಂಬಂಧವಿಲ್ಲ ಎಂದು ಶಿವಕುಮಾರ್ ಸ್ಪಷ್ಟಪಡಿಸಿದರು. ಶಾಸಕರಿಗೆ ಐಪಿಎಲ್ ಟಿಕೆಟ್ ಬೇಡಿಕೆ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ನಡೆಯಬೇಕಿದ್ದ ಐಪಿಎಲ್ ಫೈನಲ್ ಪಂದ್ಯವನ್ನು ಅಹಮದಾಬಾದಿಗೆ ಸ್ಥಳಾಂತರಿಸಲಾಗಿದೆ ಎಂಬ ವಿಚಾರವಾಗಿ ಕೇಳಿದಾಗ, ಬೇರೆ ಕಡೆ ಶೇ.50ರಷ್ಟು ಮೀಸಲಿರುತ್ತದೆ ಎಂದರು.

ಬಿಸಿಸಿಐ ಟಿಕೆಟ್ ವಿಚಾರಕ್ಕೆ ಸ್ಥಳಾಂತರ ನಿರ್ಧಾರ ಮಾಡಿದ್ದೇವೆ ಎಂದು ಹೇಳಿಕೆ ನೀಡಿರುವ ಬಗ್ಗೆ ಕೇಳಿದಾಗ, ಅವರು ಈ ರೀತಿ ಹೇಳಿಕೆ ನೀಡಲಿ, ನಾನು ಅದಕ್ಕೆ ಸರಿಯಾದ ಉತ್ತರ ಕೊಡುತ್ತೇನೆ ಎಂದರು.

ಗ್ಯಾರಂಟಿಯಿಂದ ಗೆಲುವು ಗ್ಯಾರಂಟಿಯಾಗಿದ್ದರೆ ನೀವೇಕೆ 15 ದಿನ ಬಾಗಲಕೋಟೆಗೆ ಪ್ರಚಾರಕ್ಕೆ ಹೋದ್ರಿ...!

ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟಾಂಗ್

ಬೆಂಗಳೂರು, ಮೇ 6(ಕೆಎಂಶಿ)– ಮುಖ್ಯಮಂತ್ರಿಗಳು ಗ್ಯಾರಂಟಿಗಳಿಂದ ಬೀಗುತ್ತಿದ್ದಾರೆ. ನಿಮ್ಮ ಗ್ಯಾರಂಟಿಗಳ ಬಗ್ಗೆ ಅಷ್ಟೊಂದು ವಿಶ್ವಾಸವಿದ್ದರೆ ಮುಖ್ಯಮಂತ್ರಿಗಳು ಯಾಕೆ 15 ದಿನಗಳ ಕಾಲ ಬಾಗಲಕೋಟೆಗೆ ಬಂದು ಕೂರಬೇಕಾಗಿತ್ತು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಪ್ರಶ್ನಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉಪ ಚುನಾವಣೆಯ ಸೋಲಿನಿಂದ ಹತಾಶರಾಗುವ ಪ್ರಶ್ನೆ ಉದ್ಭವಿಸುವುದಿಲ್ಲ. ಪ್ರಧಾನಮಂತ್ರಿ ನರೇಂದ್ರ ಮೋದಿಜೀ ಅವರಂಥ ದಿಟ್ಟ ನಾಯಕತ್ವ ದೇಶಕ್ಕೆ ಸಿಕ್ಕಿದೆ. ಒಬ್ಬ ಯುವ ರಾಷ್ಟ್ರೀಯ ಅಧ್ಯಕ್ಷರಾದ ನಿತಿನ್ ನಬೀನ್ ಜೀ ಅವರು ನೇತೃತ್ವ ವಹಿಸಿಕೊಂಡಿದ್ದಾರೆ. ಅಮಿತ್ ಶಾ ಜೀ ಅವರಂಥ ಚುನಾವಣಾ ಚಾಣಕ್ಯ ನಮ್ಮ ಜೊತೆಗಿದ್ದಾರೆ. ಉಪ ಚುನಾವಣೆ ಸೋಲಿನ ಸಂಬಂಧ ತಲೆಕೆಡಿಸಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದರು.

ಗೃಹಲಕ್ಷ್ಮಿ ಯೋಜನೆ ಇವತ್ತು ಚುನಾವಣಾ ಲಕ್ಷ್ಮಿಯಾಗಿ ಪರಿವರ್ತನೆಯಾಗಿದೆ. ಬಡವರಿಗೆ ಯೋಜನೆಗಳನ್ನು ನೀಡಲಿ. ಇವರೊಬ್ಬರೇ ಯೋಜನೆಗಳನ್ನು ನೀಡಿಲ್ಲ. ಯಡಿಯೂರಪ್ಪನವರು ಹಿಂದೆ ಭಾಗ್ಯಲಕ್ಷ್ಮಿ, ಸಂಧ್ಯಾ ಸುರಕ್ಷಾ, ಬೈಸಿಕಲ್ ಯೋಜನೆಗಳನ್ನು ನೀಡಿದ್ದರು. ಇನ್ನೂ ಹಲವು ಒಳ್ಳೆಯ ಯೋಜನೆ ಕೊಟ್ಟಿದ್ದಾರೆ ಎಂದು ಹೇಳಿದರು.

ಪ್ರತಿ ತಿಂಗಳ ಬದಲು ಅದನ್ನು ತಡೆಹಿಡಿದು ಉಪ ಚುನಾವಣೆಯಲ್ಲಿ ಮೊನ್ನೆ ಬಿಡುಗಡೆ ಮಾಡಿದ್ದಾರೆ. ಇನ್ನು ಮುಂದಿನ ಕಂತನ್ನು ಜಿಪಂ, ತಾಪಂ ಚುನಾವಣೆ ಬಂದಾಗ ಬಿಡುಗಡೆ ಮಾಡಲಿದ್ದಾರೆ.

ಜನರಿಗೆ ಆಮಿಷವೊಡ್ಡುವ ರೀತಿಯಲ್ಲಿ ಯೋಜನೆ ನೀಡುತ್ತಿದ್ದಾರೆ. ಯಡಿಯೂರಪ್ಪನವರು ಮುಖ್ಯಮಂತ್ರಿ ಇದ್ದಾಗ ದೂರದೃಷ್ಟಿಯಿಂದ ಭಾಗ್ಯಲಕ್ಷ್ಮಿ ಯೋಜನೆ ಅನುಷ್ಠಾನಕ್ಕೆ ತಂದಿದ್ದರು. ಈ ಉಪ ಚುನಾವಣೆ ಸೋಲಿನಿಂದ ಬಿಜೆಪಿ ಕಾರ್ಯಕರ್ತರು ಹೆದರಿಕೊಳ್ಳುವ ಪ್ರಶ್ನೆಯೇ ಇಲ್ಲ. ಇವೆಲ್ಲವನ್ನೂ ಮೀರಿ ಸಂಘಟನೆ ಬಲಪಡಿಸುತ್ತೇವೆ. ಹಿರಿಯರ ಆಶೀರ್ವಾದದಿಂದ ರಾಜ್ಯದಲ್ಲಿ ಮತ್ತೆ ಸರ್ಕಾರ ತರುತ್ತೇವೆ ಎಂದು ವಿಶ್ವಾಸದಿಂದ ನುಡಿದರು. ಮತಗಳ್ಳತನದ ವಿರುದ್ಧ ರಾಹುಲ್ ಗಾಂಧಿಯವರು ಪ್ರವಾಸ ಮಾಡಿದ್ದರು. ರಾಜ್ಯ ಹೈಕೋರ್ಟಿನ ಆದೇಶದಂತೆ ಶೃಂಗೇರಿಯಲ್ಲಿ ಮರು ಮತ ಎಣಿಕೆ ನಡೆದು ಬಿಜೆಪಿ ಅಭ್ಯರ್ಥಿ ಜೀವರಾಜ್ ಅವರು ಗೆದ್ದಿದ್ದಾರೆ. ರಾಹುಲ್ ಗಾಂಧಿಯವರು ಈಗ ದೇಶದ ಜನರ ಕ್ಷಮೆ ಕೇಳಬೇಕು. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರು ರಾಜ್ಯದ ಜನರ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

ಡಿಜಿಪಿ ಕೆ.ರಾಮಚಂದ್ರರಾವ್ ಅಮಾನತು ಆದೇಶ ವಾಪಸ್ ಪಡೆದ ಸರ್ಕಾರ!

ಬೆಂಗಳೂರು, ಮೇ 6– ಡಿಜಿಪಿ ಕೆ. ರಾಮಚಂದ್ರ ರಾವ್ ಅವರ ಅಮಾನತು ಆದೇಶವನ್ನು ರಾಜ್ಯ ಸರ್ಕಾರ ಬುಧವಾರ ವಾಪಸ್ ಪಡೆದಿದ್ದು, ತಕ್ಷಣದಿಂದ ಜಾರಿಗೆ ಬರುವಂತೆ ಅವರನ್ನು ಸೇವೆಗೆ ಮರು ಸೇರ್ಪಡೆಗೊಳಿಸಿದೆ. ಅಧಿಕೃತ ಆದೇಶದ ಪ್ರಕಾರ, 1993 ರ ಬ್ಯಾಚ್‌ನ ಐ ಪಿ ಎ ಸ್ ಅಧಿಕಾರಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ (ಪೊಲೀಸ್ ಮ್ಯಾನುಯಲ್) ಆಗಿ ನೇಮಿಸಲಾಗಿದೆ.



ಈ ಹುದ್ದೆಯನ್ನು ಸಿಐಡಿ ಡಿಜಿಪಿ ಹುದ್ದೆಗೆ ಸಮಾನವೆಂದು ಪರಿಗಣಿಸಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಬಿ.ಎಸ್. ಸಂಜಯ್ ಆದೇಶಿಸಿದ್ದಾರೆ. ರಾಮಚಂದ್ರರಾವ್ ಇದೇ 31 ರಂದು ಸೇವೆಯಿಂದ ನಿವೃತ್ತಿ ಆಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಡಿಜಿಪಿಯಾಗಿದ್ದ ರಾಮಚಂದ್ರರಾವ್ , ತಮ್ಮ ಕಚೇರಿಯಲ್ಲಿ ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸಿದ್ದರು ಎಂಬ ಆರೋಪದ ಮೇಲೆ ಜ.19 ರಂದು ಅಮಾನತು ಮಾಡಿ ಪ್ರಕರಣದ ತನಿಖೆಗೆ ಆದೇಶಿಸಲಾಗಿತ್ತು. ಅಮಾನತು ಆದೇಶವನ್ನು ಇದೀಗ ವಾಪಸ್ ಪಡೆದಿರುವ ಸರ್ಕಾರ ತಕ್ಷಣದಿಂದ ಜಾರಿಗೆ ಬರುವಂತೆ ಅವರನ್ನು ಸೇವೆಗೆ ಮರು ಸೇರ್ಪಡೆಗೊಳಿಸಿದೆ. ರಾವ್ ಮಹಿಳೆಯೊಂದಿಗೆ ಆಕ್ಷೇಪಾರ್ಹ ರೀತಿಯಲ್ಲಿ ಇರುವ ವಿಡಿಯೋಗಳು ನ್ಯೂಸ್ ಚಾನೆಲ್ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿಯೂ ವೈರಲ್ ಆಗಿದ್ದವು.

ಅಭಿನಂದನೆ...



ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಕಾರಣವಾದ ಪಂಚಗ್ಯಾರಂಟಿಗಳನ್ನು ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮೈಸೂರಿನ ವಿಮಾನ ನಿಲ್ದಾಣದಲ್ಲಿ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಆತ್ಮೀಯವಾಗಿ ಅಭಿನಂದಿಸಿದರು.

ಗಾಂಜಾ ಸೇವನೆ ; ಯುವಕನ ವಿರುದ್ಧ ಪ್ರಕರಣ ದಾಖಲು

ಮೈಸೂರು, ಮೇ 6(ಪಿಎಂ)– ಗಾಂಜಾ ಸೇವಿಸಿ ತೂರಾಡುತ್ತಾ ರಸ್ತೆಯಲ್ಲಿ ಹೋಗುತ್ತಿದ್ದ ಯುವಕನ ವಿರುದ್ಧ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುಭಾಷ್‌ನಗರದ ಎನ್.ಚಂದನ್ ಕುಮಾರ್ (22) ವಿರುದ್ಧ ಪ್ರಕರಣ ದಾಖಲಾಗಿದ್ದು, ಈತ ಮಂಗಳವಾರ ರಾತ್ರಿ ಹೆಬ್ಬಾಳ ಕೆರೆಯ ರಸ್ತೆಯಲ್ಲಿ ತೂರಾಡುತ್ತಾ ಜೋರಾಗಿ ಮಾತನಾಡಿಕೊಂಡು ಬರುತ್ತಿದ್ದ ಗಸ್ತಿನಲ್ಲಿದ್ದ ಪೊಲೀಸರು, ವಿಚಾರಣೆ ಮಾಡಿದಾಗ, ತಾನು ಸಿಗರೇಟ್‌ನಲ್ಲಿ ಗಾಂಜಾ ಹಾಕಿ ಸೇವನೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ.

ನಿರ್ಮಾಣ ಹಂತದ ಬಡಾವಣೆಗಳಲ್ಲಿ ವಿದ್ಯುತ್ ತಂತಿ ಕಳ್ಳತನ

ಮೈಸೂರು,ಮೇ 6(ಪಿಎಂ)– ನಿರ್ಮಾಣ ಹಂತದ ಬಡಾವಣೆಗಳಲ್ಲಿ ವಿದ್ಯುತ್ ಕಂಬಗಳಿಗೆ ಅಳವಡಿಸಿದ್ದ ಲಕ್ಷಾಂತರ ರೂ. ಮೌಲ್ಯದ ವಿದ್ಯುತ್ ತಂತಿಗಳನ್ನು ಕಳ್ಳತನ ಮಾಡಿರುವ ಸಂಬಂಧ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ಪ್ರಕರಣ 1: ಬನಶಂಕರಿ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ವಿ.ಎ.ಪಾಟೀಲ ಅವರು ನೀಡಿದ ದೂರಿನನ್ವಯ ಮೇ 4ರಂದು ಎಫ್‌ಐಆರ್ ದಾಖಲಾಗಿದೆ. ತಳೂರು ಗ್ರಾಮದ ಸರ್ವೆ ನಂಬರ್ 61ರಿಂದ 67/5, 229/4ರವರೆಗೆ ಸುಮಾರು 40 ಎಕರೆ ಜಮೀನಿನಲ್ಲಿ ಬಡಾವಣೆಯ ಖಾಲಿ ನಿವೇಶನಗಳನ್ನು ಹಂಚಿಕೆ ಮಾಡಿದ್ದು, ಇನ್ನು ಮನೆಗಳನ್ನು ನಿರ್ಮಾಣ ಮಾಡಿಲ್ಲ. ಮೇ 3ರಂದು ಬೆಳಗ್ಗೆ 10ರ ವೇಳೆಗೆ ಸ್ಥಳಕ್ಕೆ ಭೇಟಿ ನೀಡಿದಾಗ, ಬಡಾವಣೆಯಲ್ಲಿ ಅಳವಡಿಸಿದ್ದ ವಿದ್ಯುತ್ ತಂತಿಗಳನ್ನು ಕತ್ತರಿಸಿ ಕಳ್ಳತನ ಮಾಡಿರುವುದು ತಿಳಿಯಿತು. ಹಲವು ದಿನಗಳಿಂದ ಈವರೆಗೆ ಸುಮಾರು ಎರಡೂವರೆ ಕಿ.ಮೀ.ಗಳಷ್ಟು ವಿದ್ಯುತ್ ತಂತಿ ಕಳ್ಳತನ ಮಾಡಲಾಗಿದೆ. ಇದರ ಮೌಲ್ಯ 2,25,000 ರೂ. ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ಪ್ರಕರಣ 2: ಮೈಸೂರು ತಾಲೂಕು ಭುಗತಗಳ್ಳಿ ಗ್ರಾಮದ ಎಲ್ಲೆಗೆ ಸೇರಿದ ಸರ್ವೆ ನಂ. 104/1ರ 3 ಎಕರೆ 32 ಗುಂಟೆಯಲ್ಲಿ ನಿರ್ಮಿಸಿರುವ ಗ್ರೀನ್ ಕೌಂಟಿ ಬಡಾವಣೆಯಲ್ಲಿ ವಿದ್ಯುತ್ ಕಂಬಗಳಿಗೆ ಅಳವಡಿಸಿದ್ದ ವಿದ್ಯುತ್ ತಂತಿಯನ್ನು ಪೂರ್ಣ ಪ್ರಮಾಣದಲ್ಲಿ ಕಳ್ಳತನ ಮಾಡಲಾಗಿದೆ.

ಈ ಸಂಬಂಧ ಬಡಾವಣೆಯ ನಿವೇಶನದಾರರಲ್ಲಿ ಒಬ್ಬರಾದ ವಜ್ರಮುನಿ ಅವರು ನೀಡಿದ ದೂರಿನನ್ವಯ ಪ್ರಕರಣ ದಾಖಲಾಗಿದೆ. ಮೇ 2ರಂದು ಸ್ಥಳಕ್ಕೆ ಭೇಟಿ ನೀಡಿದಾಗ ಕಳ್ಳತನ ಆಗಿರುವುದು ಗೊತ್ತಾಯಿತು. ಕಾವಲಿಗೆ ನೇಮಿಸಿದ್ದ ಕಾವಲುಗಾರ ಕಳೆದ ಮೂರ್‍ನಾಲ್ಕು ತಿಂಗಳ ಹಿಂದೆ ಹೊರಟು ಹೋಗಿದ್ದು, ಅಂದಿನಿಂದ ಯಾರು ಕಾವಲುಗಾರರು ಇರಲಿಲ್ಲ. ಬಡಾವಣೆಯ ನಿವೇಶನದಾರರ ಪರವಾಗಿ ದೂರು ನೀಡುತ್ತಿದ್ದು, ಎರಡೂವರೆ ಕಿ.ಮೀ.ನಲ್ಲಿ ಅಳವಡಿಸಿದ್ದ 2,50,000 ರೂ. ಮೌಲ್ಯದ ವಿದ್ಯುತ್ ತಂತಿಯನ್ನು ಕಳ್ಳತನ ಮಾಡಲಾಗಿದೆ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ಅಗ್ನಿ ಅವಘಡಗಳ ಅಪಾಯದ ಹಿನ್ನೆಲೆ; ಸದಾ ಸಜ್ಜಾಗಿದೆ ಅಗ್ನಿಶಾಮಕ ದಳ

ಮೈಸೂರು, ಮೇ 6(ವಿವಿಹೆಚ್)– ಹೆಚ್ಚುತ್ತಿರುವ ತಾಪಮಾನದಿಂದಾಗಿ ನಗರದಲ್ಲಿ ಅಗ್ನಿ ಅವಘಡಗಳು ಹೆಚ್ಚುತ್ತಲೇ ಇವೆ. ಕಳೆದ ಕೆಲ ದಿನಗಳಿಂದ ಉಷ್ಣಾಂಶ ತೀವ್ರವಾಗಿ ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಮನೆಗಳು, ಅಂಗಡಿಗಳು ಹಾಗೂ ಗೋದಾಮುಗಳಲ್ಲಿ ಬೆಂಕಿ ಕಾಣಿಸಿಕೊಳ್ಳುವ ಘಟನೆಗಳು ವರದಿಯಾಗುತ್ತಿವೆ.

ವಿದ್ಯುತ್ ಶಾರ್ಟ್ ಸರ್ಕ್ಯೂಟ್, ನಿರ್ಲಕ್ಷ್ಯದಿಂದ ಉಂಟಾದ ಬೆಂಕಿ, ಒಣಗಿದ ಹುಲ್ಲು ಮತ್ತು ತ್ಯಾಜ್ಯ ವಸ್ತುಗಳು ಅಗ್ನಿ ಅವಘಡಕ್ಕೆ ಪ್ರಮುಖ ಕಾರಣಗಳಾಗಿದ್ದು, ಇವುಗಳನ್ನು ಗಮನದಲ್ಲಿಟ್ಟುಕೊಂಡು ಅಗ್ನಿಶಾಮಕ ಇಲಾಖೆ ಹಲವಾರು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದೆ.

ನಗರದ ಪ್ರಮುಖ ಪ್ರದೇಶಗಳಲ್ಲಿ ಅಗ್ನಿಶಾಮಕ ವಾಹನಗಳನ್ನು ಸಜ್ಜುಗೊಳಿಸಿ ತುರ್ತು ಸೇವೆಗಳನ್ನು ಬಲಪಡಿಸಲಾಗಿದೆ. ಜೊತೆಗೆ ಸಿಬ್ಬಂದಿಗೆ ವಿಶೇಷ ತರಬೇತಿ ನೀಡಲಾಗಿದ್ದು, ತುರ್ತು ಸಂದರ್ಭಗಳಲ್ಲಿ ವೇಗವಾಗಿ ಪ್ರತಿಕ್ರಿಯಿಸುವ ವ್ಯವಸ್ಥೆಯನ್ನು ಸುಧಾರಿಸಲಾಗಿದೆ. ನಗರದಲ್ಲಿ ಉಂಟಾಗುತ್ತಿರುವ ಅಗ್ನಿ ಅವಘಡಗಳ ಬಗ್ಗೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಆರ್‌ಎಫ್‌ಓ ಪಿ.ಚಂದನ್, ಕಳೆದ 2 ವರ್ಷಗಳಿಂದ ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ ಯಾವುದೇ ಬೆಂಕಿ ಅವಘಡ ಸಂಭವಿಸಿಲ್ಲ. ಅಲ್ಲಲ್ಲಿ ವರದಿಯಾಗಿರುವ ಎಲ್ಲಾ ಅವಘಡಗಳು ಮಾನವ ನಿರ್ಮಿತವಾದದ್ದೇ ಆಗಿದೆ. ಮನುಷ್ಯನ ನಿರ್ಲಕ್ಷ್ಯತೆಯಿಂದಾಗಿ ಈ ರೀತಿಯ ಅವಘಡಗಳು ಸಂಭವಿಸುತ್ತಿವೆ. ಗ್ಯಾಸ್ ಸ್ಫೋಟ, ಬೇಸಿಗೆ ತಾಪಮಾನದಿಂದಾಗಿ ಮಾತ್ರವೇ ಸಂಭವಿಸುತ್ತದೆ ಎಂಬುದು ಸುಳ್ಳು, ಎಲ್ಲಾ ಕಾಲದಲ್ಲಿಯೂ ನಡೆಯುವ ಸಹಜ ಪ್ರಕ್ರಿಯೆ. ಇದು ಮನುಷ್ಯರ ನಿರ್ಲಕ್ಷ್ಯತೆಯಿಂದ ಸಂಭವಿಸುವ ಘಟನೆಯಾಗಿದೆ ಎಂದರು.



ಅಗ್ನಿಶಾಮಕ ಸೇವಾ ಸಪ್ತಾಹದ ಮೂಲಕ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡುತ್ತಿರುವುದು.

ಕೆಲವರು ಮನೆ ಮುಂದೆ ಕಸ–ಕಡ್ಡಿಗಳನ್ನು ಸ್ವಚ್ಛಗೊಳಿಸುವ ಸಂಬಂಧ ಹಾಕುವ ಬೆಂಕಿ ತೀವ್ರತೆ ಪಡೆದು ವಿಕೋಪಕ್ಕೆ ತಿರುಗಿರುವ ಸನ್ನಿವೇಶಗಳು ಇದ್ದು, ಇವೆಲ್ಲವೂ ಬಹುತೇಕ ಮಾನವ ನಿರ್ಮಿತವಾದದ್ದೆ ಆಗಿದೆ. ಅವರ ನಿಯಂತ್ರಣ ಮೀರಿದಾಗ ನಮಗೆ ಮಾಹಿತಿ ನೀಡುತ್ತಾರೆ. ಮೊದಲು ಬೆಂಕಿ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳುವ ಕೆಲಸ ಆಗಬೇಕಿದೆ. ಮನೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಕಿರು ಅಗ್ನಿನಂದಕಗಳನ್ನು ಕಡ್ಡಾಯಗೊಳಿಸಬೇಕು ಎಂದು ತಿಳಿಸಿದರು.

ಮೂರು ವರ್ಷಗಳ ಹಿಂದೆ, ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ನಿವೇಶನ ಸ್ವಚ್ಛಗೊಳಿಸುವ ಉದ್ದೇಶದಿಂದ ಲಲಿತಾದ್ರಿಪುರದಲ್ಲಿ ಬೆಂಕಿ ಹಾಕಿದ್ದರು ಅದು ವಿಕೋಪಕ್ಕೆ ತಿರುಗಿ ಚಾಮುಂಡಿ ಬೆಟ್ಟಕ್ಕೆ ಬೆಂಕಿ ಹರಡಿತ್ತು. ಕಳೆದ 2 ವರ್ಷಗಳಿಂದ ಎಲ್ಲಿಯೂ ಈ ರೀತಿಯ ಅವಘಡಗಳು ದಾಖಲಾಗಿಲ್ಲ. ಡಿಸೆಂಬರ್‌ನಿಂದ ಏಪ್ರಿಲ್‌ವರೆಗೆ ಈ ರೀತಿಯ ಘಟನೆಗಳು ನಡೆಯುವುದು ಹೆಚ್ಚು. ಆದರೆ ಕಳೆದೆರಡು ವರ್ಷಗಳಿಂದ ಯಾವುದೇ ಅನಾಹುತಗಳು ಸಂಭವಿಸಿಲ್ಲ ಎಂದರು.

ಬೆಂಕಿ ಅವಘಡದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಇಲಾಖೆಯಿಂದ ಏ.14 ರಿಂದ 20 ಅಗ್ನಿಶಾಮಕ ಸೇವಾ ಸಪ್ತಾಹ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಇಲಾಖೆಯಿಂದ ಅಣುಕು ಪ್ರದರ್ಶನಗಳನ್ನು ಆಯೋಜಿಸಲಾಗಿದ್ದು, ಶಾಲೆಗಳು, ಕಾಲೇಜುಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಬೆಂಕಿ ತಗುಲಿದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಪ್ರಾಯೋಗಿಕವಾಗಿ ಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು. ಬೆಂಕಿ ಆರಿಸುವ ಸಾಧನಗಳ ಬಳಕೆ, ತುರ್ತು ನಿರ್ಗಮನ ಮಾರ್ಗಗಳ ಅರಿವು ಮತ್ತು ಸುರಕ್ಷತಾ ಕ್ರಮಗಳ ಕುರಿತು ವಿವರವಾಗಿ ತಿಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ಮುಂದುವರಿದು, ಈ ಮೊದಲು 101 ಅಗ್ನಿಶಾಮಕ ಇಲಾಖೆಗೆ ಟೋಲ್ ಫ್ರೀ ನಂಬರ್ ಆಗಿತ್ತು. ಈಗ ಸರ್ಕಾರ ಅಗ್ನಿ, ಪೊಲೀಸ್ ಹಾಗೂ ತುರ್ತು ವಾಹನಗಳಿಗೆ ಸಂಬಂಧಿಸಿದಂತೆ 112 ಟೋಲ್ ಫ್ರೀ ಸಂಖ್ಯೆಗೆ ಕಂಟ್ರೋಲ್ ರೂಮ್ ಇದ್ದು, ತುರ್ತು ಸಂದರ್ಭದಲ್ಲಿ ಸಂಪರ್ಕಿಸಬಹುದಾಗಿದೆ.

ಇನ್ನು ಮೈಸೂರಿಗರಿಗೆ, ನಗರದ ಸರಸ್ವತಿಪುರಂನ ಅಗ್ನಿಶಾಮಕ ಇಲಾಖೆಯ ಕಂಟ್ರೋಲ್ ರೂಮ್ ನಂ.0821–2540970 ಕರೆ ಮಾಡಿ ಮಾಹಿತಿ ನೀಡಬಹುದು ಎಂದೂ ತಿಳಿಸಿದರು.

ಕಳೆದ 2 ವರ್ಷಗಳಿಂದ ಈವರೆಗೆ ಯಾವುದೇ ಬೆಂಕಿ ಅವಘಡಗಳು ಸಂಭವಿಸಿಲ್ಲ. ಮೊದಲು ಬೆಂಕಿ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳುವ ಕೆಲಸ ಆಗಬೇಕಿದೆ. ಮನೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಕಿರು ಅಗ್ನಿನಂದಕಗಳನ್ನು ಹೊಂದಿರಬೇಕು.



–ಪಿ.ಚಂದನ್, ಆರ್‌ಎಫ್‌ಓ, ಅಗ್ನಿಶಾಮಕ ಇಲಾಖೆ.

ನಕ್ಕರೆ ಅದೇ ಸ್ವರ್ಗ

ಒಬ್ಬ ಮಹಿಳೆ ದೇವರನ್ನು ಕೇಳಿದಳು. 'ಓ ದೇವರೇ ಮಹಿಳೆಯರಿಗೆ ಕೆಲ ದೇವಾಲಯಕ್ಕೆ ಪ್ರವೇಶ ಯಾಕೆ ಕೊಡಲ್ಲ?

ದೇವರು : ನಾನು ನಿಮಗೆ ಈಗಾಗಲೇ ಒಬ್ಬ ದೇವರನ್ನು ಕೊಟ್ಟಿದ್ದೇನೆ – ಪತಿದೇವ! ಅವರನ್ನೇ ಕಾಡಿ... ನಮ್ಮನ್ನಲ್ಲ!

ಮೈಸೂರು ಮಿತ್ರ

ಗುರುವಾರ, ಮೇ 7, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಜೀವ ನಮ್ಮ ಮಾತನ್ನು ಕೇಳುವುದಿಲ್ಲ. ಯಾವಾಗ ಬೇಕಾದರೂ ಹಾರಿ ಹೋಗಬಹುದು. ಜೀವನ ನಮ್ಮ ಮಾತನ್ನು ಕೇಳುತ್ತದೆ. ಹೇಗೆ ಬೇಕಾದರೂ ರೂಪಿಸಿಕೊಳ್ಳಬಹುದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಪೀತಾಂಬರ ಉಟ್ಟರೂ ಕೊತ್ತಂಬರಿ ಮಾರೋದು ತಪ್ಪಲಿಲ್ಲ.

ನಿಮ್ಮ ಪತ್ರಗಳು

ಒತ್ತಡ ಪರಿಹಾರಕ್ಕಾಗಿ ಎಲಿವೇಟೆಡ್ ಕಾರಿಡಾರ್ ಅಗತ್ಯವಿದೆ



ಮಾನ್ಯರೆ,

ಒಂದು ನಗರವು ಆರೋಗ್ಯಕರವಾಗಿ ಬೆಳೆಯಲು ದೂರದೃಷ್ಟಿಯ ಯೋಜನೆಗಳನ್ನು ವಿಳಂಬ ಮಾಡದೆ ಅನುಷ್ಠಾನಗೊಳಿಸಬೇಕಿದೆ. ಮುಖ್ಯವಾಗಿ ವಿಶಾಲವಾದ ರಸ್ತೆಗಳು, ವೃತ್ತಗಳು, ಫ್ಲೈಓವರ್‌ಗಳು, ಕೆಳಸೇತುವೆಗಳು, ಉದ್ಯಾನವನಗಳು, ಆಡಿಟೋರಿಯಂಗಳು, ಮಾರುಕಟ್ಟೆಗಳು, ಮೆಟ್ರೊರೈಲು, ರಿಂಗ್ ರೋಡ್‌ಗಳು, ಕಮಾನು ಗೇಟುಗಳು, ಸಾಧಕಗಣ್ಯರ ಪ್ರತಿಮೆಗಳು, ನೆಲದಾಳದಲ್ಲಿನ ಕುಡಿಯುವ ನೀರು ಮತ್ತು ವಿದ್ಯುತ್ ಮಾರ್ಗಗಳು ಹಾಗೂ ಚರಂಡಿ ವ್ಯವಸ್ಥೆ ಇವುಗಳೆಲ್ಲವನ್ನು ಮುಂದಿನ ಶತಮಾನದವರೆಗೂ ತಡೆಯಬಲ್ಲ ಸಾಮರ್ಥ್ಯಕ್ಕೆ ವಿನ್ಯಾಸಗೊಳಿಸಿ ನಿರ್ಮಿಸಿದಾಗಲೇ ನಗರವು ಮಾಲಿನ್ಯಗೊಳ್ಳದೆ ವಾಸಯೋಗ್ಯವಾಗಿರುತ್ತದೆ. ನಮ್ಮ ಮೈಸೂರನ್ನು ಆಳಿದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಆ ನಿಟ್ಟಿನಲ್ಲಿ ಅಭಿವೃದ್ಧಿ ಮಾಡಿದ ಫಲವಾಗಿ ಇಂದಿಗೂ ಮೈಸೂರು ತನ್ನ ಸೌಂದರ್ಯವನ್ನು ಉಳಿಸಿಕೊಂಡಿದೆ. ಈಗ ನಗರವು ವಿಶಾಲವಾಗಿ ಹಾಗೂ ವೇಗವಾಗಿ ಬೆಳೆಯುತ್ತಿದೆ. ಜನದಟ್ಟಣೆ ಮತ್ತು ವಾಹನಗಳ ಸಂಖ್ಯೆ ಹೆಚ್ಚಾಗಿದೆ. ಪ್ರಸ್ತುತ ಇರುವ ರಸ್ತೆಗಳು ಒತ್ತಡವನ್ನು ತಡೆಯಲಾಗುತ್ತಿಲ್ಲ. ಸಾರ್ವಜನಿಕರು ರಸ್ತೆಗಳಲ್ಲಿ ಅಪಘಾತಗಳ ಭಯದಿಂದ ಸಂಚರಿಸುತ್ತಿದ್ದಾರೆ. ಯಶಸ್ವೀ ಯೋಜನೆಗಳಿಗಾಗಿ ಡಿಪಿಆರ್ ತಯಾರಿಕೆಯಲ್ಲಿ ಒಡೆಯರ್ ಅವರ ಜಾಣ್ಮೆ ಇವತ್ತಿನ ಆಡಳಿತಗಾರರಿಗೆ ಬೇಕಾಗಿದೆ.

ವಾಹನಗಳ ಒತ್ತಡ ಪರಿಹಾರಕ್ಕಾಗಿ ಎಲಿವೇಟೆಡ್ ಕಾರಿಡಾರನ್ನು ನಿರ್ಮಿಸಲು ಯೋಜಿಸಿರುವ 20 ವರ್ಷಗಳ ಭವಿಷ್ಯದ ದೂರದೃಷ್ಟಿಯ ವೈಜ್ಞಾನಿಕ ಯೋಜನೆ (ಮೈ.ಮಿತ್ರ ದಿನಾಂಕ:06 ಮೇ 2026)ಯನ್ನು ಪಾರಂಪರಿಕ ಶೈಲಿಯಲ್ಲಿ ವಿನ್ಯಾಸಗೊಳಿಸಿರುವುದು ಉತ್ತಮವಾಗಿದೆ. ಆದರೆ ಕೇವಲ 20 ವರ್ಷಗಳ ದೂರದೃಷ್ಟಿ ಅವೈಜ್ಞಾನಿಕವಾಗಿದೆ ಹಾಗೂ ಕಾರ್ಯಪ್ಪ ವೃತ್ತದಿಂದ ಲಿಂಗದೇವರಕೊಪ್ಪಲುವರೆಗೆ ಸಾಲದು, ಮುಂದೆ ಮತ್ತೇ ಸಮಸ್ಯೆ ಎದುರಾಗುತ್ತದೆ. ಹೊಸ ಬಡಾವಣೆಗಳು ಹುಣಸೂರು ರಸ್ತೆಯಿಂದ ಕೆ.ಆರ್.ನಗರ ಕಡೆಗೆ ಹೋಗುವ ಜಂಕ್ಷನ್‌ವರೆಗೆ ಬೆಳೆಯುತ್ತಿದೆ ಹಾಗೂ ವಾಹನಗಳ ದಟ್ಟಣೆ ಕಾಲಾನುಕಾಲಕ್ಕೆ ವಿಪರೀತ ಏರುವುದರಿಂದ ಅಲ್ಲಿಯವರೆಗೆ ಕಾರಿಡಾರ್ ವಿಸ್ತರಿಸುವುದು ಸೂಕ್ತ. ಈ ಯೋಜನೆ ಬಹಳವೇ ಉಪಯುಕ್ತವಾಗಿರುವುದರಿಂದ ರಾಜಕೀಯ ಪ್ರೇರಣೆ ಅಥವಾ ಇತರೆ ದುರುದ್ದೇಶದಿಂದ ತಡೆಹಿಡಿಯುವುದು ಸಮಂಜಸವಲ್ಲ. ಯೋಜನೆ ತ್ವರಿತವಾಗಿ ಪ್ರಾರಂಭವಾಗಿ ಪೂರ್ಣಗೊಳ್ಳಲು ಎಲ್ಲರ ಸಲಹೆ ಮತ್ತು ಸಹಕಾರ ಅಗತ್ಯವಿದೆ.

–ಮಿರ್ಲೆ ಚಂದ್ರಶೇಖರ, ಯರಗನಹಳ್ಳಿ, ಮೈಸೂರು.

ಶೇ. 5 ರಿಯಾಯಿತಿ ಆಸ್ತಿ ತೆರಿಗೆ ಪಾವತಿ ವಿಸ್ತರಿಸಿ

ಮಾನ್ಯರೆ,

ಮೈಸೂರು ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಾರ್ವಜನಿಕರು ತಮ್ಮ ಆಸ್ತಿ ತೆರಿಗೆಯನ್ನು ಕಟ್ಟಲು ಮೈಸೂರು ಮಹಾನಗರ ಪಾಲಿಕೆಯು ಏಪ್ರಿಲ್ ಒಂದು ತಿಂಗಳಲ್ಲಿ ಮಾತ್ರ ಶೇ.5 ರಷ್ಟು ರಿಯಾಯಿತಿಯನ್ನು ನೀಡುತ್ತದೆ. ಇದರಿಂದಾಗಿ ಸುಮಾರು 120 ಕೋಟಿ ರೂಪಾಯಿ ಏಪ್ರಿಲ್ ತಿಂಗಳಲ್ಲಿ ಸಂಗ್ರಹವಾಗಿದೆ. ಆದರೆ ಈಗ ಕೇವಲ 25 ರಷ್ಟು ಜನರು ಮಾತ್ರ ಆಸ್ತಿ ತೆರಿಗೆಯನ್ನು ಕಟ್ಟಿದ್ದಾರೆ. ಮೇ ಮತ್ತು ಜೂನ್ ತಿಂಗಳಲ್ಲಿ ಆಸ್ತಿ ತೆರಿಗೆಯನ್ನು ಕಟ್ಟುವವರಿಗೆ ಯಾವುದೇ ರಿಯಾಯಿತಿ ಇರುವುದಿಲ್ಲ. ಕೆಲವು ಮಧ್ಯಮ ವರ್ಗದವರು, ಕೆಳ ಮಧ್ಯಮ ವರ್ಗದವರು ಮಕ್ಕಳ ಶಾಲೆಗೆ ಸೇರಿಸಲು ಹಾಗೂ ಇನ್ನಿತರ ಆರ್ಥಿಕ ಸಮಸ್ಯೆಯಿಂದ ಮತ್ತು ಮಾಹಿತಿಯ ಕೊರತೆಯಿಂದ ಏಪ್ರಿಲ್ ತಿಂಗಳಲ್ಲಿ ಆಸ್ತಿ ತೆರಿಗೆಯನ್ನು ಕಟ್ಟಲು ಸಾಧ್ಯವಾಗಿಲ್ಲ. ಶೇ 5 ರಷ್ಟು ತೆರಿಗೆ ವಿನಾಯಿತಿಯನ್ನು ಮೇ ಮತ್ತು ಜೂನ್ ತಿಂಗಳವರೆಗೆ ವಿಸ್ತರಿಸಿ, ಇದರಿಂದ ನಗರ ಪಾಲಿಕೆಗೆ ಯಾವುದೇ ರೀತಿಯಲ್ಲೂ ನಷ್ಟವಾಗುವುದಿಲ್ಲ. ಏಕೆಂದರೆ ಕಳೆದ ವರ್ಷಕ್ಕಿಂತ ಈ ವರ್ಷ ಶೇ 3ರಷ್ಟು ಆಸ್ತಿ ತೆರಿಗೆಯನ್ನು ಹೆಚ್ಚು ಮಾಡಿದ್ದಾರೆ. ಕಳೆದ ಕೆಲವು ವರ್ಷಗಳ ಹಿಂದೆ ಕೋವಿಡ್ ಸಂದರ್ಭದಲ್ಲಿ ಶೇ 5 ರಷ್ಟು ರಿಯಾಯಿತಿ ಮೇ ಮತ್ತು ಜೂನ್ ತಿಂಗಳವರೆಗೆ ನೀಡಿದ್ದರು. ಈ ವರ್ಷವೂ, ಜೂನ್ ತಿಂಗಳವರೆಗೆ ವಿಸ್ತರಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ಈಡೇರಿದ ಭಾರತ್ ಜೋಡೋ ಪಾದಯಾತ್ರೆ ಆಶ್ವಾಸನೆ

ಮಾನ್ಯರೆ,

ಚಾಮರಾಜನಗರ ಆಕ್ಸಿಜನ್ ದುರಂತದಲ್ಲಿ ಮೃತಪಟ್ಟವರ ಕುಟುಂಬದ ಸದಸ್ಯರಿಗೆ ಜಿಲ್ಲಾ ಆಸ್ಪತ್ರೆಯಲ್ಲಿ ಸರಕಾರಿ ಉದ್ಯೋಗ ಪತ್ರ ನೀಡುವ ಮೂಲಕ ರಾಹುಲ್ ಗಾಂಧಿ ಅವರು ಭಾರತ್ ಜೋಡೋ ಪಾದಯಾತ್ರೆಯ ಸಂಧರ್ಭದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಸಂತ್ರಸ್ತರಿಗೆ ಸರಕಾರಿ ಉದ್ಯೋಗ ನೀಡುವುದಾಗಿ ನೀಡಿದ್ದ ಭರವಸೆಯನ್ನು ಈಡೇರಿಸಿರುವುದು ಶ್ಲಾಘನೀಯ. ಎರಡನೇ ಬಾರಿಗೆ 2023 ರಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟ ನಡೆಸಿದ ಎಲ್ಲಾ ಸಂತ್ರಸ್ತರು ಹಾಗೂ ಹೋರಾಟಕ್ಕೆ ಎಸ್‌ಡಿಪಿಐ ಸಂಘಟನೆ ನಿರಂತರವಾಗಿ ಬೆಂಬಲ ನೀಡಿದ ಫಲವಾಗಿ ಸಂತ್ರಸ್ತರ ಬೇಡಿಕೆ ಈಡೇರಿದುದು ಸ್ವಾಗತಾರ್ಹ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಯುಪಿಐ ಸುರಕ್ಷತೆಗೆ ಆರ್‌ಬಿಐ ದಿಟ್ಟ ಹೆಜ್ಜೆ

ಮಾನ್ಯರೆ,

ಡಿಜಿಟಲ್ ವಂಚನೆ ತಡೆಗಟ್ಟಲು 10,000 ಮೇಲ್ಪಟ್ಟ ಯುಪಿಐ ವಹಿವಾಟಿಗೆ ಒಂದು ಗಂಟೆ ಕಾಲಾವಕಾಶ ನೀಡುವ ಆರ್‌ಬಿಐ ಪ್ರಸ್ತಾವನೆ ಸ್ವಾಗತಾರ್ಹ. ಕಳೆದ ವರ್ಷ ಭಾರತದಲ್ಲಿ ಸುಮಾರು 22,931 ಕೋಟಿ ಮೊತ್ತದ ಸೈಬರ್ ವಂಚನೆ ಪ್ರಕರಣಗಳು ವರದಿಯಾಗಿರುವುದು ಕಳವಳಕಾರಿ. ತರಾತುರಿಯಲ್ಲಿ ಹಣ ಕಳುಹಿಸುವಾಗ ಆಗುವ ತಪ್ಪುಗಳನ್ನು ಸರಿಪಡಿಸಲು ಈ ಕಾಲಾವಕಾಶ ಸಂಜೀವಿನಿಯಾಗಲಿದೆ. ದಿನನಿತ್ಯದ ಸಣ್ಣಪುಟ್ಟ ಪಾವತಿಗಳು ಮತ್ತು ನಂಬಿಕಸ್ಥ ವಹಿವಾಟುಗಳಿಗೆ ಇದರಿಂದ ತೊಂದರೆಯಿಲ್ಲದಿರುವುದು ಪಾರದರ್ಶಕತೆಗೆ ಸಾಕ್ಷಿ. ತಾಂತ್ರಿಕ ವೇಗಕ್ಕಿಂತಲೂ ಗ್ರಾಹಕರ ಹಣದ ಸುರಕ್ಷತೆ ಮುಖ್ಯ ಎಂಬ ಆರ್‌ಬಿಐ ನಿಲುವು ಶ್ಲಾಘನೀಯ. ಈ ನಿಯಮವು ಡಿಜಿಟಲ್ ಪಾವತಿ ವ್ಯವಸ್ಥೆಯಲ್ಲಿ ಸಾರ್ವಜನಿಕರ ವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸಿ ಅನುಕೂಲತೆಗೆ ಎಡೆಮಾಡಿ ಕೊಡುತ್ತದೆ. ತಂತ್ರಜ್ಞಾನದ ವೇಗಕ್ಕೆ ವಿವೇಚನೆಯ ಬ್ರೇಕ್ ಹಾಕುವ ಮೂಲಕ ಆರ್‌ಬಿಐ ಸೈಬರ್ ವಂಚಕರ ಸಂಚಿಗೆ ತಡೆಯುವ ಜಾಣ್ಮೆ ಪ್ರದರ್ಶಿಸಿದೆ.

–ಡಾ.ಎಚ್.ಕೆ. ವಿಜಯಕುಮಾರ, ಮೈಸೂರು.



ನಿವೇದಿತ ಎಚ್.
ಇಂಗ್ಲಿಷ್ ಉಪನ್ಯಾಸಕಿ
ಮಹಾರಾಜ ಕಾಲೇಜು
ಮೈಸೂರು.
niveditha.manthana26@gmail.com

ಮಂಥನ

ಡಾ.ರಾಜ್ ಎಂಬ ಅನುದಿನದ ವಿಸ್ಮಯ...

ನನಗೆ ಡಾ.ರಾಜ್‌ಕುಮಾರ್‌ರ ಪರಿಚಯ ಆದದ್ದು ಯಾವಾಗ ಎಂಬ ನೆನಪೇ ಇಲ್ಲ. ಇಂತಹ ಚಿತ್ರ ನೋಡಿಯೋ, ಇಂತಹಾ ಪತ್ರಿಕೆಯಲ್ಲಿ ಓದಿಯೋ ಅವರ ಬಗ್ಗೆ ತಿಳಿಯಿತು ಎಂದು ಹೇಳಲು ಏನೂ ಇಲ್ಲ! ಕಾರಣ, ನಮ್ಮ ಮನೆಯಲ್ಲಿ ಡಾ.ರಾಜ್ ಒಬ್ಬ ಸದಸ್ಯರಂತೆಯೇ ಉಲ್ಲೇಖಿಸಲ್ಪಡುತ್ತಿದ್ದರು, ಪ್ರೇಮಿಸಲ್ಪಡುತ್ತಿದ್ದರು. ಅವರ ಹಾಡುಗಳು ಕ್ಯಾಸೆಟ್‌ನಲ್ಲಿ, ನಮ್ಮ ದನಿಗಳಲ್ಲಿ ಯಾವಾಗಲೂ ನಲಿಯುತ್ತಿದ್ದವು! ಅವರ ಚಿತ್ರಗಳ ಪರಿಚಯ ಮಾತ್ರವಲ್ಲದೆ, ಅದರ ಹಿಂದಿನ ಕತೆಗಳೂ ನಮಗೆ ಚಿರಪರಿಚಿತವಾಗಿದ್ದವು.

ನಮ್ಮ ತಂದೆ ಡಾ.ರಾಜ್ ಕಟ್ಟಾ ಅಭಿಮಾನಿ ಎಂಬುದು ಒಂದು ಕಾರಣವಾದರೆ, ಮತ್ತೊಂದು ಅದು ರಾಜ್ ನಮ್ಮ ಕನ್ನಡ ಮನಸ್ಸುಗಳಲ್ಲಿ ಬೆರೆತಿದ್ದ ಬಗೆಯಾಗಿತ್ತು! ರಾಜ್‌ಕುಮಾರ್ ಎಂದರೆ ಕೇವಲ ಒಬ್ಬ ನಟನಲ್ಲ, ಅವರು ಕನ್ನಡಿಗರ ಹೃದಯಸಾಮ್ರಾಟರಾಗಿದ್ದರು. ಇದು ಉತ್ಪ್ರೇಕ್ಷೆಯ ಮಾತಲ್ಲ. ಕನ್ನಡ ಸಂಸ್ಕೃತಿಯ ಮುಖವಾಣಿಯಾಗಿದ್ದರು.

ನನಗೆ ಚೆನ್ನಾಗಿ ನೆನಪಿದೆ. ಡಾ.ರಾಜ್‌ರ ಜೀವನಚೈತ್ರ, ಆಕಸ್ಮಿಕ ಮತ್ತು ಒಡಹುಟ್ಟಿದವರು ಚಿತ್ರಗಳು ಬಹಳ ವರ್ಷಗಳ ಬಿಡುವಿನ ನಂತರ ಬಂದವು. ಆ ಚಿತ್ರಗಳು ಬಂದಾಗ, ನಮ್ಮ ತಂದೆ, ಎಷ್ಟು ವರುಷಗಳ ನಂತರ ಡಾ.ರಾಜ್ ಧ್ವನಿ ತೆರೆಯ ಮೇಲಿನಿಂದ ಕೇಳಿಸುತ್ತದೆ, ಅವರನ್ನು ಮತ್ತೆ ಕಣ್ಣು ತುಂಬಿಕೊಳ್ಳಬಹುದು ಎಂದು ಅದೆಷ್ಟು ಉತ್ಸಾಹದಿಂದ ಸಂಭ್ರಮಿಸಿದ್ದರು ಎಂಬುದು ಅಂದು ಬಹಳ ಅಚ್ಚರಿ ತಂದಿತ್ತು. ಅವರು ಮಾತ್ರವಲ್ಲ, ಅವರ ತಲೆಮಾರಿನ ಬಹಳ ಜನ ಅಂದು ಹಾಗೆ ಸಂಭ್ರಮಿಸಿದ್ದನ್ನು ನೋಡಿದ್ದೆ. ನಂತರ ಅವರ ಒಂದೊಂದೇ ಸಿನಿಮಾಗಳನ್ನು ನೋಡುತ್ತಾ ಹೋದಮೇಲೆ, ಡಾ.ರಾಜ್‌ಕನ್ನಡ ನಾಡಿನ ಆಸ್ತಿ ಮಾತ್ರವಲ್ಲ, ಅದರ ಹೆಮ್ಮೆ ಎಂಬುದು ಮನವರಿಕೆಯಾಯಿತು.

ಡಾ.ರಾಜ್‌ರ ಹುಟ್ಟು, ಓದು, ವಿದ್ಯಾಭ್ಯಾಸ, ಅಭಿನಯಿಸಿದ ಚಿತ್ರಗಳ ಸಂಖ್ಯೆ, ಅವರಿಗೆ ಸಂದ ಪ್ರಶಸ್ತಿಗಳ ಬಗ್ಗೆ ಬಹುಶಃ ನಮಗೆಲ್ಲರಿಗೂ ಬಾಯಿಪಾಠವೇ ಆಗಿಹೋಗಿದೆ. ಅವುಗಳನ್ನು ಮತ್ತೆ ಹೇಳುವ ಅಗತ್ಯವಿಲ್ಲ.

ಇದೇ ಏಪ್ರಿಲ್ 24ಕ್ಕೆ ಡಾ.ರಾಜ್‌ರ 97ನೇ ಹುಟ್ಟುಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿದೆವು. ಇನ್ನೇನು ಶತಮಾನೋತ್ಸವ ಬಂದೇ ಬಿಟ್ಟಿತು ಎನ್ನುವ ಉತ್ಸಾಹ ತೋರಿ ಅದಕ್ಕಾಗಿ ಕಾಯಲು ಈಗಾಗಲೇ ಪ್ರಾರಂಭಿಸಿರುವ ಜನರಿಗೇನು ಕಡಿಮೆಯಿಲ್ಲ. ರಾಜ್‌ರನ್ನು ಮತ್ತೆ ಮನಃಪಟಲದಲ್ಲಿ ತಂದುಕೊಂಡು ಅವರ ಹಿರಿಮೆ ಗರಿಮೆಗಳನ್ನು ಕೊಂಡಾಡಿ ಎಲ್ಲರೂ ಮನ ತಣಿಸಿಕೊಂಡೆವು. ಅವರ ಭವ್ಯ ವೈವಿಧ್ಯಮಯ ವ್ಯಕ್ತಿತ್ವದ ಚಿತ್ರಣ ಮತ್ತೊಮ್ಮೆ ಕಣ್ಣಮುಂದೆ ಬಂದಿತು.

ಡಾ.ರಾಜ್ ಏನೆಲ್ಲಾ ಆಗಿದ್ದರು?!

ಅವರು ಒಬ್ಬ ಶ್ರೇಷ್ಠ ನಟ. ಇಡೀ ಪ್ರಪಂಚದಲ್ಲಿ ಅವರಷ್ಟು ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸಿದವರು ಇಲ್ಲವೇ ಇಲ್ಲ. ಸಾಮಾಜಿಕ, ಪೌರಾಣಿಕ, ಐತಿಹಾಸಿಕ ಎಲ್ಲ ಬಗೆಯ ಪಾತ್ರಗಳಲ್ಲಿ ಮಿಂಚಿದವರು ಡಾ.ರಾಜ್. ನಮಗೆ ಕೃಷ್ಣ, ಹಿರಣ್ಯಕಶಿಪು, ರಕ್ತಾಕ್ಷ, ವಿಷ್ಣು, ಅರ್ಜುನ, ಬಬ್ರುವಾಹನ ಎಂದರೆ ಡಾ.ರಾಜ್‌ರೇ ನೆನಪಾಗುವುದು. ನಾವ್ಯಾರೂ ಕನಕದಾಸರನ್ನಾಗಲೀ, ಪುರಂದರ ದಾಸರನ್ನಾಗಲೀ, ಸರ್ವಜ್ಞನನ್ನಾಗಲಿ ನೋಡಿಲ್ಲ. ನಮಗೆ ಅನಿಸುವುದು, ಅವರು ಡಾ.ರಾಜ್‌ರ ಹಾಗೇ ಇದ್ದರೇನೋ ಎಂದು! ಇನ್ನು ಪ್ರೇಮಿ, ರೈತ, ಪೊಲೀಸ್, ಬಾಂಡ್, ಸಂಸಾರಿ, ಪ್ರಾಧ್ಯಾಪಕ ಮಾತ್ರವಲ್ಲದೇ, ಕಳ್ಳನಾಗಿಯೂ ತೆರೆಯ ಮೇಲೆ ಬಂದವರು ಡಾ.ರಾಜ್‌ಕುಮಾರ್! ಯಾವುದೇ ಪಾತ್ರ ಮಾಡಿದರೂ ಆ ಪಾತ್ರದ ವ್ಯಕ್ತಿತ್ವವನ್ನು ಆವಾಹಿಸಿಕೊಂಡು ಬಿಡುತ್ತಿದ್ದರೆಂಬುದು ಅವರನ್ನು ನೋಡಿದವರು ಹೇಳುವ ಮಾತು ಮತ್ತು ಅದು ನೂರಕ್ಕೆ ನೂರು ಸತ್ಯವೆಂದು ನಮಗೆ ಗೊತ್ತು. ಹಿರಣ್ಯಕಶಿಪು ಪಾತ್ರದಲ್ಲಿದ್ದ ಡಾ.ರಾಜ್‌ರನ್ನು ನೋಡಿ ಪ್ರಹ್ಲಾದನ ಪಾತ್ರದಲ್ಲಿದ್ದ ಪುನೀತ್ ಅಮ್ಮನ ಹಿಂದೆ ಅವಿತು, ಅಪ್ಪಾಜಿಗೆ ಹಾಗೆ ನೋಡಬೇಡವೆಂದು ಹೇಳು, ಭಯವಾಗುತ್ತಿದೆ ಎಂದು ಹೇಳಿದರಂತೆ!

ಕನ್ನಡದಲ್ಲಿ ಪರಭಾಷಾ ಗಾಯಕರದೇ ಅಂದು ದರ್ಬಾರ್ ಇದ್ದದ್ದು. ಪಿ.ಬಿ.ಶ್ರೀನಿವಾಸ್ (ಪಿಬಿಎಸ್) ಅವರನ್ನು ಡಾ.ರಾಜ್‌ರ ಶಾರೀರ ಎನ್ನುತ್ತೇವಾದರೂ, ಗಾಯನಕ್ಕೆ ಕಾಲಿಟ್ಟ ಡಾ.ರಾಜ್ ನಮಗೆ ನೀಡಿದ ಹಾಡುಗಳು ಅಜರಾಮರ. ರೋಮ್ಯಾಂಟಿಕ್, ವಿರಹ, ಸಿಟ್ಟು, ಚೇಷ್ಟೆ, ಭಕ್ತಿ, ಶೃಂಗಾರ, ಹಾಸ್ಯಮಯ, ತುಂಟತನ ಪ್ರೇಮ, ಸಾಹಸಮಯ, ರೋಷಮಯ ಹಾಡುಗಳು ಡಾ.ರಾಜ್‌ರ ಗಾಯನ ಶಕ್ತಿಯನ್ನು ಒರೆಗೆ ಹಚ್ಚಿದವು. ಎಂತಹುದೇ ಗೀತೆಯನ್ನು ಲೀಲಾಜಾಲವಾಗಿ ರಾಜ್ ಹಾಡುತ್ತಿದ್ದರಾದರೂ, ಅದಕ್ಕೆ ಬೇಕಾದ ಅಪಾರ ಪರಿಶ್ರಮ ಸಾಧನೆ ಅವರ ಗುಟ್ಟು. ನಾದಮಯಾ... ಹಾಡಿಗೆ



> ರಾಜ್‌ಕುಮಾರ್ ಅವರು ಸಮಾಜಸೇವೆಯಲ್ಲಿ ತೊಡಗಿದ್ದವರು. ಮೈಸೂರಿನಲ್ಲಿಯೇ ಇರುವ ಶಕ್ತಿಧಾಮ ಅದಕ್ಕೊಂದು ಶ್ರೇಷ್ಠ ಉದಾಹರಣೆ. ಸಹಾಯ ಕೇಳಿ ಬಂದವರನ್ನು ಎಂದೂ ಬರಿಗೈಲಿ ಕಳಿಸುತ್ತಿರಲಿಲ್ಲ ಎನ್ನುವುದು ಒಂದಾದರೆ, ಚಲನ ಚಿತ್ರರಂಗದಲ್ಲಿ ಯಾರದೇ ಮದುವೆಯಾದರೂ ಡಾ.ರಾಜ್, ಹೊಸ ಮದುಮಕ್ಕಳಿಗೆ ಹೊಸ ಸಂಸಾರ ಪ್ರಾರಂಭಿಸಲು ಬೇಕಾಗುವಷ್ಟು ಇಡಿಗಂಟನ್ನು ಕಳಿಸುತ್ತಿದ್ದರಂತೆ. ಅನೇಕ ಸಂಘ ಸಂಸ್ಥೆಗಳ ಉಳಿವಿಗಾಗಿ, ವಿವಿಧ ಸಾಮಾಜಿಕ ಒಳಿತಿನ ಕಾರ್ಯಗಳಿಗಾಗಿ ಉಚಿತವಾಗಿ ರಸಸಂಜೆಗಳನ್ನು ನಡೆಸಿಕೊಡುತ್ತಿದ್ದರು. ಇನ್ನು ತಮ್ಮ ಕಣ್ಣುಗಳನ್ನು ದಾನ ಮಾಡುವ ಅವರ ನಿರ್ಧಾರ ಅದೆಷ್ಟು ಜನರನ್ನು ಪ್ರೇರೇಪಿಸಿತೋ ಲೆಕ್ಕವಿಲ್ಲ.

ರಾಷ್ಟ್ರ ಪ್ರಶಸ್ತಿಯೂ ಸಂದಿತು, ಭಾರತೀಯ ಚಲನಚಿತ್ರ ರಂಗದಲ್ಲಿಯೇ ಒಬ್ಬ ನಟನಿಗೆ ಗಾಯನಕ್ಕೆ ಪ್ರಶಸ್ತಿ ಎಂದೂ ಸಿಕ್ಕಿರಲಿಲ್ಲ. ಇಂದಿಗೂ ಆ ಸಾಧನೆ ರಾಜ್‌ರ ಹೆಸರಿನಲ್ಲಿಯೇ ಇದೆ!

ನಮ್ಮ ಜೀವನದ ಎಲ್ಲ ಸಂದರ್ಭಗಳಿಗೂ ರಾಜ್ ಹಾಡುಗಳನ್ನು ಕೊಟ್ಟಿದ್ದಾರೆ. ಮೈಸೂರು ದಸರಾ ಎಷ್ಟೊಂದು ಸುಂದರಾ... ಹಾಡಿಲ್ಲದೆ ದಸರಾ ಇಲ್ಲವೇ ಇಲ್ಲ. ನಾವಾಡುವ ನುಡಿಯೇ ಕನ್ನಡ ನುಡಿ... ಗೀತೆ ನಮ್ಮ ರಾಜ್ಯದ ಆಂಥೆಮ್ ಎಂದರೆ ಒಪ್ಪದ ಕನ್ನಡಿಗನಿಲ್ಲ. ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು... ಪ್ರತಿ ಕನ್ನಡಿಗನ ಹೃದಯದಾಶಯವನ್ನು ಬಿಂಬಿಸುವ ಗೀತೆ. ಯಾವ ಕವಿಯೂ ಬರೆಯಲಾರ... ಗೀತೆ ಕೇಳಿದ ಪ್ರತಿ ಹೆಣ್ಣಿಗೂ ಇಂತಹ ಪ್ರಿಯಕರ, ಪತಿ ತನ್ನವನಾಗಬೇಕೆಂಬ ನವಿರಾದ ಆಸೆ ಹುಟ್ಟಿ ಕಣ್ಣು ಮಿನುಗುತ್ತದೆ! ಅಮ್ಮನ ಬಗೆಗಂತೂ ರಾಜ್‌ರ ಅದೆಷ್ಟು ಭಕ್ತಿ ಮತ್ತು ಪ್ರೀತಿ ತುಂಬಿದ ಹಾಡುಗಳಿವೆ. ಮುತ್ತು ಕೊಡುವೆ ಕಂದನೇ... ಸಿಹಿಮುತ್ತು ಸಿಹಿಮುತ್ತು ನಂಗೊಂದು... ಹಾಡುಗಳು ಮುದ್ದು ಉಕ್ಕಿಸುವಂತಹವು ಹೇಳುತ್ತಾ ಹೋದರೆ ಇದಕ್ಕೆ ಕೊನೆಯೆಲ್ಲಿ!

ಇನ್ನೊಂದು ಚಿಕ್ಕ ಉದಾಹರಣೆ ನಾನು ಹೇಳದೇ ಇರಲಾರೆ. ಮಯೂರ ಚಿತ್ರದ ನಾನಿರುವುದೇ ನಿಮಗಾಗಿ... ಹಾಡು. ಆ ಹಾಡಿನಲ್ಲಿ ನಾನಾ ಭಾವಗಳಿವೆ. ಸಹೃದಯ ರಾಜನೊಬ್ಬ ತನ್ನ ಪ್ರಜೆಗಳ ಕಷ್ಟಕ್ಕೆ ಮಿಡಿಯುವ ಸುಂದರ ಗೀತೆ ಅದು. ಅಲ್ಲಿ ಮಯೂರ, ಪ್ರಜೆಗಳ ಕಷ್ಟ ನೋಡಿ ನೊಂದು ಅವರನ್ನು ಸಂತೈಸುವ ಮಾತೃ ಹೃದಯಿ ಆಗುತ್ತಾನೆ. ಅವರ ಕಷ್ಟಕ್ಕೆ ಪ್ರತೀಕಾರ ತೀರಿಸಿಕೊಳ್ಳುವ ಧೀರ ವಾಗ್ದಾನ ನೀಡುವ ವೀರನಾಗುತ್ತಾನೆ. ಧೈರ್ಯ ತುಂಬುವ ಬಂಧುವಾಗುತ್ತಾನೆ. ಎಲ್ಲರಿಗೂ ಅಭಯ ನೀಡುವ ರಾಜನೂ ಆಗಿ ಕಾಣುತ್ತಾನೆ. ಈ ಎಲ್ಲ ಭಾವವೈವಿಧ್ಯ ಆ ಹಾಡಿನಲ್ಲಿ ಬಂದುಹೋಗುತ್ತದೆ. ರಾಜ್ ಸಮರ್ಥವಾಗಿ ಆ ಎಲ್ಲ ಭಾವಗಳನ್ನು ತುಂಬಿ ಅದೆಷ್ಟು ಆಪ್ತವಾಗಿ ಹಾಡಿದ್ದಾರೆ. ಕೇಳುತ್ತಿದ್ದರೆ ಕಣ್ಣುಗಳಲ್ಲಿ ನೀರು ಅನಾಯಾಸವಾಗಿ ತುಂಬಿಕೊಳ್ಳುತ್ತದೆ. ಇದಕ್ಕಿಂತಾ ಇನ್ನಾವ ಸಾಮರ್ಥ್ಯ ಒಬ್ಬ ಗಾಯಕನಿಗಿರಬೇಕು. ಅವರ ಅಸಂಖ್ಯಾತ ಹಾಡುಗಳಲ್ಲಿ ಇದು ನನಗಿಷ್ಟವಾದ ಅನೇಕ ಹಾಡುಗಳಲ್ಲಿ ಒಂದು. ಅವರ ಎಲ್ಲ ಗೀತೆಗಳೂ ಹೀಗೆಯೇ ಅತ್ಯುತ್ತಮ. ಅವರು ಹಾಡಿರುವ ಭಕ್ತಿಗೀತೆಗಳು ಇಂದಿಗೂ ಪ್ರಾತಿನಿಧಿಕ ಎಂಬಂತಾಗಿವೆ. ಗಣಪತಿ, ಶಾರದೆ, ಹನುಮಂತ, ಅಯ್ಯಪ್ಪ, ಮಂಜುನಾಥನ ಮೇಲಿನ ಹಾಡುಗಳನ್ನು ಎಲ್ಲರೂ ಕೇಳಿದ್ದೇವೆ. ಭಾವಗೀತೆಗಳಿಗೂ ಡಾ.ರಾಜ್ ದನಿಯಾಗಿದ್ದಾರೆ.

ಇನ್ನು ರಾಜ್‌ಕುಮಾರ್ ಅವರು ಸಮಾಜಸೇವೆಯಲ್ಲಿ ತೊಡಗಿದ್ದವರು. ಮೈಸೂರಿನಲ್ಲಿಯೇ ಇರುವ ಶಕ್ತಿಧಾಮ ಅದಕ್ಕೊಂದು ಶ್ರೇಷ್ಠ ಉದಾಹರಣೆ. ಸಹಾಯ ಕೇಳಿ ಬಂದವರನ್ನು ಎಂದೂ ಬರಿಗೈಲಿ ಕಳಿಸುತ್ತಿರಲಿಲ್ಲ ಎನ್ನುವುದು ಒಂದಾದರೆ, ಚಲನಚಿತ್ರರಂಗದಲ್ಲಿ ಯಾರದೇ ಮದುವೆಯಾದರೂ ಡಾ.ರಾಜ್, ಹೊಸ ಮದುಮಕ್ಕಳಿಗೆ ಹೊಸ ಸಂಸಾರ ಪ್ರಾರಂಭಿಸಲು ಬೇಕಾಗುವಷ್ಟು ಇಡಿಗಂಟನ್ನು ಕಳಿಸುತ್ತಿದ್ದರಂತೆ. ಅನೇಕ ಸಂಘ ಸಂಸ್ಥೆಗಳ ಉಳಿವಿಗಾಗಿ, ವಿವಿಧ ಸಾಮಾಜಿಕ ಒಳಿತಿನ ಕಾರ್ಯಗಳಿಗಾಗಿ ಉಚಿತವಾಗಿ ರಸಸಂಜೆಗಳನ್ನು ನಡೆಸಿಕೊಡುತ್ತಿದ್ದರು. ಇನ್ನು ತಮ್ಮ ಕಣ್ಣುಗಳನ್ನು ದಾನ ಮಾಡುವ ಅವರ ನಿರ್ಧಾರ ಅದೆಷ್ಟು ಜನರನ್ನು ಪ್ರೇರೇಪಿಸಿತೋ ಲೆಕ್ಕವಿಲ್ಲ.

ಸಾಮಾಜಿಕ ಬದ್ಧತೆ ಮತ್ತು ಜವಾಬ್ದಾರಿ ಉಳ್ಳವರಾಗಿದ್ದ ಡಾ.ರಾಜ್, ಮಾಸ್ತಿ ಅವರ 'ಸುಬ್ಬಣ್ಣ' ನೀಳ್ಗಥೆಯನ್ನು ಮಾಡಲು ನಿರಾಕರಿಸಿದ್ದನ್ನು ಹಿಂದೆಯೇ ಬರೆದಿದ್ದೇನೆ. 'ಬಂಗಾರದ ಮನುಷ್ಯ' ಮಾಡಿದ ಮೋಡಿ, ಅದು ಸೃಷ್ಟಿಸಿದ ಬದಲಾವಣೆಯ ಪರ್ವ ಅಭೂತಪೂರ್ವ. ಚಿತ್ರಗಳಲ್ಲಿ ಮದ್ಯಪಾನ, ಧೂಮಪಾನದ ದೃಶ್ಯಗಳನ್ನು ಡಾ.ರಾಜ್ ಎಂದಿಗೂ ಮಾಡಿದವರಲ್ಲ. ಗೋಕಾಕ್ ಚಳುವಳಿಗೆ ಆನೆಬಲ ಬಂದದ್ದು, ಡಬ್ಬಿಂಗ್ ವಿರೋಧಿ ಚಳುವಳಿಗೆ ಜಯ ದೊರೆತದ್ದು ರಾಜ್‌ರ ಹೋರಾಟದಿಂದಲೇ. ಯುವಜನತೆಗೆ ಉತ್ತಮ ಸಂದೇಶ ನೀಡುವ, ಕೌಟುಂಬಿಕ ಮೌಲ್ಯಗಳನ್ನು ಎತ್ತಿಹಿಡಿಯುವ ಅದೆಷ್ಟು ಚಿತ್ರಗಳನ್ನು ಡಾ.ರಾಜ್ ಮಾಡಿದ್ದಾರೆ.

ಮತ್ತೊಂದು ವಿಶೇಷ ಏನೆಂದರೆ, ರಾಜ್‌ರ 200ಕ್ಕೂ ಹೆಚ್ಚು ಚಿತ್ರಗಳಲ್ಲಿ, ಕಾದಂಬರಿಯಾಧಾರಿತ ಚಿತ್ರಗಳ ಸಂಖ್ಯೆ 30ಕ್ಕಿಂತಾ ಹೆಚ್ಚು. ರಾಜ್‌ಕುಮಾರ್ ಅವರೇ, ಕನ್ನಡದ ಪ್ರಪ್ರಥಮ ಕಾದಂಬರಿಯಾಧಾರಿತ ಚಿತ್ರ 'ಕರುಣೆಯೇ ಕುಟುಂಬದ ಕಣ್ಣು' ಚಿತ್ರದಲ್ಲಿ ನಟಿಸಿದ್ದು. ಕನ್ನಡದ ಅತ್ಯುತ್ತಮ ಕೃತಿಗಳನ್ನು ತೆರೆಯ ಮೇಲೆ ತಂದು, ಕನ್ನಡ ಚಲನಚಿತ್ರ ಪ್ರೇಮಿಗಳಿಗೆ ಸಾಹಿತ್ಯದ ರುಚಿಯನ್ನೂ ಹೆಚ್ಚಿಸಿದರು. ಕತೆಗಾಗಿ ಕನ್ನಡ ಸಾಹಿತ್ಯದ ಕಡೆಗೆ ಮುಖಮಾಡಿ ಎಂಬ ಅಲಿಖಿತ ಕರೆಯನ್ನು ಕೊಟ್ಟರು. ಇದರಿಂದ ಎಷ್ಟೋ ಉತ್ತಮ ಕೃತಿಗಳು ಚಲನಚಿತ್ರಗಳಾಗಿ ರಸಿಕರ ಮನತಣಿಸಿದವು.

ಇಂದು ಬರುತ್ತಿರುವ ಬಹುತೇಕ ಚಿತ್ರಗಳು ಮನೆಮಂದಿಯೆಲ್ಲಾ ಕುಳಿತು ನೋಡಲು ಅರ್ಹವೇ ಅಲ್ಲ. ಇಂದು ಡಾ.ರಾಜ್‌ರಂತಹ ಬದ್ಧತೆಯುಳ್ಳ ನಟರ ಕೊರತೆ ಎದ್ದು ಕಾಣುತ್ತಿದೆ. ಮತ್ತೆ ಅವರ ಚಿತ್ರಗಳನ್ನು ಬಿಡುಗಡೆ ಮಾಡಿ, ಇಂದಿನ ಯುವ ಜನಾಂಗ ಅದನ್ನು ನೋಡುವಂತಾದರೆ, ಎಷ್ಟೋ ಉತ್ತಮ ಬದಲಾವಣೆಗಳು ಸಮಾಜದಲ್ಲಿ ಆಗುತ್ತವೆ.

ಇಂತಹ ಮೇರು ವ್ಯಕ್ತಿತ್ವದ ಡಾ.ರಾಜ್ ಬಗ್ಗೆ ಇತ್ತೀಚೆಗೆ ಒಬ್ಬ ಅಪಕ್ವ ವಿಚಾರವಾದಿ ಬಾಯಿ ಹರಿಬಿಟ್ಟಿದ್ದನ್ನು ನೋಡಿದ ಮೇಲೆ, ಮತ್ತೆ ಇವೆಲ್ಲ ನೆನಪಾದವು. ಎಲ್ಲರಿಗೂ ಡಾ.ರಾಜ್ ಗೊತ್ತು, ಅವರ ಬಗ್ಗೆ ಗೊತ್ತು, ಮತ್ತೆ ಬರೆಯಬೇಕೇಕೆ ಎಂದುಕೊಂಡಿದ್ದೆ. ಆದರೆ ಆತನ ಮೂರ್ಖತನದ ಮಾತುಗಳನ್ನು ಕೇಳಿದ ಮೇಲೆ ನಮ್ಮ ರಾಜ್ ಮತ್ತೊಮ್ಮೆ ಮನಃಪಟಲದ ಮೇಲೆ ಮೂಡಿದರು. ವಿಶೇಷವೆಂದರೆ, ಆತ ಹಾಗೆ ಮಾತನಾಡಿದಾಗ, ಅವರ ಕುಟುಂಬದ ಸದಸ್ಯರಾಗಲೀ, ನೆಂಟರಾಗಲೀ ಅದರ ವಿರುದ್ಧ ಹೇಳಿಕೆಯಾಗಲೀ, ಸ್ಪಷ್ಟನೆಯನ್ನಾಗಲೀ ನೀಡಲಿಲ್ಲ. ಬದಲಿಗೆ ಅವರ ಅಭಿಮಾನಿ ದೇವರುಗಳು, ಆತನಿಗೆ ಮಾತಿನ ಪೆಟ್ಟು ನೀಡಿ ರಾಜ್‌ರ ಪ್ರಾಮುಖ್ಯತೆಯ ಬಗ್ಗೆ ಅರಿವು ಮೂಡಿಸಲೆತ್ನಿಸಿದರು. ಅಲ್ಲಿಗೇ ಅರ್ಥವಾಗುತ್ತದೆ, ರಾಜ್ ಕೇವಲ ಅವರ ಕುಟುಂಬದ ಆಸ್ತಿಯಲ್ಲ, ಇಡೀ ಕನ್ನಡ ನಾಡಿನ ಆಸ್ತಿ ಎನ್ನುವುದು.

ಮೇ10ಕ್ಕೆ ಬೆಂಗಳೂರಿಗೆ ಪ್ರಧಾನಿ ಮೋದಿ: ಆರ್ಟ್ ಆಫ್ ಲಿವಿಂಗ್ ಆಶ್ರಮಕ್ಕೆ ಭೇಟಿ..!

ಬೆಂಗಳೂರು: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೇ 10ರಂದು ಬೆಂಗಳೂರಿಗೆ ಭೇಟಿ ನೀಡಲಿದ್ದು, ಈ ಭೇಟಿ ವೇಳೆ ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಅಂತಾರಾಷ್ಟ್ರೀಯ ಕೇಂದ್ರಕ್ಕೆ ಭೇಟಿ ಎಂದು ತಿಳಿದುಬಂದಿದೆ.

ಈ ವರ್ಷ ಆರ್ಟ್ ಆಫ್ ಲಿವಿಂಗ್ ತನ್ನ 45ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದು, ಸಂಸ್ಥೆಯ ಸ್ಥಾಪಕ ಶ್ರೀ ಶ್ರೀ ರವಿಶಂಕರ್ ಅವರು ತಮ್ಮ 70ನೇ ಹುಟ್ಟುಹಬ್ಬವನ್ನೂ ಇದೇ ಸಂದರ್ಭದಲ್ಲಿ ಆಚರಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಆಶ್ರಮದಲ್ಲಿ ವಿಶೇಷ ಕಾರ್ಯಕ್ರಮಗಳು ಆಯೋಜಿಸಲಾಗುತ್ತಿವೆ.



ಕಾರ್ಯಕ್ರಮದ ಭಾಗವಾಗಿ ಪ್ರಧಾನಿ ಮೋದಿ ಅವರು ಆಶ್ರಮಕ್ಕೆ ಭೇಟಿ ನೀಡುತ್ತಿದ್ದು, ಇದೇ ವೇಳೆ ಆಶ್ರಮದ ಆವರಣದಲ್ಲಿ ನಿರ್ಮಿಸಲಾದ ಹೊಸ ಧ್ಯಾನ ಮಂದಿರವನ್ನು ಉದ್ಘಾಟಿಸಲಿದ್ದಾರೆ. ಈ ಧ್ಯಾನ ಮಂದಿರವು ಯೋಗ ಮತ್ತು ಧ್ಯಾನ ಅಭ್ಯಾಸಗಳಿಗೆ ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ ಎಂದು ತಿಳಿದುಬಂದಿದೆ.

ಆರ್ಟ್ ಆಫ್ ಲಿವಿಂಗ್ ಫೌಂಡೇಷನ್ ಕಳೆದ 45 ವರ್ಷಗಳಲ್ಲಿ ಯೋಗ, ಧ್ಯಾನ ಹಾಗೂ ಆಧ್ಯಾತ್ಮಿಕ ಶಿಕ್ಷಣದ ಜೊತೆಗೆ ಸಾಮಾಜಿಕ ಕಾರ್ಯಗಳಲ್ಲಿಯೂ ಮಹತ್ವದ ಪಾತ್ರವಹಿಸಿದೆ. ನದಿ ಪುನರುಜ್ಜೀವನ, ಶಿಕ್ಷಣ ಅಭಿವೃದ್ಧಿ ಮತ್ತು ವಿಪತ್ತು ನಿರ್ವಹಣೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ. 150ಕ್ಕೂ ಹೆಚ್ಚು ದೇಶಗಳಲ್ಲಿ ತನ್ನ ಚಟುವಟಿಕೆಗಳನ್ನು ವಿಸ್ತರಿಸಿರುವ ಈ ಸಂಸ್ಥೆ, ಮಾನವೀಯ ಮೌಲ್ಯಗಳ ಪ್ರಸಾರ ಹಾಗೂ ಸಮುದಾಯ ಸೇವೆಯಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದೆ.

ಬಿವಿಎ ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ಆರಂಭ

ಮೈಸೂರು: ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ಸ್ ವತಿಯಿಂದ 2026–27ನೇ ಸಾಲಿನ ಚಿತ್ರಕಲೆಯಲ್ಲಿ ದೃಶ್ಯಕಲಾಮೂಲ, ಬಿವಿಎ ಪದವಿ ಕೋರ್ಸ್‌ಗಳ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ ಉತ್ತೀರ್ಣ ಅಥವಾ ಅನುತ್ತೀರ್ಣರಾದ ವಿದ್ಯಾರ್ಥಿಗಳು ಪ್ರವೇಶ ಪಡೆಯಬಹುದು. ಅರ್ಜಿ ಸಲ್ಲಿಸಲು ಮೇ 12 ಕೊನೆಯ ದಿನ. ಮಾಹಿತಿಗೆ ಮೊ:9844775238, 9742918181 ಸಂಪರ್ಕಿಸಿ.

ಮನೆ ಮುಂದೆ ನಿಲ್ಲಿಸಿದ್ದ ಬೈಕ್‌ಗಳಿಗೆ ದುಷ್ಕರ್ಮಿಯಿಂದ ಬೆಂಕಿ; ಕ್ಯಾಮರಾದಲ್ಲಿ ಕೃತ್ಯ ಸೆರೆ

ಮೈಸೂರು, ಮೇ 6(ಎಂಟಿವೈ)– ದುಷ್ಕರ್ಮಿಯೊಬ್ಬ ಮನೆ ಮುಂದೆ ನಿಲ್ಲಿಸಿದ್ದ 2 ಬೈಕ್‌ಗಳ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿರುವ ಘಟನೆ ಮಧ್ಯರಾತ್ರಿ ಮೈಸೂರಿನ ಗಾಂಧಿನಗರದಲ್ಲಿ ನಡೆದಿದೆ.

ಗಾಂಧಿನಗರದ ಅಣ್ಣಮ್ಮ ದೇವಾಲಯ ರಸ್ತೆಯ 1ನೇ ಕ್ರಾಸ್‌ನ ನಿವಾಸಿಗಳಾದ ಶರತ್ ಮತ್ತು ಮಂಜುನಾಥ್ ಎಂಬುವರ 2 ಬೈಕ್‌ಗಳಿಗೆ ಉದ್ದೇಶಪೂರ್ವಕವಾಗಿಯೇ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಪರಾರಿಯಾಗುತ್ತಿರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಹೆಲ್ಮೆಟ್ ಧರಿಸಿದ್ದ ದುಷ್ಕರ್ಮಿಯೊಬ್ಬ ಪೆಟ್ರೋಲ್ ತುಂಬಿದ ಬಾಟಲ್ ಹಿಡಿದು ಮಧ್ಯರಾತ್ರಿ 1.08 ನಿಮಿಷಕ್ಕೆ ಅಣ್ಣಮ್ಮ ದೇವಾಲಯದ ರಸ್ತೆಗೆ ಆಗಮಿಸಿದ್ದಾನೆ. 2 ಮನೆ ಕಾಂಪೌಂಡ್ ಒಳಗೆ ಇಣುಕಿ ನೋಡಿದ್ದಾನೆ. ಕೆಲ ಸಮಯದ ನಂತರ ಮನೆ ಮುಂದೆ ನಿಲ್ಲಿಸಿದ್ದ ಹೋಂಡಾ ಡ್ರೀಮ್ ಯುಗ ಬೈಕ್ ಹಾಗೂ 15 ದಿನಗಳ ಹಿಂದಷ್ಟೇ ಖರೀದಿಸಿರುವ ಟಿವಿಎಸ್ ರೈಡರ್ 125 ಸಿಸಿ ಬೈಕ್ ಮೇಲೆ ಪೆಟ್ರೋಲ್ ಸುರಿದಿದ್ದಾನೆ. ಬಳಿಕ ಕಡ್ಡಿ ಪೊಟ್ಟಣದಿಂದ ಬೆಂಕಿ ಹಚ್ಚಿ ಓಡಲಾರಂಭಿಸಿದ್ದಾನೆ. ದುಷ್ಕರ್ಮಿಯ ಕೃತ್ಯ ಮನೆಯ ಮುಂದೆ ಅಳವಡಿಸಿರುವ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.



ಹೆಲ್ಮೆಟ್ ಧರಿಸಿ ಪೆಟ್ರೋಲ್ ತರುತ್ತಿದ್ದಾನೆ.



ಬೈಕ್ ಮೇಲೆ ಪೆಟ್ರೋಲ್ ಸುರಿಯುತ್ತಾನೆ.



ಬೆಂಕಿಕಡ್ಡಿ ಹಚ್ಚಿ ಬೈಕ್ ಮೇಲೆ ಎಸೆಯುತ್ತಿದ್ದಾನೆ.



ಬೈಕ್‌ಗೆ ಬೆಂಕಿ ಹಚ್ಚಿ ಪರಾರಿಯಾಗುತ್ತಿದ್ದಾನೆ.

ಯುಗಾದಿ ದಿನವೇ ಬೆಂಕಿ: ಈ ಹಿಂದೆ ಟೀಚರ್ಸ್ ಲೇಔಟ್‌ನಲ್ಲಿ ವಾಸವಿದ್ದ ಮಂಜುನಾಥ್ ತಿಂಗಳ ಹಿಂದಷ್ಟೇ ಕುಟುಂಬ ಸದಸ್ಯರೊಂದಿಗೆ ಗಾಂಧಿನಗರದ ಅಣ್ಣಮ್ಮ ದೇವಾಲಯದ ರಸ್ತೆಗೆ ಶಿಫ್ಟ್ ಆಗಿದ್ದರು. ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವ ಮಂಜುನಾಥ್, ಈ ಹಿಂದೆ ಹೊಸ ಟಿವಿಎಸ್ ರೈಡರ್ 125 ಸಿಸಿ ಬೈಕ್ ಖರೀದಿಸಿದ್ದರು. ಆದರೆ ಮನೆ ಮುಂದೆ ನಿಲ್ಲಿಸಿದ್ದ ಹೊಸ ಬೈಕ್ ಯುಗಾದಿ ಹಬ್ಬದ ದಿನ ರಾತ್ರಿ ಬೆಂಕಿಗೆ ಆಹುತಿಯಾಗಿತ್ತು. ಆದರೆ, ಬೆಂಕಿಗೆ ಕಾರಣ ತಿಳಿದುಬಂದಿರಲಿಲ್ಲ. ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿರಬಹುದೆಂದು ನಿರ್ಧರಿಸಿ, ಕಂಪನಿ ವತಿಯಿಂದ 15 ದಿನಗಳ ಹಿಂದಷ್ಟೇ ಹೊಸ ಬೈಕ್ ರೀಪ್ಲೇಸ್ ಮಾಡಲಾಗಿತ್ತು ಇದೀಗ ಆ ಬೈಕ್ ಅನ್ನು ದುಷ್ಕರ್ಮಿ ಸುಟ್ಟು ಹಾಕಿದ್ದಾನೆ. ಇದರಿಂದ ಈ ಹಿಂದೆಯೂ ಈ ದುಷ್ಕರ್ಮಿಯೇ ಬೈಕ್‌ಗೆ ಬೆಂಕಿ ಹಾಕಿರಬಹುದು ಎಂಬ ಅನುಮಾನ ಮೂಡಿದೆ. ಎನ್.ಆರ್.ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಗುರುವಾರ 7 ಮೇ 2026

ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳ ಉತ್ತಮ ಫಲಿತಾಂಶ: ಅಭಿನಂದನೆ



ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಅವರು ಶಿಕ್ಷಣ ಸಚಿವ ಮಧು ಬಂಗಾರಪ್ಪ ಮತ್ತು ಇಲಾಖೆ ಅಧಿಕಾರಿಗಳಿಗೆ ಶುಭಾಶಯಗಳನ್ನು ಕೋರಿದರು.

ಮೈಸೂರು, ಮೇ 6(ಜಿಎ)–ರಾಜ್ಯದಲ್ಲಿ ದ್ವಿತೀಯ ಪಿಯುಸಿ ಮತ್ತು ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಲ್ಲಿ ಫಲಿತಾಂಶವು ಅತ್ಯುತ್ತಮ ರೀತಿಯಲ್ಲಿ ಬಂದಿರುವ ಹಿನ್ನೆಲೆಯಲ್ಲಿ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಅವರು ಶಿಕ್ಷಣ ಸಚಿವ ಮಧು ಬಂಗಾರಪ್ಪ ಮತ್ತು ಇಲಾಖೆ ಅಧಿಕಾರಿಗಳಿಗೆ ಶುಭಾಶಯಗಳನ್ನು ಕೋರಿದರು.

ಬೆಂಗಳೂರಿನ ಕಚೇರಿಯಲ್ಲಿ ಭೇಟಿಯಾದ ಅವರು, ಪ್ರಾಂಶುಪಾಲರು, ಕ್ಷೇತ್ರ ಶಿಕ್ಷಣಾಧಿಕಾರಿ, ಪ್ರೌಢಶಾಲಾ ಮುಖ್ಯೋಪಾಧ್ಯಯರ ಹಾಗೂ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಪದೋನ್ನತಿ ನೀಡುವ ವಿಚಾರವಾಗಿ ಅವರೊಂದಿಗೆ ಚರ್ಚಿಸಿ, ಈ ಪ್ರಕ್ರಿಯೆಯನ್ನು ಕೂಡಲೇ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿ ವರ್ಗದವರಿಗೆ ಸೂಚಿಸುವಂತೆ ಸಚಿವರಿಗೆ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದರು ಮನವಿ ಮಾಡಿಕೊಂಡರು.

ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವರು ಸಂಬಂಧಪಟ್ಟ ಅಧಿಕಾರಿ ವರ್ಗದವರಿಗೆ ಅಲ್ಲಿಯೇ ಸೂಕ್ತ ನಿರ್ದೇಶನ ನೀಡಿ ಕಾಲಕಾಲಕ್ಕೆ ಬಡ್ತಿ ಪ್ರಕ್ರಿಯೆಯನ್ನು ಕೈಗೊಳ್ಳುವಂತೆ ತಿಳಿಸಿದರು.

ಗಂಡನಿಗೆ ಕೆಲಸ ಕೊಡಿಸಲು ಇನ್ಸ್ಟಾಗ್ರಾಂ ಜಾಹೀರಾತು ನಂಬಿ 37.35 ಲಕ್ಷ ರೂ. ಹಣ ಕಳೆದುಕೊಂಡ ಗೃಹಿಣಿ

ಮೈಸೂರು, ಮೇ 6(ಜಿಎ)–ಗಂಡನಿಗೆ ಕೆಲಸ ಹುಡುಕುತ್ತಿದ್ದ ಗೃಹಿಣಿಯೊಬ್ಬರು ಇನ್ಸ್ಟಾಗ್ರಾಂನಲ್ಲಿ ಬಂದ ಜಾಹಿರಾತು ನಂಬಿ ಬರೋಬ್ಬರಿ 37.35 ಲಕ್ಷ ರೂ. ಕಳೆದುಕೊಂಡಿರುವ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಹಣ ಕಳೆದುಕೊಂಡಿರುವ ಗೃಹಣಿಯ ಪತಿಯೂ ಮೊದಲು ಇಂಗ್ಲೆಂಡ್‌ನಲ್ಲಿ ಕೆಲಸ ಮಾಡಿಕೊಂಡಿದ್ದರು. ಅನಾರೋಗ್ಯದ ಕಾರಣ 2025ರ ಆಗಸ್ಟ್‌ನಲ್ಲಿ ಕೆಲಸ ಬಿಟ್ಟು ಭಾರತಕ್ಕೆ ಬಂದಿದ್ದಾರೆ. ನಂತರ ನವೆಂಬರ್‌ನಿಂದ ಗೃಹಿಣಿ ಪತಿಗಾಗಿ ಕೆಲಸದ ಹುಡುಕಾಟದಲ್ಲಿದ್ದ ಸಂದರ್ಭದಲ್ಲಿ ಇನ್ಸ್ಟಾಗ್ರಾಂನಲ್ಲಿ ಸೆಂಟ್ರಲ್ ಪಾರ್ಕ್ ಹೋಟೆಲ್ ಯುಕೆಯಲ್ಲಿ ಶೇಫ್ ಕೆಲಸ ಖಾಲಿ ಇರುವುದಾಗಿ ಜಾಹಿರಾತು ಬಂದಿರುತ್ತದೆ. ಅದನ್ನು ನೋಡಿ ಎಲ್ಲಾ ಮಾಹಿತಿಯನ್ನು ಕಲೆಹಾಕಿಕೊಂಡು ಜಾಹಿರಾತಿನಲ್ಲಿದ್ದ ವಾಟ್ಸಾಪ್ ನಂಬರ್‌ಗೆ ಮೆಸೇಜ್ ಮಾಡಿದ್ದಾರೆ.



ನಂತರ ಮತ್ತೊಂದು ನಂಬರ್ ನೀಡಿ ಓಂ ಪ್ರಕಾಶ್ ಎಂಬುವರನ್ನು ಸಂಪರ್ಕಿಸಿ ಎಂದು ಮತ್ತೊಂದು ನಂಬರ್ ನೀಡಿದ್ದು, ಅವರನ್ನು ಸಂಪರ್ಕಿಸಿದಾಗ ಆತ ಇದೇ ನಂಬರ್‌ಗೆ ನಿಮ್ಮ ಬಯೋಡಾಟವನ್ನು ಕಳಿಸಿ ಎಂದು ತಿಳಿಸಿ ಮತ್ತು ನೋಂದಣಿಗಾಗಿ ಮೊದಲು 24,999 ರೂ ಕಳುಹಿಸುವಂತೆ ತಿಳಿಸಿದ್ದು ಅದರಂತೆ ಅಷ್ಟು ಹಣವನ್ನು ಪಾವತಿಸಿದ್ದಾರೆ. ನಂತರ 2025ರ ಡಿಸೆಂಬರ್ 4ರಂದು ವೀಸಾಗಾಗಿ 1.86,200 ಹಣವನ್ನು ಪಾವತಿಸುವಂತೆ ತಿಳಿಸಿದ್ದಾರೆ. ಅದರಂತೆ ತಮ್ಮ ಬ್ಯಾಂಕ್ ಖಾತೆಯಿಂದ ಹಣವನ್ನು ಪಾವತಿಸಿದ್ದಾರೆ. ತದನಂತರ ಇನ್ಸೂರೆನ್ಸ್ ವಿಮೆಗೆ 7,50 ಲಕ್ಷ ರೂ ಪಾವತಿಸುವಂತೆ ಬ್ರಿಟಿಷ್ ಹೈಕಮಿಷನ್ ಮತ್ತು ಹೆಚ್‌ಆರ್ ಸೆಂಟ್ರಲ್ ಪಾರ್ಕ್ ಹೋಟೆಲ್‌ನಿಂದ ಇ–ಮೇಲ್ ಮಾಡಿದ್ದಾರೆ. ಸದರಿ ಹಣವನ್ನು ತನ್ನ ಗಂಡನ ಖಾತೆ ಹಾಗೂ ಅಣ್ಣನ ಹೆಂಡತಿ ಬ್ಯಾಂಕ್ ಖಾತೆಯಿಂದ ಅವರು ಹೇಳಿದ ಖಾತೆಗೆ ವರ್ಗಾವಣೆ ಮಾಡಿದ್ದಾರೆ. ನಂತರ ಕೆಲಸದ ಬಗ್ಗೆ ವಿಚಾರಿಸಿದಾಗ ನೀವು ಕೆಲಸದ ಬಗ್ಗೆ ಹೆದರಬೇಡಿ ನಾವು ನಿಮ್ಮೊಂದಿಗೆ ಇದ್ದೇವೆ ಎಂದು ನಂಬಿಕೆ ಮೂಡಿಸಿದ್ದಾರೆ.

ಮತ್ತೆ ವಾಟ್ಸಾಪ್ ಕರೆ ಮಾಡಿ ಸ್ಪಾನ್ಸರ್‌ಶಿಫ್ ಸರ್ಟಿಫಿಕೇಟ್ ಮತ್ತು ಬೈಯೋಮೆಟ್ರಿಕ್ ರೆಸಿಡೆನ್ಸ್ ಪರ್ಮಿಟ್ ಪಡೆಯಬೇಕಾಗಿರುವುದರಿಂದ ಯುಕೆಯಲ್ಲಿರುವ ಬ್ಯಾಂಕ್‌ನಲ್ಲಿ ಖಾತೆ ತೆರೆಯಬೇಕು ಎಂದು ಹೇಳಿ 26 ಲಕ್ಷ ರೂ ಹಣ ಪಾವತಿಸುವಂತೆ ಸೂಚಿಸಿದ್ದಾರೆ. ಅದರಂತೆ ಹಂತ ಹಂತವಾಗಿ ಅವರು ಸೂಚಿಸಿದ ಖಾತೆಗೆ ಹಣ ಪಾವತಿಸಿದ್ದಾರೆ. ಪರೀಕ್ಷೆಗಾಗಿ 4.50 ಲಕ್ಷ ರೂ. ಪಾವತಿಸುವಂತೆ ತಿಳಿಸಿದ್ದು, ಅದಕ್ಕೆ ಗೃಹಿಣಿ ಒಪ್ಪಿಕೊಂಡಿರುವುದಿಲ್ಲ. ಅದಕ್ಕೆ ಓಂ ಪ್ರಕಾಶ್ ಎಂಬುವವರು ನಾನೇ ಹಣ ತೆಗೆದುಕೊಂಡು ಭಾರತಕ್ಕೆ ಬರುತ್ತೇನೆ. ನಿಮ್ಮ ಪರೀಕ್ಷೆ ಪಾಸ್ ಮಾಡಿಸಲು ಎಂದು ವಾಟ್ಸಾಪ್ ಮೂಲಕ ತಿಳಿಸಿದ್ದಾರೆ.

2026ರ ಏ.27ರಂದು ಓಂ ಪ್ರಕಾಶ್ ಎಂಬುವರು ದೆಹಲಿ ವಿಮಾನ ನಿಲ್ದಾಣಕ್ಕೆ ಹಣ ತೆಗೆದುಕೊಂಡು ಬಂದಿದ್ದೇನೆ. ಇಲ್ಲಿ ಕಸ್ಟಂ ಅಧಿಕಾರಿಗಳು ಹಿಡಿದುಕೊಂಡಿದ್ದಾರೆ ಆದ್ದರಿಂದ ನೀವು 95 ಸಾವಿರ ರೂ. ಪಾವತಿಸಿ ಎಂದು ತಿಳಿಸಿದ್ದಾರೆ. ಅದನ್ನು ನಂಬಿ ಪಾವತಿಸಿದ್ದಾರೆ. ಮತ್ತೆ 1.80 ಲಕ್ಷ ರೂ ಪಾವತಿಸುವಂತೆ ತಿಳಿಸಿದಾಗ ಅವರ ಬಳಿ ಹಣವಿಲ್ಲದ ಕಾರಣ ಸಂಬಂಧಿಕರ ಬಳಿ ಹಣಕ್ಕಾಗಿ ಕೇಳಿದಾಗ ನಡೆದ ವಿಚಾರವನ್ನು ವಿವರಿಸಿದಾಗ ತಮಗೆ ಮೋಸ ಆಗಿರುವುದು ತಿಳಿದು ತಕ್ಷಣ 1930ಗೆ ಕರೆ ಮಾಡಿ ದೂರು ಸಲ್ಲಿಸಿದ್ದಾರೆ.


ದೇಶದಲ್ಲಿ ಹಿಂದೂ ಧರ್ಮ ಎಂಬುದೇ ಇಲ್ಲ...

ಹಿರಿಯ ಸಾಹಿತಿ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಪ್ರತಿಪಾದನೆ

ಮೈಸೂರು,ಮೇ6(ಎಂಕೆ)–ಹಿಂದೂ ಧರ್ಮ ಎಂಬುದನ್ನು ಕೇವಲ ರಾಜಕಾರಣಕ್ಕಾಗಿ ಬಳಸಲಾಗುತ್ತಿದೆಯೇ ಹೊರತು, ಇಂತಹ ಧರ್ಮವೇ ಈ ದೇಶದಲ್ಲಿ ಇಲ್ಲ ಎಂದು ಹಿರಿಯ ಸಾಹಿತಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಹೇಳಿದರು.

ಮೈಸೂರಿನ ಕಲಾಮಂದಿರದಲ್ಲಿ ಬುಧವಾರ ನಡೆದ ಶಿವಯೋಗಿ ಸಿದ್ದರಾಮೇಶ್ವರ ಜಯಂತಿಯಲ್ಲಿ 2025–26ನೇ ಸಾಲಿನ 'ಕಾಯಕ ಯೋಗಿ ಸಿದ್ದರಾಮೇಶ್ವರ ಪ್ರಶಸ್ತಿ' ಸ್ವೀಕರಿಸಿ ಮಾತನಾಡಿದ ಅವರು, ಈ ದೇಶದೊಳಗೆ ಚಾತುರ್ವರ್ಣ ವ್ಯವಸ್ಥೆ ಅರ್ಥಾತ್ ವೈದಿಕ ವ್ಯವಸ್ಥೆ ಯನ್ನು ಹಿಂದೂ ಧರ್ಮ ಎಂದು ಇತ್ತೀಚೆಗೆ ಕರೆಯುತ್ತಿದ್ದಾರೆ. ಹಿಂದೂ ಎನ್ನುವುದು ಮಧ್ಯಕಾಲೀನ ಸಂದರ್ಭದಲ್ಲಿ ಹುಟ್ಟಿಕೊಂಡಂತಹ ಒಂದು ಶಬ್ದವನ್ನು ಮುನ್ನಡೆಗೆ ತರಲು ತೊಡಗಿದ್ದಾರೆ. ಹಿಂದೂ ಧರ್ಮ ಎಂಬುದನ್ನು ಕೇವಲ ರಾಜಕಾರಣಕ್ಕಾಗಿ ಬಳಸಲಾಗುತ್ತಿದೆಯೇ ಹೊರತು ಹಿಂದೂ ಧರ್ಮ ಎನ್ನುವುದು ಈ ದೇಶದಲ್ಲೇ ಇಲ್ಲ ಎಂದರು.

ಆ ಹಿಂದೂ ಧರ್ಮ ಎನ್ನುವುದರಿಂದ ಚಾತುರ್ವರ್ಣ ವ್ಯವಸ್ಥೆಯಲ್ಲಿನ ಮೇಲು–ಕೀಳು ಮತ್ತು ಶ್ರೇಷ್ಠ–ಕನಿಷ್ಠವೆಂಬ ಅಸಮಾನತೆಯನ್ನು ನಿವಾರಿಸುವುದಕ್ಕೆ ಸಾಧ್ಯವಾಗಿಲ್ಲ. ಹಾಗಾಗಿಯೇ ಜೈನ, ಬೌದ್ಧ, ಸಿಖ್ ಇನ್ನಿತರೆ ಅನೇಕ ಪಂಥಗಳು, ಧರ್ಮಗಳು ಅದರ ವಿರುದ್ಧವಾಗಿ ಹುಟ್ಟಿದವು. ಆದರೆ, ಅದ್ಯಾವುದೂ ವೈದಿಕವನ್ನು ನೇರವಾಗಿ ಎದುರಿಸಲಿಲ್ಲ. ಪರ್ಯಾಯವಾಗಿ ಜೀವನ ಧರ್ಮವನ್ನು ಹೇಳಿಕೊಟ್ಟವು. ಈ ದೇಶದೊಳಗೆ ವೈದಿಕವನ್ನು ನೇರವಾಗಿ ಎದುರಿಸಿದ ಒಂದೇ ಒಂದು ಧರ್ಮ ವೆಂದರೆ ಅದು ಲಿಂಗಾಯತ ಧರ್ಮ. ಶರಣ ಧರ್ಮ ಎಂದರು.



ಪ್ರೊ.ಸಿದ್ದರಾಮಯ್ಯ

ಶರಣರು ವೈದಿಕದ ಪಥ್ಯಗಳನ್ನು ತಿರಸ್ಕರಿಸುತ್ತಾರೆ. ವೇದ, ಆಗಮ, ಪುರಾಣ, ಶ್ರುತಿ, ಸ್ಮೃತಿ, ತರ್ಕ ಇಷ್ಟನ್ನೂ ಕೂಡ ಸಾರಾಸಗಟಾಗಿ ವಚನಕಾರರು, ಲಿಂಗಾಯತರು ತಿರಸ್ಕರಿಸುತ್ತಾರೆ. ದುರಂತ ಎಂದರೆ, ಇತ್ತೀಚಿನ ದಿನಗಳಲ್ಲಿ ಏನಾಗಿದೆ ಎಂಬುದಕ್ಕೆ ಶರಣ ಚಳುವಳಿಯನ್ನು ಅಧ್ಯಯನ ಮಾಡುತ್ತಾ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಿದೆ ಎಂದು ವಿಷಾದಿಸಿದರು.

ಶರಣ ಸಿದ್ದರಾಮೇಶ್ವರರ 'ನಮ್ಮ ನಡಾವಳಿಗೆ ನಮ್ಮ ಪುರಾತನರ ನುಡಿಗಳೇ ಇಷ್ಟವಯ್ಯಾ, ವೇದಗಳು ವಾಯುವ ಹೊಂದಲಿ. ಆಗಮಗಳು ಸಮುದ್ರವ ಸೇರಲಿ. ಸ್ಮೃತಿಗಳು ವೈಕುಂಠವ ಸೇರಲಿ. ನಮ್ಮ ಪುರಾತನ ನುಡಿಗಳು ಕಪಿಲ ಸಿದ್ಧ ಮಲ್ಲಿಕಾರ್ಜುನ ಹೃದಯದೊಳು ಗ್ರಂಥಿಯಾಗಲಿ' ಎಂಬ ವಚನದಲ್ಲಿ ಇಡೀ ವಚನ ಚಳುವಳಿಯ ಆಶಯವನ್ನು ಬಿಂಬಿಸಲಿದೆ. ಪುರಾತನರು ಎಂದರೆ ಸನಾತರಿಗೆ ಪರ್ಯಾಯವಾಗಿ ಬಂದ ಪರಂಪರೆ ವಕ್ತಾರರು, ಪರಂಪರೆಯ ದಾತಾರರು ಎಂದರು.

ಪರಂಪರೆ ಎನ್ನುವುದು ಹಳೆಯದಲ್ಲ. ಪರಂಪರೆ ಎನ್ನುವುದು ಅರಿವನ್ನು ಪಡೆಯುವತ್ತಾ ನಿತ್ಯ ನೂತನವಾಗಿ ವರ್ತಮಾನದೊಳಗೆ ಸದಾ ಪ್ರವಹಿಸುವುದಾಗಿದೆ. ಈ ಪರಂಪರೆಯ ವಕ್ತಾರರನ್ನ ಶರಣರು, ಪುರಾತನರು ಎಂದಿದ್ದಾರೆ. ಪುರಾತನರು ಸನಾತನ ಎನ್ನುವುದನ್ನು ತಿರಸ್ಕರಿಸುತ್ತಾ ಸನಾತನ ಎಂದರೆ ಶಾಶ್ವತ ಎಂದರ್ಥ. ಶಾಶ್ವತ ಎಂದರೆ ಜಡ, ಜಡ ಸ್ಥಾವರವಾದದ್ದು ಮತ್ತು ಸತ್ತು ಹೋದದ್ದು ಎಂಬ ಅರ್ಥದಲ್ಲಿ ಹೇಳುತ್ತಾರೆ. ಆದ್ದರಿಂದ ಸನಾತನ ಎನ್ನುವುದು ಸ್ಥಗಿತವಾಗಿರುವುದು, ಜಡವಾಗಿರುವುದು, ಚೈತನ್ಯಶೀಲವಾಗಿರುವುದಲ್ಲ ಎಂದು ತಿಳಿಸಿದರು.

ಈ ಪುರಾತನರ ನುಡಿಗಳು ಅರ್ಥಾತ್ ವಚನಗಳು, ನಮ್ಮ ಅನುದಿನದ ನಡೆ–ನುಡಿಗೆ ಬೇಕಾಗಿವೆ ಎಂದು ಸಿದ್ದರಾಮೇಶ್ವರರು ಹೇಳುತ್ತಾರೆ. ಶರಣ ಧರ್ಮಕ್ಕೆ ಪುರಾತನರ ನುಡಿಗಳು ಹೃದಯಗಳ ನಾಳಗಳು ಇದ್ದಂತೆ ಎಂಬ ವೈಜ್ಞಾನಿಕ ಮಾತುಗಳನ್ನು ಸಿದ್ದರಾಮೇಶ್ವರರು ತಮ್ಮ ವಚನದಲ್ಲಿ ಹೇಳಿದ್ದಾರೆ. ಇವತ್ತು ಎಲ್ಲಿದ್ದಾರೆ ಸಿದ್ದರಾಮೇಶ್ವರ... ಎಲ್ಲಿದ್ದಾರೆ ಬಸವಣ್ಣ ಎಂದು ಹುಡುಕಿದರೆ, ಯಾರು ಈ ಚಾತುರ್ವರ್ಣ ವ್ಯವಸ್ಥೆಯ ವಿರುದ್ಧವಾದ ಹೆಜ್ಜೆಯನ್ನು ಇಟ್ಟಿದ್ದಾರೋ.. ಅದನ್ನು ತಿರಸ್ಕರಿಸಿ ಎಲ್ಲರನ್ನೂ ಒಳಗೊಳ್ಳು ವಂತೆ ಬದುಕನ್ನು ಕಟ್ಟಿಕೊಳ್ಳುತ್ತಿದ್ದಾರೋ ಅವರೇ ಬಸವಾನುಯಾಯಿಗಳು ಎಂದು ವಿಶ್ಲೇಶಿಸಿದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಮೇ6– ವಿವಿ ಮೊಹಲ್ಲಾ ಉಪವಿಭಾಗ ವ್ಯಾಪ್ತಿಯ ಭೂಗತ ಕೇಬಲ್ ಕೆಲಸದ ನಿಮಿತ್ತ ಮೇ 7 ರಂದು ಬೆಳಗ್ಗೆ 10 ಗಂಟೆಯಿಂದ



ಸಂಜೆ 5 ಗಂಟೆಯವರೆಗೆ ಯಾದವಗಿರಿ ಪರಮಹಂಸ ರಸ್ತೆ (1ನೇ ಮೇನ್ ಯಿಂದ 5ನೇ ಮೇನ್) ವಿವೇಕಾನಂದ ಮುಖ್ಯರಸ್ತೆ, ಯಾದವಗಿರಿ 1ನೇ–2ನೇ ಮೇನ್, ದೋಬಿ ಘಾಟ್, ರೈಲ್ವೇ ಲೋಕ ಕಾಲೋನಿ, ಯಾದವಗಿರಿ ಚರ್ಚ್ ರಸ್ತೆ, ರೈಲ್ವೇ ಆಸ್ಪತ್ರೆ, ದಾಸಪ್ರಕಾಶ್ ಹೋಟೆಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಕೆಐಎಡಿಬಿ ಲೇಔಟ್, ಮಿಲಿಟರಿ ಕ್ವಾಟ್ರಸ್ ಸುತ್ತಮುತ್ತ, ನಿಸರ್ಗ ಲೇಔಟ್, ಚಿತ್ರಾ ರೆಸಿಡೆನ್ಸಿ ಹಿಂಭಾಗ, ಲಕ್ಷ್ಮೀಕಾಂತನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಶಾಸಕರ ಉಚಿತ ಟಿಕೆಟ್ ವ್ಯಾಮೋಹದಿಂದ ಐಪಿಎಲ್ ಫೈನಲ್ ಬೆಂಗಳೂರಿಂದ ಅಹಮದಾಬಾದ್‌ಗೆ ಶಿಫ್ಟ್!

ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ವಾಗ್ದಾಳಿ

ಬೆಂಗಳೂರು, ಮೇ 6(ಕೆಎಂಶಿ)– ವಿವಿಐಪಿ ಪಾಸ್‌ಗಳ ಹಪಾಹಪಿ ಹಾಗೂ ಶಾಸಕರ ಉಚಿತ ಟಿಕೆಟ್ ವ್ಯಾಮೋಹದಿಂದಾಗಿ ಬೆಂಗಳೂರಿನಲ್ಲಿ ನಡೆಯಬೇಕಿದ್ದ ಐಪಿಎಲ್ ಫೈನಲ್ ಪಂದ್ಯ ಅಹಮದಾಬಾದ್ ಪಾಲಾಗಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ರಾಜ್ಯ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.



ನಿಖಿಲ್ ಕುಮಾರಸ್ವಾಮಿ

ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ನಮ್ಮ ರಾಜ್ಯದ ನಾಯಕರಿಗೆ ಅಭಿನಂದನೆಗಳು. ಕೇವಲ ತಮ್ಮ ವಿವಿಐಪಿ ಪಾಸ್‌ಗಳ ಹಪಾಹಪಿಯಿಂದಾಗಿ ನಮ್ಮೂರಿನಲ್ಲಿ ನಡೆಯಬೇಕಿದ್ದ ಫೈನಲ್ ಪಂದ್ಯವನ್ನು ಅಹಮದಾಬಾದ್‌ಗೆ ಉಡುಗೊರೆಯಾಗಿ ನೀಡಿದ್ದೀರಿ ಎಂದು ವ್ಯಂಗ್ಯವಾಡಿದ್ದಾರೆ.

ನಾನು ಅಂದೇ ಹೇಳಿದ್ದೆ, ಇಂದೂ ಅದನ್ನೇ ಪುನರುಚ್ಚರಿಸುತ್ತಿದ್ದೇನೆ. ಕ್ರೀಡಾಂಗಣವಿರುವುದು ಕ್ರಿಕೆಟ್ ಅಭಿಮಾನಿಗಳಿಗಾಗಿ ಹೊರತು ವಿಐಪಿಗಳಿಗಾಗಿ ಅಲ್ಲ. ನಮ್ಮ ಕೆಲವು ಶಾಸಕರ ಉಚಿತ ಟಿಕೆಟ್ ವ್ಯಾಮೋಹದಿಂದಾಗಿ ಇಂದು ಐಪಿಎಲ್ ಫೈನಲ್ ಬೆಂಗಳೂರಿನಿಂದ ಕೈತಪ್ಪಿ ಹೋಗಿದೆ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ಬಿಸಿಸಿಐನ ನಿರ್ಧಾರವನ್ನು ಉಲ್ಲೇಖಿಸಿರುವ ಅವರು ಬಿಸಿಸಿಐ ತೆಗೆದುಕೊಂಡಿರುವ ಈ ನಿರ್ಧಾರ ನಮ್ಮ ಸರ್ಕಾರಕ್ಕೆ ಒಂದು ಎಚ್ಚರಿಕೆ ಗಂಟೆಯಾಗಲಿ. ಚಿನ್ನಸ್ವಾಮಿ ಕ್ರೀಡಾಂಗಣವನ್ನು ತಮ್ಮ ವೈಯಕ್ತಿಕ ಟಿಕೆಟ್ ಕೌಂಟರ್ ಮಾಡಿಕೊಂಡವರ ಬೇಜವಾಬ್ದಾರಿ ವರ್ತನೆಯಿಂದಾಗಿ, ಇಂದು ನಾವು ಕೇವಲ ಒಂದು ಪಂದ್ಯವನ್ನಷ್ಟೇ ಅಲ್ಲ, ರಾಷ್ಟ್ರಮಟ್ಟದಲ್ಲಿ ಬೆಂಗಳೂರಿನ ಘನತೆಯನ್ನೂ ಕಳೆದುಕೊಂಡಿದ್ದೇವೆ ಎಂದು ಆಕ್ರೋಶ ಹೊರಹಾಕಿದರು. ಕ್ರಿಕೆಟ್ ಅಭಿಮಾನಿಗಳ ಭಾವನೆಗೆ ಧಕ್ಕೆ ತಂದಿರುವ ಸರ್ಕಾರದ ನಡೆಯನ್ನು ಅವರು ತೀವ್ರವಾಗಿ ಖಂಡಿಸಿದ್ದಾರೆ.

ಡಾ.ಸುಧಾಮೂರ್ತಿ ಕುರಿತ ವಿಶ್ವೇಶ್ವರಿ ಕೃತಿ ಲೋಕಾರ್ಪಣೆ

- ಡಾ.ಎನ್.ವಾಸಯ್ಯ ಸಂಪಾದಕತ್ವ, ಇದರಲಿವೆ 26 ಲೇಖನಗಳು



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಡಾ.ಎನ್.ವಾಸಯ್ಯ ಅವರ ಸಂಪಾದಕತ್ವದ ಡಾ.ಸುಧಾಮೂರ್ತಿ ಕುರಿತ 'ವಿಶ್ವೇಶ್ವರಿ' ಕೃತಿಯನ್ನು ಬಿಡುಗಡೆಗೊಳಿಸಲಾಯಿತು.

ಮೈಸೂರು, ಮೇ 6(ಜಿಎ)–ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ತಾರಾ ಪ್ರಕಾಶನ ಮತ್ತು ಕನ್ನಡ ಸಾಹಿತ್ಯ ಕಲಾ ಕೂಟದಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಎನ್.ವಾಸಯ್ಯ ಅವರ ಸಂಪಾದಕತ್ವದ ಡಾ.ಸುಧಾಮೂರ್ತಿ ಕುರಿತ 'ವಿಶ್ವೇಶ್ವರಿ' ಕೃತಿಯನ್ನು ಭಾರತೀಯ ಭಾಷಾ ಸಂಸ್ಥಾನದ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ. ನೀಲಗಿರಿ ಎಂ.ತಳವಾರ್ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಅವರು, ಸುಧಾಮೂರ್ತಿ ಅವರ ವ್ಯಕ್ತಿತ್ವ ಹಾಗೂ ಸಾಹಿತ್ಯ ಕುರಿತ 26 ಲೇಖನಗಳನ್ನು ಈ ಕೃತಿ ಒಳಗೊಂಡಿದೆ. ಹೆಸರಾಂತ ಉದ್ಯಮಿ, ಸಾಹಿತಿ ಆಗಿದ್ದರೂ ಅವರ ಸ್ವಭಾವ ಚಳಿ, ಮಳೆ, ಮಂಜು, ಸುಡುವ ಬಿಸಿಲು ಇದ್ದರೂ ಸಹಾ ನಗು ನಗುತ ಇರುವೆನು ಎಂಬ ಬೇಂದ್ರೆ ಅವರ ನುಡಿಯಂತಿದೆ. ಸುಧಾಮೂರ್ತಿ ಅವರು ನಾರಾಯಣ ಮೂರ್ತಿ ಅವರಿಗೆ ಭರವಸೆಯ ಬೆಳಕಾಗಿ ನಿಂತವರು. ಸ್ತ್ರೀವಾದಿ ಎಂಬ ಹಣೆಪಟ್ಟಿ ಕಟ್ಟಿಕೊಳ್ಳದೆಯೇ ಸ್ತ್ರೀಯರ ಪರ ನಿಂತವರು ಇವರಾಗಿದ್ದಾರೆ. ನಾಡಿನ ಪ್ರಮುಖ ಲೇಖಕಿಯರಲ್ಲೂ ಒಬ್ಬರಾಗಿದ್ದಾರೆ. ಹೀಗಾಗಿ ಇವರ ಪರಿಚಯದ ಈ ಕೃತಿ ಓದುವುದು ಉಪಯುಕ್ತವಾದುದಾಗಿದೆ ಎಂದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಮಾತನಾಡಿ, ಸುಧಾಮೂರ್ತಿ ಕನ್ನಡಿಗರ ಹೆಮ್ಮೆ, ಎಷ್ಟು ಎತ್ತರಕ್ಕೆ ಬೆಳೆಯಬಹುದು ಎಂಬುದಕ್ಕೆ ಸಾಕ್ಷಿಯಾಗಿರುವ ಇವರು ಎಲ್ಲರಿಗೂ ಆಶಾವಾದವಾಗಿದ್ದಾರೆ. ಅಷ್ಟು ಎತ್ತರಕ್ಕೆ ಬೆಳೆದರೂ ಸಾಮಾನ್ಯರಲ್ಲಿ ಸಾಮಾನ್ಯರು ಎಂಬಂತಿದ್ದಾರೆ. ಸರ್ಕಾರವನ್ನು ಟೀಕಿಸುವವರು ಹಲವರು, ಆದರೆ ಸಮಾಜಕ್ಕೆ ನಾನೇನು ಮಾಡಬಲ್ಲೆ ಎಂದು ಪ್ರಶ್ನಿಸಿಕೊಂಡು ಸಮಾಜಕ್ಕೆ ಕೊಡುಗೆ ನೀಡುವವರು ಕಡಿಮೆ. ಇವರ ಸಾಲಿಗೆ ಸುಧಾಮೂರ್ತಿ ನಿಲ್ಲುವವರಾಗಿದ್ದು, ಇವರ ಸಮಾಜಮುಖಿ ಕಾರ್ಯಗಳು ಅಸಂಖ್ಯಾ ಎಂದರು.

ಕೃತಿ ಕುರಿತ ಭಾರತೀಯ ಭಾಷಾ ಸಂಸ್ಥಾನದ ಹಿರಿಯ ಫೆಲೋ ಡಾ. ಮಾಲಿನಿ ಅಭ್ಯಂಕರ್ ಮಾತನಾಡಿ, ಶ್ರೀಮಂತಿಕೆಯ ಇರುವಿಕೆ ಲವಲೇಶವೂ ಸುಳಿಯದಂತೆ ನೋಡಿಕೊಂಡು ಸಾಗುತ್ತಿರುವ ಸುಧಾಮೂರ್ತಿ ನಾಡು, ವಿಶ್ವಕ್ಕೆ ಆದರ್ಶ ಮಹಿಳೆಯಾಗಿದ್ದಾರೆ. ಹೀಗಾಗಿ ವಿಶ್ವೇಶ್ವರಿ ಎಂಬ ಶೀರ್ಷಿಕೆ ಕೃತಿಗೆ ಸಕಾಲಿಕವಾದುದಾಗಿದೆ. ಅವರ ವ್ಯಕ್ತಿತ್ವ ಹಾಗೂ ಸಾಹಿತ್ಯ ಕುರಿತ ಈ ಕೃತಿ ಯುವಪೀಳಿಗೆಗೆ ಬೆಳಕು ನೀಡ ಬಹುದು ಎಂದರು. ಕೃತಿ ಸಂಪಾದಕ ಡಾ.ಎನ್. ವಾಸಯ್ಯ, ಎಂ.ಚಂದ್ರಶೇಖರ್ ಇದ್ದರು.

ಹಕ್ಕಿ ಜ್ವರದ ಭೀತಿ ಮೃಗಾಲಯದಲ್ಲಿ ಕಟ್ಟೆಚ್ಚರ

ಪ್ರಾಣಿ–ಪಕ್ಷಿಗಳ ಮೇಲೆ ತೀವ್ರ ನಿಗಾ

ಮೈಸೂರು, ಮೇ 6(ಎಂಟಿವೈ)– ವಿವಿಧೆಡೆ ಹಕ್ಕಿ ಜ್ವರದ ಸೋಂಕು ಪತ್ತೆಯಾದ ಹಿನ್ನೆಲೆಯಲ್ಲಿ ಮೈಸೂರಿನ ಮೃಗಾಲಯದಲ್ಲಿ ಕಟ್ಟೆಚ್ಚರ ವಹಿಸಲಾಗಿದ್ದು, ಪ್ರಾಣಿ–ಪಕ್ಷಿಗಳ ಆರೋಗ್ಯದ ಮೇಲೆ ನಿಗಾ ಇಡಲು ಕ್ಷಿಪ್ರ ಕಾರ್ಯಪಡೆ ತಂಡವೊಂದನ್ನು ರಚಿಸಲಾಗಿದೆ ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರಾದ ಪಿ.ಅನುಷ ತಿಳಿಸಿದ್ದಾರೆ. ಮೈಸೂರು ಮೃಗಾಲಯ, ಕಾರಂಜಿಕೆರೆ ಹಾಗೂ ಕೂರ್ಗಳ್ಳಿಯಲ್ಲಿರುವ ಚಾಮುಂಡಿ ಪುನರ್ವಸತಿ ಕೇಂದ್ರದಲ್ಲಿ ಪ್ರಾಣಿ–ಪಕ್ಷಿಗಳ ಆರೋಗ್ಯ ಕಾಪಾಡಲು ಹಾಗೂ ಹಕ್ಕಿಜ್ವರದ ಸೋಂಕು ಹರಡುವಿಕೆ ತಡೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಮೃಗಾಲಯಕ್ಕೆ ಬರುವ ಎಲ್ಲಾ ವಾಹನಗಳನ್ನು ಪ್ರವೇಶದ್ವಾರದಲ್ಲಿಯೇ ಸೋಂಕು ನಿವಾರಣ ದ್ರವ ಸಿಂಪಡಿಸಲಾಗುತ್ತದೆ. ಅಲ್ಲದೆ, ಸಿಬ್ಬಂದಿ, ಪ್ರವಾಸಿಗರು ಸೋಂಕು ನಿವಾರಕ ದ್ರವ್ಯವಿರುವ ಮ್ಯಾಟ್ ಮೇಲೆ ಕಾಲಿಟ್ಟು(ಶೂ, ಚಪ್ಪಲಿ) ಒಳಗೆ ಬರುವಂತೆ ಸೂಚಿಸಲಾಗಿದೆ. ಎಲ್ಲಾ ಪ್ರಾಣಿ ಮತ್ತು ಪಕ್ಷಿಗಳ ಮನೆ ಆವರಣದಲ್ಲಿ ಫುಟ್ ಡಿಪ್ ಅಳವಡಿಸಲಾಗಿದೆ. ಪ್ರಾಣಿ–ಪಕ್ಷಿಗಳ ಪಾಲಕರು ಹಾಗೂ ಸ್ವಚ್ಛತಾ ಸಿಬ್ಬಂದಿ ಕೆಲಸಕ್ಕೂ ಮುನ್ನ ಹಾಗೂ ಕೆಲಸದ



ನಂತರ ಸ್ಯಾನಿಟೈಸರ್ ಬಳಸುವಂತೆ ನಿರ್ದೇಶನ ನೀಡಲಾಗಿದೆ. ಮೃಗಾಲಯದಲ್ಲಿರುವ ಎಲ್ಲಾ ಪ್ರಾಣಿ–ಪಕ್ಷಿಗಳ ಆರೋಗ್ಯದ ಮೇಲೆ ನಿಗಾ ಇಡಲು ಸೂಚಿಸಲಾಗಿದೆ. ಯಾವುದಾದರೂ ಪ್ರಾಣಿ–ಪಕ್ಷಿಗಳ ವರ್ತನೆಯಲ್ಲಿ ಅಸಹಜತೆ ಕಂಡು ಬಂದರೆ ಕೂಡಲೇ ವೈದ್ಯರಿಗೆ ಮಾಹಿತಿ ನೀಡುವಂತೆ ಸೂಚಿಸಲಾಗಿದೆ. ಅತ್ತ ವಲಸೆ ಪಕ್ಷಿಗಳ ಮೇಲೆ ನಿಗಾ ಇಡಲಾಗಿದೆ ಎಂದು ತಿಳಿಸಿದ್ದಾರೆ.

ಸಮಾಜಕ್ಕೆ ಬ್ರೈನ್ ಯೋಗ ಅತ್ಯಂತ ಉಪಯುಕ್ತ



'ಬ್ರೈನ್ ಯೋಗ ಚಾಲೆಂಜ್–ಸ್ಕಾಲರ್ ಶಿಪ್ ಪ್ರೀಮಿಯರ್ ಲೀಗ್ ಕರ್ನಾಟಕ 2026' ಸ್ಪರ್ಧೆಯ ಲೋಗೋವನ್ನು ಶಾಸಕ ಹರೀಶ್‌ಗೌಡ ಬಿಡುಗಡೆಗೊಳಿಸಿದರು.

ಮೈಸೂರು, ಮೇ 6– ಬ್ರೈನ್ ಎಕ್ಸ್ ಯೋಗ ರಾಷ್ಟ್ರೀಯ ಬೌದ್ಧಿಕ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮದ ಅಂಗವಾಗಿ, 'ಬ್ರೈನ್ ಯೋಗ ಚಾಲೆಂಜ್–ಸ್ಕಾಲರ್ ಶಿಪ್ ಪ್ರೀಮಿಯರ್ ಲೀಗ್ ಕರ್ನಾಟಕ 2026' ಸ್ಪರ್ಧೆಯ ಲೋಗೋ ಹಾಗೂ ಫ್ಯಾಮಿಲಿ ಸ್ಕಾಲರ್‌ಶಿಪ್ ಕಿಟ್ ವಿತರಣಾ ಕಾರ್ಯಕ್ರಮಕ್ಕೆ ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶಾಸಕರಾದ ಕೆ.ಹರೀಶ್ ಗೌಡರು ಚಾಲನೆ ನೀಡಿದರು.

ಕೆಎಂಪಿಕೆ ಚಾರಿಟಬಲ್ ಟ್ರಸ್ಟ್, ಜನಸ್ಪಂದನ ಫೌಂಡೇಶನ್ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾದ ಈ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕೆ.ಹರೀಶ್‌ಗೌಡರು, ಇಂದಿನ ಒತ್ತಡದ ಸಮಾಜದಲ್ಲಿ ಬ್ರೈನ್ ಯೋಗವು ಪ್ರತಿಯೊಬ್ಬರಿಗೂ ಅತ್ಯಂತ ಉಪಯುಕ್ತವಾಗಿದೆ. ಪೋಷಕರು ಮತ್ತು ವಿದ್ಯಾರ್ಥಿಗಳು ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಅಲ್ಲದೆ, KG ಇಂದ PG ವರೆಗಿನ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ ಹಾಗೂ ಮಾಜಿ ಮೇಯರ್‌ಮೋದಾಮಣಿ ಭಾಗವಹಿಸಿ ಕಾರ್ಯಕ್ರಮಕ್ಕೆ ಸಾಕ್ಷಿಯಾದರು. ಸ್ತ್ರೀ ಶಕ್ತಿಯಿಂದ ಮನೋಶಕ್ತಿಯವರೆಗೆ ಆಶಯದೊಂದಿಗೆ ಆಯೋಜಿಸಲಾಗಿತ್ತು.

ಉಚಿತ ಕಿಟ್ ವಿತರಣೆ: ಅರ್ಹ ವಿದ್ಯಾರ್ಥಿಗಳಿಗೆ ಶಿಕ್ಷಣ ಮತ್ತು ಬೌದ್ಧಿಕ ವಿಕಾಸಕ್ಕೆ ಪೂರಕವಾದ ಕಿಟ್‌ಗಳನ್ನು ತಲುಪಿಸುವ ಗುರಿ ಹೊಂದಲಾಗಿದೆ. ಮೈಸೂರು ಜಿಲ್ಲಾ ಕಾರ್ಯಕ್ರಮ ಸಂಯೋಜಕ ಪುನೀತ್, ಪ್ರಚಾರಕರಾದ ಆಶಾ, ಚಾಮರಾಜ ಕ್ಷೇತ್ರದ ವಿವಿಧ ಬ್ಲಾಕ್‌ಗಳ ಮಹಿಳಾ ಮುಖಂಡರು ಉಪಸ್ಥಿತರಿದ್ದರು.

ಜೆಡಿಎಸ್ ಸಂಘಟನೆಗೆ ಸಹಕರಿಸಲು ಮನವಿ...



ಮೇಟಗಳ್ಳಿಯ ಹಿರಿಯ ಜೆಡಿಎಸ್ ಮುಖಂಡ ಪಾಪಣ್ಣ ಅವರ ನಿವಾಸಕ್ಕೆ ತೆರಳಿದ ಮೈಸೂರು ನಗರ ಜೆಡಿಎಸ್ ಅಧ್ಯಕ್ಷರೂ ಆದ ಮಾಜಿ ಕಾರ್ಪೋರೇಟರ್ ಎಸ್‌ಬಿಎಂ ಮಂಜು, ಜೆಡಿಎಸ್ ಸಂಘಟನೆಗೆ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು. ಈ ವೇಳೆ ಚಾಮರಾಜ ಕ್ಷೇತ್ರದ ಅಧ್ಯಕ್ಷ ಚಂದ್ರಹಾಸ್, ಮಾಜಿ ಕಾರ್ಪೋರೇಟರ್ ರಮೇಶ್, ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಪ್ರಕಾಶ್, ದೇವೇಗೌಡ, ಕಾರ್ಮಿಕ ವಿಭಾಗದ ಮಾಜಿ ಅಧ್ಯಕ್ಷ ರಮೇಶ್‌ಕುಮಾರ್, ನಗರ ಉಪಾಧ್ಯಕ್ಷರಾದ ಭೋಜರಾಜ್, ಚೆಲುವರಾಜು, ಒಟಿಆರ್ ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಇಂದು 'ಪ್ಲಾಸ್ಟಿಕ್ ಬಿಡಿ, ಬಟ್ಟೆ ಬ್ಯಾಗ್ ಬಳಸಿ' ಜಾಗೃತಿ ಕಾರ್ಯಕ್ರಮ



ಮೈಸೂರು: ಕ್ಷೇಮಧಾಮ ಟ್ರಸ್ಟ್, ಅರಿವು ಸಂಸ್ಥೆ ವತಿಯಿಂದ ಪ್ಲಾಸ್ಟಿಕ್‌ನಿಂದ ಆಗುವ ಅನಾಹುತಗಳ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಬಟ್ಟೆ ಬ್ಯಾಗ್ ವಿತರಿಸಿ ಪ್ಲಾಸ್ಟಿಕ್ ಬಿಡಿ ಬಟ್ಟೆ ಬ್ಯಾಗ್ ಬಳಸಿ ಜಾಗೃತಿ ಕಾರ್ಯಕ್ರಮವನ್ನು ಶಿವಾಂಪುರ 2ನೇ ಹಂತದಲ್ಲಿರುವ ಬಿಎಸ್‌ಎನ್‌ಎಲ್ ಆರ್ಚ್ ಹತ್ತಿರ ಮೇ 7ರಂದು ಬೆಳಗ್ಗೆ 8 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಎಸ್.ಶ್ರೀವತ್ಸ, ಕ್ಷೇಮಧಾಮ ಟ್ರಸ್ಟ್ ಅಧ್ಯಕ್ಷ ಎಚ್‌ವಿಎಲ್‌ಎನ್ ಆಚಾರ್, ಕೆಎಮ್‌ಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಅರಿವು ಸಂಸ್ಥೆ ಅಧ್ಯಕ್ಷ ಶ್ರೀಕಾಂತ್ ಕಶ್ಯಪ್, ಸ್ಥಳೀಯ ಆರೋಗ್ಯ ಅಧಿಕಾರಿಗಳು ಭಾಗವಹಿಸಲಿದ್ದಾರೆ.

ಬಡವರ ಬಂಧು ಸಂಘದಿಂದ ಪೌರಕಾರ್ಮಿಕರಿಗೆ ಸನ್ಮಾನ...



ಕಾರ್ಮಿಕ ದಿನಾಚರಣೆ ಅಂಗವಾಗಿ ಮೈಸೂರಿನ ಬಡವರ ಬಂಧು ಸಂಘದಿಂದ ಪೌರಕಾರ್ಮಿಕರನ್ನು ಸನ್ಮಾನಿಸಿ, 65 ವರ್ಷ ಮೇಲ್ಪಟ್ಟ ವೃದ್ಧರಿಗೆ ಶಾಸಕ ಹರೀಶ್‌ಗೌಡರ ಪತ್ನಿ ಶ್ರೀಮತಿ ಗೌರಿ ಹರೀಶ್‌ಗೌಡರು ಪೆನ್ಷನ್ ಆದೇಶ ವಿತರಿಸಿದರು. ಈ ವೇಳೆ ಸಮಾಜ ಸೇವಕಿ ಶಿಲ್ಪ, ವಕೀಲ ಮಹದೇವ್, ಸಂಘದ ಅಧ್ಯಕ್ಷ ಪಡುವಾರಹಳ್ಳಿ ಪಾಪಣ್ಣ, ಸುಣ್ಣದಕೇರಿ ರಮೇಶ್, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಬಾಲಕೃಷ್ಣ, ತೊಣಚಿಕೊಪ್ಪಲು ರಾಜು, ವನಿತಾರಾಣಿ, ಅಪ್ಪಯ್ಯ, ನಾಗರಾಜು ಇನ್ನಿತರರಿದ್ದರು.

ಡಿಪ್ಲೋಮಾ ತರಗತಿಗಳಿಗೆ ಪ್ರವೇಶಾತಿ

ಮೈಸೂರು, ಮೇ 6–ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್‌ನಲ್ಲಿ 2026–27ನೇ ಸಾಲಿನ ಪ್ರಥಮ ವರ್ಷದ ಡಿಪ್ಲೋಮಾ ತರಗತಿಗಳಿಗೆ (AR, CP, EI&CE, ADFT, ID & IS) ಸರ್ಕಾರಿ ಕೋಟಾದಡಿ ಆಫ್‌ಲೈನ್ ಪ್ರವೇಶಾತಿ ಪ್ರಾರಂಭವಾಗಿದೆ. ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಾಸಾದ ಅರ್ಹ ವಿದ್ಯಾರ್ಥಿನಿಯರು ತಮ್ಮ ಮೂಲ ದಾಖಲಾತಿಗಳೊಂದಿಗೆ ಸಂಸ್ಥೆಗೆ ಹಾಜರಾಗಿ ಪ್ರವೇಶ ಪಡೆಯಬಹುದು. ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಾಸಾದ E&C ಮತ್ತು CS ವಿಭಾಗಕ್ಕೆ ಪ್ರವೇಶ ಪಡೆಯಲಿಚ್ಛಿಸುವ ಅರ್ಹ ವಿದ್ಯಾರ್ಥಿನಿಯರು ಸಂಸ್ಥೆಗೆ ಹಾಜರಾಗಿ ಆನ್‌ಲೈನ್ ಪ್ರವೇಶಾತಿಗಾಗಿ ಏ.21ರಿಂದ ಮೇ 16ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ. ವಿವರಗಳಿಗೆ ಮಂಜುಳಾ ಕೆ.ಶ್ರೀಧರ್, ಪ್ರಾಂಶುಪಾಲರು (ಮೊ. 9449049345) ಅಥವಾ ಸವಿತ ಎಂ.(ಮೊ. 9591650765) ಅವರನ್ನು ಸಂಪರ್ಕಿಸಬಹುದು.

ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದವರಿಗೆ ಪ್ರತಿಭಾ ಪುರಸ್ಕಾರ



ಹಿರಣ್ಮಯಿ ಪ್ರತಿಷ್ಠಾನ ಹಾಗೂ ಕಾವೇರಿ ಬಳಗ ಆಯೋಜಿಸಿದ್ದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಾಯಿತು.

ಮೈಸೂರು, ಮೇ 6(ಜಿಎ)–ಉತ್ತಮ ಭವಿಷ್ಯ ಕಟ್ಟಿಕೊಳ್ಳುವುದನ್ನು ಗುರಿಯಾಗಿಸಿಕೊಂಡು ಅನ್ಯ ವಿಷಯಗಳಿಗೆ ಆಸ್ಪದ ಕೊಡದೆ ವಿದ್ಯಾಭ್ಯಾಸ ಮಾಡುವಂತೆ ಮಂಡ್ಯ ಡಯಟ್‌ನ ವಿಶ್ರಾಂತ ಪ್ರಾಚಾರ್ಯ ಪುರುಷೋತ್ತಮ್ ಸಲಹೆ ನೀಡಿದರು.

ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಹಿರಣ್ಮಯಿ ಪ್ರತಿಷ್ಠಾನ ಹಾಗೂ ಕಾವೇರಿ ಬಳಗ ಆಯೋಜಿಸಿದ್ದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಿ ಮಾತನಾಡಿದರು.

ಹಿರಣ್ಮಯಿ ಪ್ರತಿಷ್ಠಾನ ಹಾಗೂ ಕಾವೇರಿ ಬಳಗ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಇಂತಹ ಕಾರ್ಯಕ್ರಮ ಹಮ್ಮಿಕೊಂಡಿರುವುದು ಶ್ಲಾಘನೀಯ. ವಿದ್ಯಾರ್ಥಿಗಳಿಗೆ ಬೆನ್ನು ತಟ್ಟಿ ಪ್ರೋತ್ಸಾಹಿಸಿದರೆ ಅವರು ಮುಂದಿನ ಓದಿಗೆ ಪ್ರೇರಣೆಯಾಗಲಿದೆ ಎಂದರು.

ಸಮಾಜ ಸೇವಕ ರಘುರಾಮ ವಾಜಪೇಯಿ ಮಾತನಾಡಿ, ವಿದ್ಯಾರ್ಥಿಗಳು ಮಾದಕ ವಸ್ತುಗಳ ಚಟಗಳಂತಹ ದುಶ್ಚಟಗಳಿಂದ ದೂರವಿದ್ದು, ವ್ಯಾಸಂಗದತ್ತ ಚಿತ್ತ ಹರಿಸುವಂತೆ ಸಲಹೆ ನೀಡಿದರಲ್ಲದೆ, ಮೊಬೈಲ್ ವ್ಯಾಮೋಹದಿಂದಲೂ ದೂರವಾಗಿ ಓದಿನತ್ತ ಮುನ್ನಡೆಯುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಈ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಾದ ಜಾಕಿ ಕ್ವಾಟರ್ಸ್ ಬಳಿ ಇರುವ ಸರ್ಕಾರಿ ಆದರ್ಶ ವಿದ್ಯಾಲಯದ ಎಸ್.ಮೋನಿಶ್ ಗೌಡ, ಕುವೆಂಪುನಗರದ ಆರ್.ಸೃಜನ್, ಕನಕಗಿರಿ ಪ್ರೌಢಶಾಲೆಯ ಪೃಥ್ವಿರಾಜ್, ರೈಲ್ವೆ ವರ್ಕ್ ಶಾಪ್ ಪ್ರೌಢಶಾಲೆಯ ರಶೀದಾ ಬಾನು, ತಬಸ್ ಬಾನು, ಅಶೋಕಪುರಂ ಸರ್ಕಾರಿ ಪ್ರೌಢಶಾಲೆಯ ಪ್ರಣವ್ ಮೌನಿ, ಲಕ್ಷ್ಮೀಪುರಂ ಸರ್ಕಾರಿ ಪ್ರೌಢಶಾಲೆಯ ಧನಂಜಯ, ಲಕ್ಷ್ಮೀಪುರಂ ಜೆಎಸ್ ಎಸ್ ಪ್ರೌಢಶಾಲೆಯ ಡಿ.ಧ್ರುವಕುಮಾರ್, ಗೀತಾಂಜಲಿ, ಶ್ರೀಕಾಂತ ಬಾಲಿಕಾ ಪ್ರೌಢಶಾಲೆಯ ಲಾವಣ್ಯ, ಅಶ್ವಿನಿ, ಬನುಮಯ್ಯ ಬಾಲಿಕಾ ಪ್ರೌಢಶಾಲೆಯ ಸಿಂಚನಾ, ಪಿಲಾಲ್, ಸಾರ್ವಜನಿಕ ಪ್ರೌಢಶಾಲೆಯ ಸಿ.ಚರಣ್, ವಾಣಿ ವಿದ್ಯಾಮಂದಿರದ ಅರ್ಚನಾ, ಹಾರ್ಡ್ವಿಕ್ ಶಾಲೆಯ ಲಿಖಿತ್ ನಾಯಕ್, ದಳವಾಯಿ ಶಾಲೆಯ ಅಮೂಲ್ಯ ಹಾಗೂ ಪಿಯುಸಿಯಲ್ಲಿ ವಿಶೇಷ ಸಾಧನೆಗೈದ ಬಸವೇಶ್ವರ ಬಡಾವಣೆಯ ಎಂಬಿ ಕಾಲೇಜಿನ ಎಂ.ಸಂಗೀತಾ(ಶೇ.99), ವಿದ್ಯಾವರ್ಧಕ ಶಾಲೆಯ ಎಸ್.ಸಾನಿಕಾ (ಶೇ.91) ಹಾಗೂ ಭಾರತೀಯ ವಿದ್ಯಾ ಭವನದ ಮೇಘನಾ(ಶೇ.94) ವಿದ್ಯಾರ್ಥಿನಿಯರಿಗೆ ಪದಕ,ಸ್ಮರಣಿಕೆ, ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಯಿತು.

ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ ಪತ್ರಕರ್ತ ದೊಡ್ಡಹುಂಡಿ ರಾಜಣ್ಣ ಕಾವೇರಿ ಬಳಗದ ಅಧ್ಯಕ್ಷೆ ಕಾವೇರಿಯಮ್ಮ, ಒರಿಗಾಮಿ ಕಲಾವಿದ ಎಚ್.ವಿ. ಮುರಳೀಧರ್, ಶಿಕ್ಷಕ ನಾರಾಯಣರಾವ್, ಶ್ರೀಕಂಠ ಮೂರ್ತಿ, ಮನೋಹರ್ ಮತ್ತಿತರರಿದ್ದರು.

ಮೈಸೂರು ಮಿತ್ರ

ತಿರುಮಲಾಪುರ ಡೇರಿ ಕಟ್ಟಡಕ್ಕೆ ಭೂಮಿ ಪೂಜೆ



ಡೇರಿ ಕಟ್ಟಡ ನಿರ್ಮಾಣ ಕಾಮಗಾರಿಗೆ ಸಿ.ಶಿವಕುಮಾರ್ ಭೂಮಿಪೂಜೆ ನೆರವೇರಿಸಿದರು.

ಚಿಣಕುರಳಿ, ಮೇ 6– ತಿರುಮಲಾಪುರ (ತಿರ್ಲಾಪುರ) ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಭೂಮಿ ಪೂಜೆ ನೆರವೇರಿಸಿದರು.


ಬಳಿಕ ಮಾತನಾಡಿ, ತಿರುಮಲಾಪುರ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಸ್ವಂತ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ಸಲ್ಲಿಸಲಾಗಿದೆ. ಕಟ್ಟಡ ನಿರ್ಮಾಣಕ್ಕೆ ಒಕ್ಕೂಟದಿಂದ 5.50 ಲಕ್ಷ ಅನುದಾನ ನೀಡಲಾಗುತ್ತಿದೆ. ಜತೆಗೆ ಧರ್ಮಸ್ಥಳ ಸಂಘ ಹಾಗೂ ಸ್ಥಳೀಯರ ಸಹಕಾರ ಪಡೆದುಕೊಳ್ಳಲಾಗುತ್ತಿದ್ದು, ನಾನು ನಿರ್ದೇಶಕನಾದ ಬಳಿಕ ಡೇರಿ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡುತ್ತಿರುವುದು ಇದೇ ಮೊದಲ ಕಟ್ಟಡವಾದ ಹಿನ್ನೆಲೆಯಲ್ಲಿ ಹೆಚ್ಚಿನ ಆದ್ಯತೆ ನೀಡಿ ಸುಸಜ್ಜಿತವಾದ ಕಟ್ಟಡ ನಿರ್ಮಾಣ ಮಾಡಲು ಕ್ರಮವಹಿಸಲಾಗುವುದು ಎಂದು ಭರವಸೆ ನೀಡಿದರು.

ಹಾಲು ಉತ್ಪಾದಕರ ಸಹಕಾರ ಸಂಘಗಳು ದೇವಸ್ಥಾನ ಇದ್ದಂತೆ, ಇಲ್ಲಿ ಕಲುಷಿತ, ರಾಜಕೀಯ ಮಾಡದೆ ಎಲ್ಲರೂ ಜತೆಗೂಡಿ ಅಭಿವೃದ್ಧಿಪಡಿಸಬೇಕು, ನಮ್ಮ ಗ್ರಾಮ, ನಮ್ಮ ಡೇರಿ ಎಂಬ ಭಾವನೆ ಮೂಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಡೇರಿ ಅಧ್ಯಕ್ಷೆ ರಾಧಮ್ಮ, ಉಪಾಧ್ಯಕ್ಷೆ ಭಾಗ್ಯಮ್ಮ, ನಿರ್ದೇಶಕರಾದ ಜಯಲಕ್ಷ್ಮಮ್ಮ, ಶಿವಮ್ಮ, ಶ್ವೇತಾ, ಸುಶೀಲಮ್ಮ, ಲೀಲಾವತಿ, ಸಾವಿತ್ರಮ್ಮ, ಮಂಗಳಮ್ಮ, ಕಾರ್ಯದರ್ಶಿ ಶೋಭಾ ಅಶೋಕ್, ವಿಸ್ತರಣಾಧಿಕಾರಿ ಉಷಾ, ಡಾ.ಸಂತೋಷ್, ಮುಖಂಡ ದೇಶಹಳ್ಳಿ ಪ್ರಭಾಕರ್, ಕರಿಗೌಡ, ತಿಮ್ಮೇಗೌಡ, ಕೃಷ್ಣೇಗೌಡ, ನಾಗಣ್ಣ ಇದ್ದರು.

ರಾಜಕಾರಣಿಗಳಿಗೆ ಸಮಾಜ, ಜನಕಲ್ಯಾಣ ಮುಖ್ಯವಾಗಬೇಕು

ಎಸ್.ಎಂ.ಕೃಷ್ಣ ಪ್ರಶಸ್ತಿ ಸ್ವೀಕರಿಸಿ ಮಾಜಿ ಸಚಿವ ಕಿಮ್ಮನೆ ರತ್ನಾಕರ್ ಅಭಿಮತ



ಕರ್ನಾಟಕ ಸಂಘದ ವತಿಯಿಂದ ಮಾಜಿ ಸಚಿವ ಕಿಮ್ಮನೆ ರತ್ನಾಕರ್ ಅವರಿಗೆ ಎಸ್.ಎಂ. ಕೃಷ್ಣ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಮಂಡ್ಯ, ಮೇ 6– ರಾಜಕಾರಣಿಗಳಿಗೆ ತಮ್ಮ ಭವಿಷ್ಯಕ್ಕಿಂತ ಸಮಾಜ ಮತ್ತು ಜನರ ಕಲ್ಯಾಣ ಮುಖ್ಯವಾಗಬೇಕು. ನಾನು ಗೆದ್ದದ್ದಕ್ಕೆ ದೇಶ ಮತ್ತು ರಾಜ್ಯ ಉದ್ಧಾರವಾಗುತ್ತದೆ ಎನ್ನುವ ಗುಂಗಿನಿಂದ ಹೊರಬರಬೇಕು ಎಂದು ಮಾಜಿ ಸಚಿವ ಕಿಮ್ಮನೆ ರತ್ನಾಕರ್ ಅಭಿಪ್ರಾಯಪಟ್ಟರು.

ನಗರದ ಕೆ.ವಿ.ಎಸ್ ಭವನದಲ್ಲಿ ಕರ್ನಾಟಕ ಸಂಘದ ವತಿಯಿಂದ ನೀಡಿದ ಎಸ್.ಎಂ.ಕೃಷ್ಣ ಪ್ರಶಸ್ತಿ–2026 ಸ್ವೀಕರಿಸಿ ಅವರು ಮಾತನಾಡಿದ ಅವರು, ಇಂದಿನ ಅನೇಕ ವಿದ್ಯಾವಂತರಿಗೆ ಜಾತ್ಯತೀತ ಪರಿಕಲ್ಪನೆ ಗೊತ್ತಿಲ್ಲ, ಗಾಂಧೀಜಿ, ಅಂಬೇಡ್ಕರ್, ಲೋಹಿಯಾ ಮುಂತಾದವರನ್ನು ಓದಿಕೊಂಡಿರುವುದಿಲ್ಲ. ಹೀಗಾಗಿ ಸಾಹಿತ್ಯವನ್ನು ಜನರಿಗೆ ತಲುಪಿಸುವ ಕೆಲಸವಾಗಬೇಕಿದೆ ಎಂದು ಅಭಿಪ್ರಾಯಪಟ್ಟರು.

ನಾನು 2013ರಲ್ಲಿ ಸಚಿವನಾಗಲು ಎಸ್.ಎಂ.ಕೃಷ್ಣ ಅವರ ಪ್ರಮುಖ ಪಾತ್ರ ವಹಿಸಿದ್ದಾರೆ. ಅವರ ಹೆಸರಿನ ಪ್ರಶಸ್ತಿ ಸಿಕ್ಕಿರುವುದು ಸಂತಸ ತಂದಿದೆ. ಎಲ್ಲ ರಂಗಗಳಿಗೂ ಮಂಡ್ಯ ಜಿಲ್ಲೆಯು ವಿಶೇಷ ಕೊಡುಗೆಯನ್ನು ನೀಡಿದೆ ಎಂದರು. ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ಎಸ್.ಎಂ.ಕೃಷ್ಣ ಅವರ ಪ್ರಶಸ್ತಿಗೆ ಕಿಮ್ಮನೆ ರತ್ನಾಕರ್ ಅರ್ಹರು. ರಾಮ ಮನೋಹರ ಲೋಹಿಯಾ ಸಿದ್ಧಾಂತ ಓದಿಕೊಂಡ ಕಿಮ್ಮನೆ ಅವರು ಸಭ್ಯ ರಾಜಕಾರಣಿ ಮತ್ತು ಉತ್ತಮ ಆಡಳಿತಗಾರ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಮಾತನಾಡಿ, ನಮ್ಮ ನಾಡಿಗೆ, ಜಿಲ್ಲೆಗೆ ಸಂಸ್ಕಾರ, ಶಿಸ್ತನ್ನು ಕಲಿಸಿಕೊಟ್ಟ ಆದರ್ಶ ರಾಜಕಾರಣಿ ಎಂದರೆ ಎಸ್.ಎಂ.ಕೃಷ್ಣ. ಬೆಂಗಳೂರನ್ನೇ ವಿಶ್ವ ಮಟ್ಟದಲ್ಲಿ ಗುರುತಿಸುವಂತೆ ಮಾಡಿದ್ದಾರೆ. ಇಂದು ಬಜೆಟ್ ಗಾತ್ರ 4 ಲಕ್ಷ ಕೋಟಿ ದಾಟುವುದಕ್ಕೆ ಕೃಷ್ಣ ಅವರ ದೂರದೃಷ್ಟಿ ಮತ್ತು ಅಭಿವೃದ್ಧಿ ಕಾರಣ. ಅವರನ್ನು ಐಟಿ ಕೃಷ್ಣ ಅಂತಲೂ ಕರೆಯುತ್ತಾರೆ ಎಂದರು.

ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮಾತನಾಡಿದರು. ಕಾರ್ಯಕ್ರಮದಲ್ಲಿ ಶಾಸಕ ಪಿ. ರವಿಕುಮಾರ್, ಮಾಜಿ ಶಾಸಕ ಎಂ.ಶ್ರೀನಿವಾಸ್, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ ಭಾಗವಹಿಸಿದ್ದರು.

ರಾಜಕಾರಣಿಗಳು ಓಟಿಗಾಗಿ ಮದುವೆ, ಸಾವು, ಬೀಗರ ಊಟ, ತಿಥಿಕಾರ್ಯಗಳಿಗೆ ಹೆಚ್ಚಾಗಿ ಹೋಗುತ್ತಿದ್ದಾರೆ. ಇವೆಲ್ಲವುಗಳಿಗಿಂತ ಸದನಕ್ಕೆ ಹಾಜರಾಗುವುದು, ಕ್ಷೇತ್ರದ ಸಮಸ್ಯೆಗಳ ಬಗ್ಗೆ ಪ್ರಶ್ನೆ ಕೇಳುವುದು, ಜನರ ಧ್ವನಿಯಾಗಿ ಕೆಲಸ ಮಾಡುವುದು ಮುಖ್ಯ ಎಂಬುದನ್ನು ರಾಜಕಾರಣಿಗಳು ಮತ್ತು ಜನರು ಅರ್ಥಮಾಡಿಕೊಳ್ಳಬೇಕಿದೆ. ಅರ್ಥಮಾಡಿಕೊಳ್ಳದಿದ್ದರೆ ನಾಡಿಗೆ ಉತ್ತಮ ಭವಿಷ್ಯವಿಲ್ಲ. – ಕಿಮ್ಮನೆ ರತ್ನಾಕರ್, ಮಾಜಿ ಸಚಿವ

ವಿರೋಧ ಪಕ್ಷದ ನೆಲೆಯಲ್ಲಿ ಕುರಿತು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು, ಸಾಹಿತ್ಯ– ಸಾಂಸ್ಕೃತಿಕ ನೆಲೆಯಲ್ಲಿ ಕುರಿತು ರಂಗಕರ್ಮಿ ಶ್ರೀನಿವಾಸ್ ಜಿ. ಕಪ್ಪಣ್ಣ, ಆಡಳಿತ ನೆಲೆಯಲ್ಲಿ ಕುರಿತು ಬಿಜೆಪಿ ಮುಖಂಡ ಸಿದ್ದರಾಮಯ್ಯ, ಸ್ಥಳೀಯ ನೆಲೆಯಲ್ಲಿ ಕುರಿತು ವಕೀಲ ಜೀರಹಳ್ಳಿ ರಮೇಶ್‌ಗೌಡ ಮಾತನಾಡಿದರು. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ನಡೆದ ನೆನಪುಗಳ ನುಡಿತೋರಣದಲ್ಲಿ ಮಂಡಿಸಿದ ವಿಷಯಗಳು ಎಸ್.ಎಂ.ಕೃಷ್ಣ ಅವರ ಬದುಕು–ಸಾಧನೆ ಬಗ್ಗೆ ಸಮಗ್ರ ನೋಟ ನೀಡಿದವು.

ವಿದ್ವಾನ್ ಮೈಸೂರು ಎನ್.ಶ್ರೀನಾಥ್ ಮತ್ತು ತಂಡದವರು ಕೃಷ್ಣಾಂಜಲಿ ಗೀತ ಗಾಯನ ನಡೆಸಿಕೊಟ್ಟರು. ಸಕ್ಕರೆ ನಾಡಿನ ಸಂಗೀತಾಸಕ್ತರಿಗೆ ಸಂಗೀತ ಕಾರ್ಯಕ್ರಮ ಮುದ ನೀಡಿತು.

ಕಾಂಗ್ರೆಸ್ ಗೆಲುವು ಜನಪರ ಆಡಳಿತಕ್ಕೆ ಸಾಕ್ಷಿ



ಮಂಡ್ಯ,ಮೇ 6– ದಾವಣಗೆರೆ ಹಾಗೂ ಬಾಗಲಕೋಟೆ ಉಪಚುನಾವಣೆಯಲ್ಲಿ ಜನತೆ ಕಾಂಗ್ರೆಸ್ ಪಕ್ಷವನ್ನು ಅಪ್ಪಿಕೊಂಡಿದ್ದು, ಇದಕ್ಕೆ ಗ್ಯಾರಂಟಿ ಯೋಜನೆಗಳು ಕಾರಣವಾಗಿದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅವರ ಪ್ರಾಮಾಣಿಕ ಜನಪರ ಆಡಳಿತಕ್ಕೆ ಸಾಕ್ಷಿಯಾಗಿದೆ ಎಂದು ವಿಧಾನಪರಿಷತ್ ಮುಖ್ಯ ಸಚೇತಕ ಸಲೀಂ ಅಹಮದ್ ಹೇಳಿದರು.

ನಗರದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಅಧಿಕಾರಕ್ಕೆ ಬಂದ ತಕ್ಷಣ ಕೊಟ್ಟ ಮಾತಿನಂತೆ ನಡೆದುಕೊಂಡಿದೆ. ಐದು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡುವ ಮೂಲಕ ಜನಪರ ಆಡಳಿತ ನೀಡಿದೆ. ದಾವಣಗೆರೆ, ಬಾಗಲಕೋಟೆ ಹಾಗೂ ಅದಕ್ಕೂ ಮುನ್ನ ನಡೆದಿದ್ದ ಸಂಡೂರು, ಚನ್ನಪಟ್ಟಣ, ಶಿಗ್ಗಾಂವಿ ಕ್ಷೇತ್ರಗಳಲ್ಲೂ ಗೆಲುವು ಸಾಧಿಸಿದ್ದೆವು. ಇದಕ್ಕೂ ಗ್ಯಾರಂಟಿ ಯೋಜನೆಗಳೇ ಶ್ರೀರಕ್ಷೆಯಾಗಿದ್ದವು. ಮುಂದಿನ 2028 ರಲ್ಲೂ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂದು ತಿಳಿಸಿದರು.

ಕೇಂದ್ರದ ಬಿಜೆಪಿ ಸರ್ಕಾರ ಕಪ್ಪು ಹಣ ತರಲಿಲ್ಲ. ಯುವಕರಿಗೆ ಉದ್ಯೋಗ ನೀಡಲಿಲ್ಲ. ರೈತರ ಆದಾಯ ದ್ವಿಗುಣಗೊಳಿಸಲಿಲ್ಲ. ಆದರೆ ಪೆಟ್ರೋಲ್, ಡಿಸೇಲ್, ಅನಿಲ ದರಗಳನ್ನು ಏರಿಕೆ ಮಾಡುವ ಮೂಲಕ ಜನಸಾಮಾನ್ಯರ ಮೇಲೆ ಬರೆ ಎಳೆಯುತ್ತಿದೆ. ಬೆಲೆ ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ ಜೊತೆಗೆ ರಾಜ್ಯಕ್ಕೆ ಹಣಕಾಸು ನೆರವು ನೀಡುವಲ್ಲಿಯೂ ತಾರತಮ್ಯ ಮಾಡುತ್ತಿದೆ. ಪ್ರಹ್ಲಾದ್ ಜೋಶಿ ಹಾಗೂ ಶೋಭಾರಂಥ ರಾಜ್ಯದ ಇಬ್ಬರು ಪ್ರಭಾವಿ ಸಚಿವರಿದ್ದರೂ ರಾಜ್ಯಕ್ಕೆ ಯಾವುದೇ ನ್ಯಾಯ ಸಿಗುತ್ತಿಲ್ಲ. ಮಹದಾಯಿ, ಮೇಕೆದಾಟು ಯೋಜನೆ ಮಾಡಲು ಬಿಡುತ್ತಿಲ್ಲ ಎಂದು ಆರೋಪಿಸಿದರು.

ಭಾರತೀನಗರ ಸಮುದಾಯ ಕೇಂದ್ರ ಈಗ ಪ್ರಾಥಮಿಕ ಆರೋಗ್ಯ ಕೇಂದ್ರ

ಆಸ್ಪತ್ರೆಗೆ ಮುತ್ತಿಗೆ ಹಾಕಿ ರೈತರ ಪ್ರತಿಭಟನೆ



ಭಾರತೀನಗರ, ಮೇ 6– ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದ ಸೌಲಭ್ಯಗಳನ್ನು ತೆಗೆದು ಹಾಕಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಮಾಡುತ್ತಿರುವುದನ್ನು ವಿರೋಧಿಸಿ ರೈತ ಸಂಘದ ಮುಖಂಡರು ಆಸ್ಪತ್ರೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಸಮುದಾಯ ಆರೋಗ್ಯ ಕೇಂದ್ರದ ಆವರಣದಲ್ಲಿ ರೈತ ಸಂಘದ ಮುಖಂಡರು ಜಮಾಯಿಸಿ ಸರ್ಕಾರ, ಜಿಲ್ಲಾಡಳಿತ ಮತ್ತು ಆರೋಗ್ಯ ಇಲಾಖೆಗಳ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಭಾರತೀನಗರದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇದ್ದ ಸೌಲಭ್ಯಗಳನ್ನು ಕಿತ್ತು ಹಾಕಿ ಪ್ರಾಥಮಿಕ ಆರೋಗ್ಯ ಕೇಂದ್ರ ವನ್ನಾಗಿ ಮಾಡಲು ಹೊರಟಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಈ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಬೇಕಾಗಿತ್ತು, ಆದರೆ ಸರ್ಕಾರದ ನಿಯಾಮವಳಿಗಳಿಂದ ಸಮುದಾಯ ಆರೋಗ್ಯ ಕೇಂದ್ರವು ಇಂದು ಪ್ರಾಥಮಿಕ ಆರೋಗ್ಯ ಕೇಂದ್ರವಾಗಿ ಮಾರ್ಪಟ್ಟಿದೆ ಎಂದು ದೂರಿದ ಅವರು ಕೂಡಲೇ ಸರ್ಕಾರ ಹಾಗೂ ಆರೋಗ್ಯ ಇಲಾಖೆ ಸೂಕ್ತ ಕ್ರಮವನ್ನು ಜರುಗಿಸಿ ಆಸ್ಪತ್ರೆಗೆ ಅಗತ್ಯವಿರುವ ನುರಿತ ವೈದ್ಯರನ್ನು ನೇಮಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಕೆ.ರಾಮಲಿಂಗೇಗೌಡ ಮಾತನಾಡಿ ಈ ಹಿಂದೆ ಇದ್ದಂತೆ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮುಂದುವರೆಸಬೇಕು. ಮೂಲಭೂತ ಸೌಕರ್ಯಗಳನ್ನು ನೀಡಬೇಕು. ಇಲ್ಲದಿದ್ದರೆ ಉಗ್ರ ಪ್ರತಿಭಟನೆಯನ್ನು ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಆರೋಗ್ಯ ಆಡಳಿತಾಧಿಕಾರಿ ಜಗದೀಶ್ ಅವರಿಗೆ ಮನವಿ ಪತ್ರ ಸಲ್ಲಿಸಿ ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಆರೋಗ್ಯಸಚಿವ ದಿನೇಶ್‌ಗುಂಡೂರಾವ್, ಜಿಲ್ಲಾ ಹಾಗೂ ತಾಲೂಕು ಆಡಳಿತದ ಗಮನಕ್ಕೆ ತಂದು ಸಮಸ್ಯೆ ಬಗೆಹರಿಸಬೇಕೆಂದು ಆಗ್ರಹಿಸಿದರು.

ತಾಲೂಕು ಅಧ್ಯಕ್ಷ ಪ್ರಭುಲಿಂಗು, ಬಸವರಾಜು, ಮಣಿಗೆರೆ ರಾಮಣ್ಣ, ಸೋಶಿ ಪ್ರಕಾಶ್, ತಾಲೂಕು ಕಾರ್ಯದರ್ಶಿ ಕೆ.ಪಿ.ದೊಡ್ಡಿ ಪುಟ್ಟಸ್ವಾಮಿ, ಕ್ಯಾತಘಟ್ಟ ಬಿಳೀಗೌಡ, ಹನುಮಂತನಗರದ ಹನುಮಂತು, ಕರಡಕೆರೆ ಯೋಗೇಶ್, ರಾಮಣ್ಣ, ಕೆ.ಕೆ.ದೊಡ್ಡಿ ಪುಟ್ಟಸ್ವಾಮಿ, ಹೊಸಹಳ್ಳಿ ಶಿವಣ್ಣ, ಬೊಪ್ಪಸಮುದ್ರ ಮಲ್ಲೇಶ್, ಗೆಜ್ಜಲಗೆರೆ ಲಿಂಗರಾಜುರವರುಗಳಿದ್ದರು.

ಸಚ್ಚಿದಾನಂದ ಪತ್ರಕ್ಕೆ ವಿ.ಸೋಮಣ್ಣ ಸ್ಪಂದನೆ: ರೈಲ್ವೆ ಸೌಕರ್ಯ ಒದಗಿಸಿಕೊಡುವ ಭರವಸೆ

ಮಂಡ್ಯ, ಮೇ 6– ರೈಲ್ವೆ ಸೌಕರ್ಯ ಕಲ್ಪಿಸಿಕೊಡಬೇಕೆಂದು ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಯುವ ನಾಯಕ ಇಂಡುವಾಳು ಸಚ್ಚಿದಾನಂದ ಅವರು ಬರೆದ ಪತ್ರಕ್ಕೆ ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ಸ್ಪಂದಿಸಿದ್ದಾರೆ.

ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬೇಡಿಕೆಗಳ ಬಗ್ಗೆ ಸಚ್ಚಿದಾನಂದ ಪ್ರತ್ಯೇಕವಾರು ಪತ್ರ ಬರೆದು ಸಚಿವರ ಗಮನ ಸೆಳೆದಿದ್ದಾರೆ. ಕೊತ್ತತ್ತಿ ಹೋಬಳಿ ನೊದೆಕೊಪ್ಪಲು ಗ್ರಾಮದ ಸಮೀಪವಿರುವ ಅಂಡರ್‌ಪಾಸ್ ಕಿರಿದಾಗಿದೆ. ಇಲ್ಲಿ ಲಾರಿ ಸೇರಿದಂತೆ ಎತ್ತರದ ವಾಹನಗಳ ಓಡಾಟ ಕಷ್ಟಕರವಾಗಿದೆ. ಮಾತ್ರವಲ್ಲದೆ ಮಳೆ ಬಂದರೆ ನೀರು ನಿಲ್ಲುತ್ತದೆ. ಜತೆಗೆ ವಿದ್ಯುತ್ ದೀಪವೂ ಇಲ್ಲ. ಪರಿಣಾಮ ಮಕ್ಕಳು, ಮಹಿಳೆಯರ ಓಡಾಟಕ್ಕೂ ಕಷ್ಟವಾಗಿದೆ. ಈ ಸಮಸ್ಯೆ ಬಗಹರಿಸುವ ನಿಟ್ಟಿನಲ್ಲಿ ಗ್ರಾಮದಲ್ಲಿ ಮೇಲ್ಸೇತುವೆ ನಿರ್ಮಾಣ ಮಾಡಿಕೊಡುವ ಮೂಲಕ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ ಮಾಡಿದ್ದಾರೆ.

ಇದಲ್ಲದೆ, ಶ್ರೀರಂಗಪಟ್ಟಣದಲ್ಲಿನ ರೈಲ್ವೆ ನಿಲ್ದಾಣವನ್ನು ತುರ್ತಾಗಿ ಮೇಲ್ದರ್ಜೆಗೇರಿಸಬೇಕಿದೆ. ಜತೆಗೆ ಪ್ಲಾಟ್‌ಫಾರ್ಮ್ ವಿಸ್ತರಣೆ ಮಾಡಬೇಕು. ಬಹುಮುಖ್ಯವಾಗಿ ಕೆಲ ರೈಲುಗಳ ನಿಲುಗಡೆಗೆ ಕ್ರಮ ವಹಿಸಬೇಕು. ಇದರಿಂದ ಪ್ರತಿನಿತ್ಯ ಸಾವಿರಾರೂ ಜನ ಪ್ರಯಾಣಿಕರಿಗೆ ಉಪಯೋಗವಾಗಲಿದೆ. ಇನ್ನು ಇಂಡುವಾಳು ಗ್ರಾಮದಲ್ಲಿ ಕೆಳ ಸೇತುವೆ ಮಾಡಿಕೊಡಬೇಕು. ಯಲಿಯೂರು ಗ್ರಾಮದಲ್ಲಿ ಶಾಲಾ ಮಕ್ಕಳಿಗೆ ಆಟವಾಡಲು ಅನುಕೂಲವಾಗುವಂತೆ ರೈಲ್ವೆ ಜಾಗವನ್ನು ಬಿಟ್ಟುಕೊಡಬೇಕು. ಜತೆಗೆ ರೈಲ್ವೆ ಗೂಡ್ಸ್ ಸ್ಟೇಷನ್ ಯಲಿಯೂರು ಗ್ರಾಮದಲ್ಲಿಯೇ ಸ್ಥಾಪಿಸಬೇಕೆಂದು ಸಚ್ಚಿದಾನಂದ ಕೇಳಿಕೊಂಡಿದ್ದಾರೆ. ಪತ್ರಕ್ಕೆ ಪ್ರತ್ಯುತ್ತರ ನೀಡಿರುವ ಸಚಿವ ವಿ.ಸೋಮಣ್ಣ, ಸಮಸ್ಯೆಗೆ ಸಂಬಂಧಿಸಿದಂತೆ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದು ಹೇಳಿದ್ದಾರೆ.

ಒಂದನೇ ಪುಟದಿಂದ

ಸಿದ್ದರಾಮೇಶ್ವರ ಜಯಂತಿ ಆಚರಣೆ




ರಾಜ್ಯ ಸರ್ಕಾರದ ವತಿಯಿಂದ 2025–26ನೇ ಸಾಲಿನ 'ಕಾಯಕ ಯೋಗಿ ಸಿದ್ದರಾಮೇಶ್ವರ ಪ್ರಶಸ್ತಿ'ಯನ್ನು ತುಮಕೂರು ಜಿಲ್ಲೆಯ ಹಿರಿಯ ಸಾಹಿತಿ ಪ್ರೊ.ಎಸ್.ಜಿ ಸಿದ್ದರಾಮಯ್ಯ ಅವರಿಗೆ ಪ್ರದಾನ ಮಾಡಲಾಯಿತು.

'ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ. ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ' ಎಂದು ಹೇಳಿ ಎಂಟುನೂರು ವರ್ಷಗಳೇ ಆಗಿದೆ. ಆದರೆ ಸಮಾಜದಲ್ಲಿ ಜಾತಿ ವ್ಯವಸ್ಥೆ ಹೋಗಿದೆಯಾ... ಆದ್ದರಿಂದ ಸಮಾಜದಲ್ಲಿ ವೈಜ್ಞಾನಿಕತೆ ಹಾಗೂ ವೈಚಾರಿಕತೆ ಬೆಳೆದು ವರ್ಗ ವ್ಯವಸ್ಥೆಗಳು ನಿರ್ಮೂಲನೆಯಾಗಬೇಕು ಎಂದು ಹೇಳಿದ್ದರು. ಈ ನಿಟ್ಟಿನಲ್ಲಿ ಅವಕಾಶ ವಂಚಿತರಾದ ಎಲ್ಲಾ ಜನಾಂಗದವರಿಗೂ ಸಮಾನ ಅವಕಾಶಗಳು ಸಿಗಬೇಕು ಎಂಬುದು ನಮ್ಮ ಸಂಕಲ್ಪ ಎಂದರು.

ರಾಜಕೀಯ ಸ್ವಾತಂತ್ರ್ಯ: ಡಾ.ಬಿ.ಆರ್. ಅಂಬೇಡ್ಕರ್ ಅವರು ಹೇಳುವಂತೆ, ಸಮಾಜದಲ್ಲಿ ಜಾತಿ ವ್ಯವಸ್ಥೆಯನ್ನು ಹೋಗಲಾಡಿಸಲು ಎಲ್ಲರಿಗೂ ರಾಜಕೀಯ ಸ್ವಾತಂತ್ರ್ಯ ಸಿಗಬೇಕು. ಆರ್ಥಿಕ ಮತ್ತು ಸಾಮಾಜಿಕವಾಗಿ ಮುಮದುವರೆದರೆ ರಾಜಕೀಯ ಸ್ವಾತಂತ್ರ್ಯವೂ ಲಭಿಸುತ್ತದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಶಿಕ್ಷಣ ಪಡೆಯಬೇಕು. ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದ ಡಾ.ಬಿ.ಆರ್. ಅಂಬೇಡ್ಕರ್ ಅವರ ಹೆಸರು ಇಂದು 'ಜೈ ಭೀಮ್' ಎಂಬ ಘೋಷಣೆಯ ಮೂಲಕ ಎಲ್ಲೆಡೆ ಮೊಳಗುತ್ತಿದೆ ಎಂದು ತಿಳಿಸಿದರು.

ನಾಡಿನ ಕಾಯಕ ಯೋಗಿ: ಚಿತ್ರದುರ್ಗ ಹಾಗೂ ಬಾಗಲಕೋಟೆ ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಮಾತನಾಡಿ, ಶ್ರೀ ಶಿವಯೋಗಿ ಸಿದ್ದರಾಮೇಶ್ವರರು ಕೇವಲ ಶರಣರಲ್ಲ, ಅವರು ಈ ನಾಡಿನ ಕಾಯಕ ಯೋಗಿ. ಅವರ ತತ್ವಗಳು ಮತ್ತು ಸಮಾಜಮುಖಿ ಕಾರ್ಯಗಳು ಇಂದಿನ ಸಮಾಜಕ್ಕೆ ಅತ್ಯಂತ ಅವಶ್ಯಕವಾಗಿವೆ. ಸಿದ್ದರಾಮೇಶ್ವರರ ಬಗ್ಗೆ ಇರುವ ಪವಾಡದ ಕಥೆಗಳಿಗಿಂತ ಅವರ ವ್ಯಕ್ತಿತ್ವದ ಆಳ ಮತ್ತು ಕಾಯಕ ನಿಷ್ಠೆ ಹೆಚ್ಚು ಮುಖ್ಯವಾದುದು ಎಂಬುದನ್ನು ಪ್ರತಿಪಾದಿಸುತ್ತವೆ. ಸಮಾಜಕ್ಕಾಗಿ ಕೆರೆ–ಕಟ್ಟೆ ಗಳನ್ನು ನಿರ್ಮಿಸಿದ ಅವರ ದೂರದೃಷ್ಟಿ ಇಂದಿನ ಜನಪ್ರತಿನಿಧಿಗಳಿಗೆ ಮಾದರಿಯಾಗಬೇಕು ಎಂದು ತಿಳಿಸಿದರು.

ಪ್ರಶಸ್ತಿ ಪ್ರದಾನ: ಇದೇ ವೇಳೆ ರಾಜ್ಯ ಸರ್ಕಾರದ ವತಿಯಿಂದ 2025–26ನೇ ಸಾಲಿನ 'ಕಾಯಕ ಯೋಗಿ ಸಿದ್ದರಾಮೇಶ್ವರ ಪ್ರಶಸ್ತಿ'ಯನ್ನು ತುಮಕೂರು ಜಿಲ್ಲೆಯ ಪ್ರೊ.ಎಸ್.ಜಿ ಸಿದ್ದರಾಮಯ್ಯ ಅವರಿಗೆ ಪ್ರಧಾನ ಮಾಡಲಾಯಿತು. ಹಾಗೆಯೇ ಕರ್ನಾಟಕ ಬೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ ರಚಿತ 'ಸಿದ್ದರಾಮ ಬೆಳ್ಳಿಕಿರಣ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.



ಅದ್ದೂರಿ ಮೆರವಣಿಗೆ...

'ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ' ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ನಗರದ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಿಂದ ಕೆ.ಆರ್. ಸರ್ಕಲ್, ಡಿ.ದೇವರಾಜ ಅರಸು ರಸ್ತೆ ಮಾರ್ಗವಾಗಿ ಕಲಾಮಂದಿರದವರೆಗೆ ಶ್ರೀ ಶಿವಯೋಗಿ ಸಿದ್ಧರಾಮೇಶ್ವರರ ಭಾವಚಿತ್ರವುಳ್ಳ ಬೆಳ್ಳಿ ರಥದ ಮೆರವಣಿಗೆ ಅದ್ದೂರಿಯಾಗಿ ನಡೆಯಿತು. ಮೆರವಣಿಗೆಗೆ ಚಾಲನೆ ನೀಡಿದ ಬೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಅವರನ್ನು ಸಾರೋಟಿನಲ್ಲಿ ಕರೆತರಲಾಯಿತು. ಕಳಸ ಹೊತ್ತ ಮಹಿಳೆಯರೊಂದಿಗೆ ನಗಾರಿ, ಬ್ಯಾಂಡ್ ಸೆಟ್, ಚಂಡೆ, ಹುಲಿವೇಶ, ಚಿಲಿಪಿಲಿ ಗೊಂಬೆ ಕುಣಿತ, ಡೊಳ್ಳು, ಪಟ್ಟ ಕುಣಿತ, ಪೂಜಾ ಕುಣಿತ, ನಾದಸ್ವರ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ಮೆರವಣಿಗೆಗೆ ಮೆರಗು ನೀಡಿದವು.

ಶಾಸಕ ಕೆ.ಹರೀಶ್ ಗೌಡ ಅಧ್ಯಕ್ಷತೆ ವಹಿಸಿದ್ದರು. ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್, ಶಾಸಕ ಅನಿಲ್ ಚಿಕ್ಕಮಾದು, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಡಾ.ಯತೀಂದ್ರ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ, ಕನ್ನಡ ಪುಸ್ತಕ ಪ್ರಾಧಿಕರದ ಅಧ್ಯಕ್ಷ ಡಾ. ಮಾನಸ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್ ಅಧ್ಯಕ್ಷ ಹೆಚ್.ಡಿ.ಗಣೇಶ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಸ್.ರಂಗಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಜೆ.ಮಂಜುನಾಥ್, ನಿರ್ದೇಶಕ ಮಂಜುನಾಥ್ ಸ್ವಾಮಿ, ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ, ಅಪರ ಜಿಲ್ಲಾಧಿಕಾರಿ ಐಶ್ವರ್ಯ ಹಾಗೂ ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತೋತ್ಸವ ಸಮಿತಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕಾಯಕ ಗ್ಯಾರಂಟಿ ನೀಡಿ...

ಪಂಚ ಗ್ಯಾರಂಟಿಗಳನ್ನು ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾಯಕ ಗ್ಯಾರಂಟಿಯನ್ನು ನೀಡುವ ಮೂಲಕ ಬೋವಿ ಸಮುದಾಯಕ್ಕೆ ನೆರವಾಗಬೇಕು. ನಮಗೆ ಯಾವುದೇ ಉದ್ಯೋಗದ ಅವಶ್ಯಕತೆ ಇಲ್ಲ. ಸ್ವಯಂ ಉದ್ಯೋಗವೇ ನಮ್ಮ ಕೈಯಲ್ಲಿದೆ. ಕಲ್ಲು ಒಡೆಯುವ ಕೆಲಸಕ್ಕೆ ಅವಕಾಶ ನೀಡಿದರೆ ನಾವೇ ಶ್ರಮಪಟ್ಟು ಹಣ ಸಂಪಾದನೆ ಮಾಡುವುದರೊಂದಿಗೆ ಸರ್ಕಾರಕ್ಕೆ ರಾಯಲ್ಟಿ ರೂಪದಲ್ಲಿ ಆದಾಯ ಬರುವಂತೆ ಮಾಡುತ್ತೇವೆ. ಆದ್ದರಿಂದ ಕೈ ಗಣಿಗಾರಿಕೆ ನಡೆಸಲು ಸಮುದಾಯವರಿಗೆ ಅವಕಾಶ ನೀಡಬೇಕು.

- ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಭೋವಿ ಗುರುಪೀಠ

ಕರ್ನಾಟಕದ ಮೇಲೆ ಆರ್‌ಎಸ್‌ಎಸ್ ಕಣ್ಣು

ಮೂಲಕ ನೀಡಿದ ಉತ್ತರ ಯಶಸ್ವಿಯಾಯಿತು. ಇದೇ ಮಾನದಂಡ ನೆರೆಯ ತೆಲಂಗಾಣದಲ್ಲೂ ಅನುಸರಿಸಿದ ಕಾಂಗ್ರೆಸ್ ಅಲ್ಲಿಯೂ ಅಧಿಕಾರದ ಚುಕ್ಕಾಣಿ ಹಿಡಿಯಿತು. ಆದರೆ ಉತ್ತರದ ರಾಜ್ಯಗಳ ವಿಷಯ ಬಂದಾಗ ಕಾಂಗ್ರೆಸ್ ತಮ್ಮ ಕಾರ್ಯ ಶೈಲಿಯನ್ನು ಬದಲಾಯಿಸಿ ಮೇಲ್ವರ್ಗದ ರಾಜಕಾರಣ ಮಾಡಿದ ಪರಿಣಾಮ ಸುಲಭವಾಗಿ ಗೆಲುವು ಸಾಧ್ಯವಿದ್ದ ಹರಿಯಾಣ ವಿಧಾನಸಭೆ ಚುನಾವಣೆಯಲ್ಲಿ ಮುಗ್ಗರಿಸಿತು ಎಂದು ಅಂಕಿ –ಅಂಶಗಳ ಸಮೇತ ಸಭೆಯಲ್ಲಿ ಪ್ರಮುಖರು ವಿವರಣೆ ನೀಡಿದ್ದಾರೆ.

ಮಹಾರಾಷ್ಟ್ರ, ಬಿಹಾರ ಚುನಾವಣೆ ಸಮಯದಲ್ಲಿ ಸಂಘ ಪರಿವಾರ ದಲಿತರು, ಹಿಂದುಳಿದ ಮತ್ತು ಆದಿವಾಸಿಗಳು ಹೆಚ್ಚಿನ ಪ್ರಮಾಣದಲ್ಲಿರುವ ಪ್ರದೇಶಗಳಲ್ಲಿ ಸಂಘಟನೆ ವಿಸ್ತರಣೆ ಮಾಡಿತು.

ದಲಿತರನ್ನು ಸಂಘಟನೆಯ ಮುಖ್ಯವಾಹಿನಿಗೆ ಸೇರ್ಪಡೆ ಮಾಡಿಕೊಂಡು ಅವರಲ್ಲಿದ್ದ ಅಸ್ಪೃಶ್ಯತೆ ಕೊರಗು ನಿವಾರಣೆ ಮಾಡಲಾಯಿತು. ಹಿಂದುಳಿದವರಿಗೆ ನಾಯಕತ್ವ ನೀಡಿ ಅವರಲ್ಲಿನ ಅಭದ್ರತೆಯ ಮನೋಭಾವ ನಿವಾರಣೆ ಮಾಡಲಾಯಿತು.ಈ ಕಾರ್ಯತಂತ್ರ ಯಶಸ್ವಿಯಾದ ಹಿನ್ನೆಲೆಯಲ್ಲಿ ಮಹಾರಾಷ್ಟ್ರದಲ್ಲಿ ಬಿಜೆಪಿ ಈ ಹಿಂದೆಂದೂ ಕಂಡರಿಯದ ಅಭೂತಪೂರ್ವ ದಿಗ್ವಿಜಯವನ್ನು ದಾಖಲಿಸಿದೆ.

ಬಿಜೆಪಿ ವೋಟ್ ಬ್ಯಾಂಕ್ ಸೃಷ್ಟಿಸಲು ನಿರ್ಧಾರ: ಕರ್ನಾಟಕದಲ್ಲಿನ ಒಟ್ಟು ಮತದಾರರ ಸಂಖ್ಯೆಯಲ್ಲಿ ಶೇ.40ರಷ್ಟು ಇತರೆ ಹಿಂದುಳಿದ ವರ್ಗಗಳಿದ್ದರೆ, ಶೇಕಡಾ 26ರಷ್ಟು ಒಕ್ಕಲಿಗ ಮತ್ತು ಲಿಂಗಾಯತ ಮತದಾರರಿದ್ದಾರೆ. ಉಳಿದಂತೆ ಅಲ್ಪಸಂಖ್ಯಾತ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಬ್ರಾಹ್ಮಣ ಮೊದಲಾದ ಸಮುದಾಯಕ್ಕೆ ಸೇರಿದ ಮತದಾರರಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಇತರೆ ಹಿಂದುಳಿದ ಮತ್ತು ದಲಿತ ಸಮುದಾಯದ ಮತಗಳು ಸಮೀಕರಣವಾಗಬೇಕು. ಇದಾದ ನಂತರ ಪ್ರಬಲ ಸಮುದಾಯಕ್ಕೆ ಸೇರಿದ ಮತಗಳು ತನ್ನಿಂತಾನೇ ಬರಲಿವೆ ಎಂದು ವಿವರಿಸಿದ್ದು, ಅದಕ್ಕೆ ಪೂರಕವಾಗಿ ಕೆಲಸ ಮಾಡಬೇಕು ಎಂದು ಹೇಳಿರುವುದಾಗಿ ತಿಳಿದು ಬಂದಿದೆ.

ಈ ಕಾರ್ಯಯೋಜನೆ ಜಾರಿಗೆ ತರಲು ಕರ್ನಾಟಕವನ್ನು ಸಂಘಟನಾತ್ಮಕವಾಗಿ ಮೂರು ಭಾಗಗಳಾಗಿ ವಿಂಗಡಿಸಲು ತೀರ್ಮಾನ ಕೈಗೊಳ್ಳಲಾಗಿದೆ. ಕರ್ನಾಟಕವನ್ನು ದಕ್ಷಿಣ ಪ್ರಾಂತ ಮತ್ತು ಉತ್ತರ ಪ್ರಾಂತ ಎಂದು ವಿಂಗಡಿಸಲಾಗಿದೆ. ಈಗ ಹೊಸದಾಗಿ ಕರಾವಳಿ ಪ್ರಾಂತ್ಯ ಎಂದು ಮೂರನೇ ಭಾಗ ಮಾಡಿ ಸಂಘಟನೆ ವಿಸ್ತರಣೆ ಮಾಡಲು ಸಭೆ ನಿರ್ಣಯಿಸಿದೆ. ಸಂಘ ಪರಿವಾರದ ಪ್ರಮುಖ ನಾಯಕರಾದ ಮುಕುಂದ್ ಅವರಿಗೆ ಸಂಪೂರ್ಣ ಜವಾಬ್ದಾರಿಯನ್ನು ನೀಡಲಾಗಿದೆ. ಇವರ ಜೊತೆಗೆ ನಾ.ತಿಪ್ಪೇಸ್ವಾಮಿ, ಜಿ.ಎಸ್.ಉಮಾಪತಿ, ರಾಘವೇಂದ್ರ ಕಾಗವಾಡ, ರಾಜೇಶ್ ಪದ್ಮಾರ್, ಎಕ್ಕಾ ಚಂದ್ರಶೇಖರ್ ಅವರನ್ನು ಉಸ್ತುವಾರಿಗಳಾಗಿ ನೇಮಿಸಲಾಗಿದೆ. ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಅರವತ್ತು ಜನರನ್ನು ಪೂರ್ಣಾವಧಿಯಾಗಿ ಕೆಲಸ ಮಾಡಲು ನಿಯೋಜಿಸಬೇಕು. ಈ 60 ಜನರು ಪ್ರಮುಖವಾಗಿ ದಲಿತರು ಮತ್ತು ಆದಿವಾಸಿಗಳ ಕೇರಿಗಳಲ್ಲಿ ಕೆಲಸ ಮಾಡಬೇಕು ಹಿಂದುಳಿದ ಸಮುದಾಯಗಳ ಪ್ರಮುಖರ ಜೊತೆ ನಿರಂತರ ಸಂಪರ್ಕದಲ್ಲಿ ಇರಬೇಕು ಎಂದು ನಿರ್ಧರಿಸಲಾಗಿದೆ.

ಶ್ರೀರಂಗಪಟ್ಟಣದಲ್ಲಿ ಮೈಸೂರಿನ ರೌಡಿಶೀಟರ್ ಭೀಕರ ಹತ್ಯೆ

ಬೆಂಗಳೂರು ರಸ್ತೆಯ ಹಳ್ಳಿ ಮನೆ ಹೊಟೇಲ್ ಹಿಂಭಾಗ ಪೊದೆ ಒಂದರಲ್ಲಿ ದೇಹ ಎಸೆದು ಹೋಗಿದ್ದಾರೆ. ಈತನ ಕೈ, ಕಾಲು, ಹೊಟ್ಟೆ ಮತ್ತು ತಲೆ ಸೇರಿದಂತೆ ದೇಹದ ನಾನಾ ಭಾಗಗಳಿಗೆ ಅಟ್ಟಾಡಿಸಿಕೊಂಡು ಹಲ್ಲೆ ಮಾಡಿ ಕೊಲೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕಳೆದ ಒಂದು ತಿಂಗಳಿಂದ ಮೈಸೂರು ಮತ್ತು ಮಂಡ್ಯ ಭಾಗದಲ್ಲಿ ರಾತ್ರಿ ವೇಳೆ ಈತ ಓಡಾಡಿಕೊಂಡಿದ್ದ ಎಂಬ ಮಾಹಿತಿ ಲಭ್ಯವಾಗಿದೆ. ಹಳೆ ದ್ವೇಷದ ಹಿನ್ನೆಲೆಯಲ್ಲಿ ಈತನ ಜೊತೆಗಿದ್ದವರೇ ಸಂಚು ರೂಪಿಸಿ ಈ ಕೃತ್ಯ ಎಸಗಿರಬಹುದು ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಹಲವು ಪ್ರಕರಣಗಳಲ್ಲಿ ಬೇಕಾಗಿದ್ದ ಆರೋಪಿ: ಕೊಲೆಯಾದ ಸಾಹಿಲ್ ಅಲಿಯಾಸ್ ಚುವ್ವಾ ಮೇಲೆ ಮೈಸೂರಿನ ಉದಯಗಿರಿ, ಎನ್.ಆರ್.ಮೊಹಲ್ಲಾ, ಮಂಡಿ ಮೊಹಲ್ಲಾ ಹಾಗೂ ವಿ.ವಿ.ಪುರಂ ಪೊಲೀಸ್ ಠಾಣೆಗಳಲ್ಲದೆ ಸೇರಿದಂತೆ ತುಮಕೂರಿನಲ್ಲೂ ಹಲವು ಗಂಭೀರ ಪ್ರಕರಣಗಳಲ್ಲಿ ಭಾಗಿಯಾಗಿದ್ದ. ಸುಮಾರು 15ಕ್ಕೂ ಹೆಚ್ಚು ಕೇಸ್‌ಗಳಲ್ಲಿ ಈತ ಪೊಲೀಸರಿಗೆ ಬೇಕಾಗಿದ್ದ ಎನ್ನಲಾಗಿದೆ.

ಸ್ಥಳಕ್ಕೆ ಪೊಲೀಸರ ಭೇಟಿ: ವಿಷಯ ತಿಳಿಯುತ್ತಿದ್ದಂತೆಯೇ ಎಸ್ಪಿ ಶೋಭರಾಣಿ, ಎಎಸ್‌ಪಿ ತಿಮ್ಮಯ್ಯ, ಡಿವೈಎಸ್‌ಪಿ ಕೃಷ್ಣಕುಮಾರ್, ಟೌನ್ ಪೊಲೀಸ್ ಠಾಣೆ ಸಿಪಿಐ ಕುಮಾರ್ ಹಾಗೂ ಪಿಎಸ್‌ಐ ಗಳಾದ ವಿವೇಕಾನಂದ, ಆನಂದ್ ಇತರರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ ದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದ್ದು, ಘಟನಾ ಸ್ಥಳದಲ್ಲಿ ಮಹಜರು ನಡೆಸಲಾಗಿದೆ.

ಈ ಸಂಬಂಧ ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳ ಪತ್ತೆಗಾಗಿ ಪೊಲೀಸರು ಜಾಲ ಬೀಸಿದ್ದಾರೆ.

ಇಬ್ಬರಿಗೆ ಇರಿತ; ಪ್ರಯಾಣಿಕರು, ಗ್ರಾಮಸ್ಥರಿಂದ ಧರ್ಮದೇಟು

ಗೇಟ್‌ಮ್ಯಾನ್ ಕುಮಾರ್ ಎಂದು ಗುರುತಿಸಲಾಗಿದ್ದು, ಅವರನ್ನು ಮದ್ದೂರಿನ ರೈಲ್ವೆ ಆಸ್ಪತ್ರೆ ಮತ್ತು ಮದ್ದೂರು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥ ಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಮೈಸೂರಿನಿಂದ ಬೆಂಗಳೂರಿಗೆ ತೆರಳುತ್ತಿದ್ದ ರಾಜ್ಯ ರಾಣಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಮೈಸೂರಿನ ಯುವಕರ ಗುಂಪೊಂದು ರೈಲು ಮೈಸೂರು ಬಿಟ್ಟಾಗಿನಿಂದ ಬೋಗಿಗಳಲ್ಲಿ ಅತ್ತಿಂದಿತ್ತ ಓಡಾ ಡುತ್ತಾ, ಕೂಗಾಡುತ್ತಾ ಗಲಾಟೆ ಮಾಡಿ ಪ್ರಯಾಣಿಕರಿಗೆ ತೀವ್ರ ಮುಜುಗರವನ್ನುಂಟು ಮಾಡಿದರಲ್ಲದೆ, ಅವರಲ್ಲಿ ಭಯದ ವಾತಾವರಣ ಸೃಷ್ಟಿಸಿದರು. ಕೊನೆಗೆ ಟಿಕೆಟ್ ವಿಚಾರಕ್ಕೆ ಪರಸ್ಪರ ಕಚ್ಚಾಡುತ್ತಾ, ಅಂತಿಮವಾಗಿ ಹೊಡೆದಾಡಲಾರಂಭಿಸಿದ್ದಾರೆ. ಇದನ್ನೆಲ್ಲಾ ನೋಡುತ್ತಿದ್ದ ಪ್ರಯಾಣಿಕ ಶಿವಕುಮಾರ್, ಅವರಿಗೆ ತಿಳುವಳಿಕೆ ಹೇಳಿ ಈ ರೀತಿ ಜಗಳ ಆಡಬೇಡಿ ಎಂದು ಹೇಳಿ, ಜಗಳ ಬಿಡಿಸಲು ಮುಂದಾಗಿದ್ದಾರೆ.

ಇದರಿಂದ ಕುಪಿತಗೊಂಡ ಗುಂಪು ತಾವು ಜಗಳ ನಿಲ್ಲಿಸಿ, ಸಮಾಧಾನಪಡಿಸಲು ಬಂದ ಶಿವಕುಮಾರ್ ಅವರನ್ನು, ಅವಾಚ್ಯ ಶಬ್ದಗಳಿಂದ ನಿಂದಿಸಿ ಮನಬಂದಂತೆ ಚಾಕುವಿನಿಂದ ಇರಿದಿದ್ದಾರೆ. ಈ ವೇಳೆ ಆತಂಕಗೊಂಡ ಶಿವಕುಮಾರ್, ಜೀವ ಉಳಿಸಿಕೊಳ್ಳುವ ಸಲುವಾಗಿ ರೈಲಿನ ಚೈನ್ ಎಳೆದು ಟ್ರೈನ್ ಅನ್ನು ನಿಲ್ಲಿಸಿದ್ದಾರೆ. ರೈಲು ನಿಲ್ಲುತ್ತಿದ್ದಂತೆ ಆರೋಪಿಗಳು ಇಳಿದು ಪರಾರಿಯಾಗಲು ಯತ್ನಿಸಿದ್ದಾರೆ. ಈ ವೇಳೆ ರೈಲಿನ ಚೈನ್ ಅನ್ನು ಎಳೆದವರು ಯಾರು? ಎಂದು ಪ್ರಶ್ನಿಸಲು ಬಂದ ರೈಲ್ವೆ ಗೇಟ್‌ಮ್ಯಾನ್ ಕುಮಾರ್ ಅವರನ್ನು ಈ ಪುಂಡರು ತಳ್ಳಿ, ಅವರಿಗೂ ಚಾಕುವಿನಿಂದ ಇರಿದು ಓಡಿ ಹೋಗಲು ಯತ್ನಿಸಿದ್ದಾರೆ.

ಅಷ್ಟೊತ್ತಿಗಾಗಲೇ ಗುಂಪಿನ ಅಟ್ಟಹಾಸ ನೋಡಿ ಬೇಸತ್ತಿದ್ದ ರೈಲಿನಲ್ಲಿದ್ದ ಪ್ರಯಾಣಿಕರು ಅವರನ್ನು ಹಿಡಿಯಲು ಮುಂದಾಗಿದ್ದಾರೆ. ಗಲಾಟೆ ಕಂಡು ಜಮಾಯಿಸಿದ್ದ ಸ್ಥಳೀಯ ಗ್ರಾಮಸ್ಥರೂ ಸಹ ನೆರವಿಗೆ ಬಂದು, ಓಡಿ ಹೋಗುತ್ತಿದ್ದ ದುಷ್ಕರ್ಮಿಗಳನ್ನು ಬೆನ್ನತ್ತಿದ್ದಾರೆ. ಪ್ರಯಾಣಿಕರು ಮತ್ತು ಗ್ರಾಮಸ್ಥರು ಬೆನ್ನತ್ತಿದ್ದನ್ನು ಕಂಡ ದುಷ್ಕರ್ಮಿಗಳು ಚಾಕು ತೋರಿಸಿ, ಬೆದರಿಕೆ ಹಾಕಿದ್ದಾರೆ. ಇದರಿಂದ ಕುಪಿತಗೊಂಡ ಗ್ರಾಮಸ್ಥರು, ಅವರ ಬಿಡದೇ ಬೆನ್ನತ್ತಿ ಹಿಡಿದು ಚೆನ್ನಾಗಿ ಥಳಿಸಿ, ಪೊಲೀಸರಿಗೆ ಒಪ್ಪಿಸಿದ್ದಾರೆ. ಆರೋಪಿಗಳನ್ನು ಮೈಸೂರಿನ ಕ್ಯಾತಮಾರನಹಳ್ಳಿಯ ಮುಷ್ತಾಕ್ ಖುರೇಷಿ, ಶುಭಾನ್ ಖುರೇಷಿ, ಸುಹೇಬ್ ಖಾನ್, ವಸೀಂ ಮತ್ತು ಸುಜಾತ ಅವರನ್ನು ಪೊಲೀಸರು ತಮ್ಮ ವಶಕ್ಕೆ ಪಡೆದು ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದಾರೆ. ಈಗ, ರೈಲಿನಲ್ಲಿ ಯಾವ ಧೈರ್ಯದ ಮೇಲೆ ಪ್ರಯಾಣ ಮಾಡುವುದು ಎಂದು ಪ್ರಯಾಣಿಕರು ಆತಂಕದಿಂದ ಪ್ರಶ್ನಿಸುವಂತಾಗಿದೆ. ಇತ್ತೀಚಿನ ದಿನಗಳಲ್ಲಿ ರೈಲಿನಲ್ಲಿ ಹಲವಾರು ಸಣ್ಣಪುಟ್ಟ ಗಲಾಟೆಗಳು ನಡೆಯುತ್ತಲೇ ಇವೆ. ಪ್ರಯಾಣಿಕರಿಗೆ ರಕ್ಷಣೆ ಇಲ್ಲದಂತಾಗಿದೆ ಎಂಬ ಮಾತುಗಳು ಸಹ ಕೇಳಿ ಬರುತ್ತಿವೆ. ಮದ್ದೂರು ರೈಲ್ವೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮಾರಕಾಸ್ತ್ರದಿಂದ ಕೊಚ್ಚಿ ಸಹೋದರರ ಬರ್ಬರ ಹತ್ಯೆ

ಯವರು ಸುಧಾ, 2ನೇಯವರು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ಮೂಲದ ಶಿಕ್ಷಕಿ ಕಾಮಾಕ್ಷಿ ಎನ್ನಲಾಗಿದೆ. ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಕಾಮಾಕ್ಷಿಯವರು ಕಳೆದ ಎರಡ್ಮೂರು ವರ್ಷಗಳ ಹಿಂದೆ ನಿವೃತ್ತರಾಗಿ ತಮ್ಮ ಮಕ್ಕಳೊಂದಿಗೆ ಶ್ರೀರಂಗಪಟ್ಟಣದಲ್ಲಿ ವಾಸಿಸುತ್ತಿದ್ದರು ಎನ್ನಲಾಗಿದೆ. ಆದರೆ ಕಾಮಾಕ್ಷಿಯವರ ಪುತ್ರ ಡಿಸ್ಕವರಿ ರಾಘು ಎಂಬಾತ ಕಳೆದ 3 ವರ್ಷಗಳ ಹಿಂದೆ ಆಸ್ತಿಗಾಗಿ ತನ್ನ ತಂದೆ ರಮೇಶ್ ರಾಜು ಅವರನ್ನು ಅರ್ಜುನಹಳ್ಳಿಯಲ್ಲಿರುವ ತೋಟದ ಮನೆಯಲ್ಲಿ ದಾರುಣವಾಗಿ ಹತ್ಯೆ ಮಾಡಿ ಜೈಲು ಸೇರಿದ್ದ ಎನ್ನಲಾಗಿದೆ. ಬಳಿಕ ಜಾಮೀನಿನ ಮೇಲೆ ಜೈಲಿನಿಂದ ರಾಘು ಹೊರ ಬಂದಿದ್ದ. ತಂದೆ ಕೊಲೆ ದ್ವೇಷ ಹಾಗೂ ಆಸ್ತಿ ಕಲಹದಿಂದ ಆಕ್ರೋಶಗೊಂಡಿದ್ದ ಲೇ.ರಮೇಶ್ ರಾಜು ಅವರ ಮೊದಲ ಹೆಂಡತಿ ಸುಧಾ ಅವರ ಪುತ್ರ ರೋಹಿತ್, ಆಸ್ತಿ ಹಂಚಿಕೊಳ್ಳುವ ವಿಚಾರವಾಗಿ ತನ್ನ ತಂದೆಯ ಕಿರಿ ಹೆಂಡತಿ ಕಾಮಾಕ್ಷಿ ಮಕ್ಕಳಾದ ಡಿಸ್ಕವರಿ ರಾಘು, ಹರ್ಷವರ್ಧನ್ ಅವರನ್ನು ರಾಜೀ ಪಂಚಾಯಿತಿಗೆ ಅರ್ಜುನಹಳ್ಳಿಗೆ ಬರುವಂತೆ ತಿಳಿಸಿದ್ದ. ಅದರಂತೆ ಕಳೆದ 3 ದಿನಗಳಿಂದ ಶ್ರೀರಂಗಪಟ್ಟಣದಿಂದ ಅರ್ಜುನ ಹಳ್ಳಿಗೆ ಆಗಮಿಸಿ ಡಿಸ್ಕವರಿ ರಾಘು, ಹರ್ಷವರ್ಧನ್ ವಾಪಸ್ ಹೋಗುತ್ತಿದ್ದರು. ಆದರೆ ಬುಧವಾರ ಆಸ್ತಿ ಹಂಚಿಕೊಳ್ಳುವ ವಿಚಾರದಲ್ಲಿ ಮಾತಿನ ಚಕಮಕಿ ನಡೆದಿದ್ದು, ಏಕಾಏಕಿ ಮಚ್ಚಿನಿಂದ ರೋಹಿತ್ ಈ ಇಬ್ಬರು ಸೋದರರ ಮೇಲೆ ಮನಬಂದಂತೆ ಅವರ ತಲೆ, ಮುಖ ಸೇರಿದಂತೆ ಸಿಕ್ಕ ಸಿಕ್ಕಂತೆ ಹಲ್ಲೆ ಮಾಡಿದ್ದಾನೆ.

ಈ ವೇಳೆ ತೀವ್ರ ರಕ್ತ ಸ್ರಾವವಾಗಿ ಹರ್ಷವರ್ಧನ್ ಸ್ಥಳದಲ್ಲೇ ಸಾವನ್ನಪ್ಪಿದರೆ, ತಪ್ಪಿಸಿಕೊಂಡು ಓಡುತ್ತಿದ್ದ ಡಿಸ್ಕವರಿ ರಾಘುನನ್ನು ಬೆನ್ನತ್ತಿದ ರೋಹಿತ್ ತಾಲೂಕಿನ ಕಲ್ಯಾಣಪುರ ಗ್ರಾಮದ ಸಮೀಪದ ರಸ್ತೆ ಬದಿ ಮಚ್ಚಿನಿಂದ ಕೊಚ್ಚಿ ಬರ್ಬರವಾಗಿ ಹತ್ಯೆ ಮಾಡಿದ್ದಾನೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕೆ.ಆರ್.ನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಶಿವಪ್ರಕಾಶ್ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿ, ಸಣ್ಣಪುಟ್ಟದಾಗಿ ಗಾಯಗೊಂಡಿದ್ದ ಆರೋಪಿ ರೋಹಿತ್‌ನನ್ನು ವಶಕ್ಕೆ ಪಡೆದು ಆತನಿಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಯಲ್ಲಿ ಚಿಕಿತ್ಸೆ ಕೊಡಿಸಿದ್ದು, ಪ್ರಕರಣ ಸಂಬಂಧ ಮುಂದಿನ ತನಿಖೆ ಕೈಗೊಂಡಿದ್ದಾರೆ. ಈ ಸಂಬಂಧ ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜನಪರ ಯೋಜನೆಗಳ ಹರಿಕಾರ

ಬಿ.ಎಸ್.ಯಡಿಯೂರಪ್ಪ



ಬಡ ರೈತ ಕುಟುಂಬದಲ್ಲಿ ಜನಿಸಿದ ಬಿ.ಎಸ್.ಯಡಿಯೂರಪ್ಪನವರು, ತಮ್ಮ ಛಲ ಮತ್ತು ಜನಪರ ಕಾಳಜಿಯಿಂದ ಶಿಕಾರಿಪುರದಿಂದ ಕರ್ನಾಟಕದ ಮುಖ್ಯಮಂತ್ರಿ ಪದವಿಯವರೆಗೆ ಬೆಳೆದ ಸಾಹಸಮಯ ಪಯಣವನ್ನು ಈ ಲೇಖನ ವಿವರಿಸುತ್ತದೆ. ಅವರ ಹೋರಾಟ, ಭಾಗ್ಯಲಕ್ಷ್ಮಿ ಮತ್ತು ರೈತ ಬಂಧುಗಳಂತಹ ಜನಪರ ಯೋಜನೆಗಳು, ದಕ್ಷಿಣ ಭಾರತದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದ ಅವರ ಪಾತ್ರವನ್ನು ಇದು ಪರಿಚಯಿಸುತ್ತದೆ.

ಸಂಘದ ಶಿಸ್ತು ಮತ್ತು ರಾಜಕೀಯ ಪಾದಾರ್ಪಣೆ



ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಶಿಸ್ತಿನಲ್ಲಿ ತಮ್ಮ ಜೀವನವನ್ನು ರೂಪಿಸಿಕೊಂಡ ಯಡಿಯೂರಪ್ಪನವರು, ಸಂಘದ ಪ್ರೇರಣೆಯಿಂದಲೇ ತಮ್ಮ 22ನೇ ವಯಸ್ಸಿನಲ್ಲಿ ಶಿಕಾರಿಪುರಕ್ಕೆ ಬಂದರು. 1975ರಲ್ಲಿ ಶಿಕಾರಿಪುರ ಪುರಸಭೆಯ ಸದಸ್ಯರಾಗಿ ಆಯ್ಕೆಯಾಗುವ ಮೂಲಕ ಸಾರ್ವಜನಿಕ ಜೀವನ ಪ್ರವೇಶಿಸಿದರು. ತುರ್ತು ಪರಿಸ್ಥಿತಿಯ ವಿರುದ್ಧ ಧ್ವನಿ ಎತ್ತಿ ಜೈಲು ವಾಸ ಅನುಭವಿಸಿದ ಅವರು, ಅಲ್ಲಿಂದಾಚೆಗೆ ಎಂದೂ ಹಿಂತಿರುಗಿ ನೋಡಲಿಲ್ಲ.

ನಿರಂತರ ಹೋರಾಟ; ಸೋಲೇ ಜಯದ ಸೋಪಾನ



ಯಡಿಯೂರಪ್ಪನವರ ಜೀವನದ ರಹಸ್ಯ ಇರುವುದೇ ಅವರ 'ಹೋರಾಟ'ದಲ್ಲಿ. ಶಿಕಾರಿಪುರದ ಪುರಸಭಾಧ್ಯಕ್ಷರಿಂದ ರಾಜ್ಯದ ಮುಖ್ಯಮಂತ್ರಿ ಪದವಿಯವರೆಗೆ ಅವರು ಕ್ರಮಿಸಿದ ಹಾದಿ ಕಲ್ಲು-ಮುಳ್ಳುಗಳಿಂದ ಕೂಡಿತ್ತು.

ರೈತ ಪರ ಕಾಳಜಿ: ಕಾಗೋಡು ಸತ್ಯಾಗ್ರಹದಲ್ಲಿ ಭಾಗವಹಿಸಿ ಗೇಣಿದಾರರ ಹಿತರಕ್ಷಣೆಗಾಗಿ ಹೋರಾಡಿದರು. ಬಗರ್ ಹುಕುಂ ಸಾಗುವಳಿ ಮಾಡುವ ರೈತರ ಪರವಾಗಿ ನಡೆಸಿದ ಹೋರಾಟ ಇಂದಿಗೂ ಸ್ಮರಣೀಯ.

ಸದನದ ಶಕ್ತಿ: 1983ರಲ್ಲಿ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದಾಗ ಅವರು ಬಿಜೆಪಿಯ ಕೆಲವೇ ಸದಸ್ಯರಲ್ಲಿ ಒಬ್ಬರಾಗಿದ್ದರು. ಆದರೆ ವಿರೋಧ ಪಕ್ಷದ ನಾಯಕರಾಗಿ ಅವರ ಸಿಡಿಗುಂಡಿನ ಮಾತುಗಳು ವಿಧಾನಸೌಧದ ಗೋಡೆಗಳನ್ನು ನಡುಗಿಸುತ್ತಿದ್ದವು.

ದಕ್ಷಿಣ ಭಾರತದಲ್ಲಿ ಕಮಲ ಅರಳಿಸಿದ ಪವಾಡ

ಭರತಖಂಡಕ್ಕೆ ಸ್ವಾತಂತ್ರ್ಯ ಬಂದು ದಶಕಗಳಾದರೂ ದಕ್ಷಿಣ ಭಾರತದಲ್ಲಿ ಬಿಜೆಪಿಗೆ ಪ್ರವೇಶ ದೊರೆಯುವುದಿಲ್ಲ ಎಂಬ ಸಂಶಯವಿತ್ತು. ಆದರೆ ಯಡಿಯೂರಪ್ಪನವರು ಆ ಸಂಶಯವನ್ನು ಹುಸಿಗೊಳಿಸಿ ಕರ್ನಾಟಕದಲ್ಲಿ ಮೊದಲ ಬಾರಿಗೆ ಬಿಜೆಪಿ ಸರ್ಕಾರವನ್ನು ರಚಿಸಿ ಪವಾಡ ಮಾಡಿದರು. ಬಿಜೆಪಿ ಪಕ್ಷವನ್ನು ಕೇವಲ ನಗರ ಕೇಂದ್ರಿತ ಅಥವಾ ಮಧ್ಯಮ ವರ್ಗದ ಪಕ್ಷವಾಗಿ ಉಳಿಸದೆ, ಅದನ್ನು ಬಡವರ, ದೀನದಲಿತರ ಮತ್ತು ಹಳ್ಳಿಗಳ ಪಕ್ಷವಾಗಿ ಬೆಳೆಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.

ಜನಪರ ಯೋಜನೆಗಳ ಹರಿಕಾರ (ವಿಕಾಸದ ನಾಯಕ)

ಮುಖ್ಯಮಂತ್ರಿಯಾಗಿ ಮತ್ತು ಉಪಮುಖ್ಯಮಂತ್ರಿಯಾಗಿ ಯಡಿಯೂರಪ್ಪನವರು ನೀಡಿದ ಬಜೆಟ್‌ಗಳು ಇಡೀ ದೇಶಕ್ಕೆ ಮಾದರಿಯಾದವು. ಅವರ ಕೆಲವು ಪ್ರಮುಖ ಯೋಜನೆಗಳು ಇಲ್ಲಿವೆ:







ಭಾಗ್ಯಲಕ್ಷ್ಮಿ ಯೋಜನೆ: ಬಡ ಕುಟುಂಬದ ಹೆಣ್ಣು ಮಕ್ಕಳ ಭವಿಷ್ಯಕ್ಕಾಗಿ ತಂದ ಕ್ರಾಂತಿಕಾರಿ ಯೋಜನೆ.

ರೈತ ಬಂಧು ಮತ್ತು ಸಾಲ ಮನ್ನಾ: ರೈತರ ಕಷ್ಟಕ್ಕೆ ಸ್ಪಂದಿಸಿ ಶೂನ್ಯ ಬಡ್ಡಿ ದರದಲ್ಲಿ ಸಾಲ ಮತ್ತು ಸಾಲ ಮನ್ನಾ ಸೌಲಭ್ಯ ನೀಡಿದರು.

ಸೈಕಲ್ ವಿತರಣೆ: ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಉತ್ತೇಜನ ನೀಡಲು ಸೈಕಲ್ ವಿತರಣೆ ಮಾಡಿದರು.

ಸಂಧ್ಯಾ ಸುರಕ್ಷಾ: ಹಿರಿಯ ನಾಗರಿಕರಿಗೆ ಮಾಸಿಕ ಪಿಂಚಣಿ ಒದಗಿಸುವ ಮೂಲಕ ಅವರಿಗೆ ನೆರಳಾದರು.

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ: ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರಕಿಸಿಕೊಡುವಲ್ಲಿ ದೆಹಲಿಯ ಮಟ್ಟದಲ್ಲಿ ನಿಯೋಗ ಕರೆದೊಯ್ದು ಧರಣಿ ಹೂಡುವ ಎಚ್ಚರಿಕೆ ನೀಡಿ ಯಶಸ್ವಿಯಾದರು.






ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆಯ ಬೂಕನಕೆರೆಯಲ್ಲಿ ಜನಿಸಿದ ಯಡಿಯೂರಪ್ಪ ಎಂಬ ಹೆಸರಿನ ಕಮಲ, ಶಿಕಾರಿಪುರದಲ್ಲಿ ಅರಳಿ ಕರ್ನಾಟಕದ ಉದ್ದಗಲಕ್ಕೂ ತನ್ನ ಸುಗಂಧವನ್ನು ಹರಡಿದ್ದು ಒಂದು ಸಾಹಸಮಯ ಗಾಥೆ. ಬಡ ರೈತ ಕುಟುಂಬದಲ್ಲಿ ಜನಿಸಿ, ಬದುಕಿಗಾಗಿ ತರಕಾರಿ ಮಾರಿ, ಜೀವನವನ್ನು ರೂಪಿಸಿಕೊಂಡ ಈ ವ್ಯಕ್ತಿಯ ಏಳಿಗೆಯ ಹಿಂದೆ ಯಾವುದೇ ರಾಜಕೀಯ ವಂಶಪಾರಂಪರ್ಯದ ಬಲವಿರಲಿಲ್ಲ; ಇದ್ದದ್ದು ಕೇವಲ ಛಲ ಮತ್ತು ಜನಪರ ಕಾಳಜಿ.

ವ್ಯಕ್ತಿತ್ವದ ವೈವಿಧ್ಯತೆ: ಭಾವುಕತೆ ಮತ್ತು ಸೌಜನ್ಯ

ಯಡಿಯೂರಪ್ಪನವರು ಹೊರನೋಟಕ್ಕೆ ಸಿಡಿಮಿಡಿಗೊಳ್ಳುವ ಸಿಟ್ಟಿನ ಮನುಷ್ಯನಂತೆ ಕಂಡರೂ, ಅಂತರಂಗದಲ್ಲಿ ಅವರು ತೀರಾ ಭಾವುಕರು. ಹಾವೇರಿಯಲ್ಲಿ ರೈತನ ಮಗ ಪೊಲೀಸ್ ಗುಂಡೇಟಿಗೆ ಬಲಿಯಾದಾಗ ಆ ತಾಯಿ ಕಂಡು ಕಣ್ಣೀರಿಟ್ಟ ಅವರ ಹೃದಯವಂತಿಕೆ ಅಪಾರ. ರಾಜಕೀಯವಾಗಿ ಎಷ್ಟೇ ದೊಡ್ಡ ಸ್ಥಾನದಲ್ಲಿದ್ದರೂ, ಸಾಮಾನ್ಯ ಕಾರ್ಯಕರ್ತರನ್ನು ಕಂಡು ಕುಶಲೋಪರಿ ವಿಚಾರಿಸುವ ಅವರ ವಿನಯ ಮತ್ತು ಸಜ್ಜನಿಕೆ ಎಲ್ಲರಿಗೂ ಮಾದರಿಯಾಗಿದೆ.

ಜಾತ್ಯಾತೀತ ಬದ್ಧತೆ, ಸಾಮಾಜಿಕ ನ್ಯಾಯ

ಯಡಿಯೂರಪ್ಪನವರು ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗಲಿಲ್ಲ. ಮಡಿವಾಳ, ಗಾಣಿಗ, ನೇಕಾರ, ಕುರುಬ ಸೇರಿದಂತೆ ಹತ್ತಾರು ಸಣ್ಣ ಸಣ್ಣ ಸಮುದಾಯಗಳಿಗೆ ರಾಜಕೀಯ ಪ್ರಾತಿನಿಧ್ಯ ನೀಡಿದರು. ಮಠ-ಮಾನ್ಯಗಳಿಗೆ ಅನುದಾನ ನೀಡುವ ಮೂಲಕ ಸಂಸ್ಕೃತಿ ಮತ್ತು ಶಿಕ್ಷಣದ ಬೆಳವಣಿಗೆಗೆ ಸಹಕರಿಸಿದರು. ದೇವರಾಜ ಅರಸು ಅವರ ನಂತರ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಇಷ್ಟೊಂದು ಬದ್ಧತೆ ತೋರಿದ ಮತ್ತೊಬ್ಬ ನಾಯಕ ಸಿಗುವುದು ವಿರಳ.



ಸಂಘದ ಗರಡಿಯಿಂದ ರಾಜಕೀಯ ಪ್ರಗತಿ



ಕರ್ನಾಟಕದ ರಾಜಕೀಯ ವಲಯದಲ್ಲಿ ಪ್ರೀತಿಯಿಂದ 'ರಾಜಾಹುಲಿ' ಎಂದೇ ಕರೆಸಿಕೊಳ್ಳುವ ಬಿ.ಎಸ್.ಯಡಿಯೂರಪ್ಪ ಅವರ ಸುದೀರ್ಘ 50 ವರ್ಷಗಳ ರಾಜಕೀಯ ಪಯಣದ ಹಿಂದೆ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಮಹತ್ತರ ಪಾತ್ರ ವಹಿಸಿದೆ. ಸ್ವತಃ ಯಡಿಯೂರಪ್ಪನವರೇ ಹಲವು ಬಾರಿ ಹೇಳಿಕೊಂಡಿರುವಂತೆ, ಅವರು ಇಂದು ಈ ಹಂತಕ್ಕೆ ತಲುಪಲು ಆರ್‌ಎಸ್‌ಎಸ್ ನೀಡಿದ ಶಿಸ್ತು ಮತ್ತು ತರಬೇತಿಯೇ ಮುಖ್ಯ ಕಾರಣ. ಮಂಡ್ಯ ಜಿಲ್ಲೆಯ ಬೂಕನಕೆರೆಯಲ್ಲಿ ಜನಿಸಿದ ಯಡಿಯೂರಪ್ಪನವರು ಶಿಕಾರಿಪುರಕ್ಕೆ ವಲಸೆ ಬಂದ ನಂತರ ಆರ್‌ಎಸ್‌ಎಸ್‌ನ ಸಕ್ರಿಯ ಕಾರ್ಯಕರ್ತರಾಗಿ ಗುರುತಿಸಿಕೊಂಡರು. 1970ರ ದಶಕದಲ್ಲಿ ಆರ್‌ಎಸ್‌ಎಸ್‌ನ ತಾಲೂಕು ಘಟಕದ ಜವಾಬ್ದಾರಿಯನ್ನು ಹೊತ್ತುಕೊಂಡು ಸಂಘಟನೆಯನ್ನು ಬಲಪಡಿಸಿದರು. ಆರ್‌ಎಸ್‌ಎಸ್ ಪ್ರೇರಣೆಯಿಂದ ಜನಸಂಘವನ್ನು ಸೇರಿದ ಇವರು, 1972ರಲ್ಲಿ ಶಿಕಾರಿಪುರ ಪುರಸಭೆಯ ಸದಸ್ಯರಾಗಿ ಆಯ್ಕೆಯಾಗುವ ಮೂಲಕ ಸಕ್ರಿಯ ಚುನಾವಣಾ ರಾಜಕೀಯಕ್ಕೆ ಕಾಲಿಟ್ಟರು. 1975ರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರ ಮೇಲೆ ನಡೆದ ಕ್ರಮಗಳ ವಿರುದ್ಧ ಧ್ವನಿ ಎತ್ತಿದ ಯಡಿಯೂರಪ್ಪನವರು, ಸುಮಾರು 45 ದಿನಗಳ ಕಾಲ ಜೈಲುವಾಸ ಅನುಭವಿಸಿದರು. ಬಳ್ಳಾರಿ ಮತ್ತು ಶಿವಮೊಗ್ಗದ ಜೈಲುಗಳಲ್ಲಿ ಕಳೆದ ಈ ದಿನಗಳು ಅವರ ರಾಜಕೀಯ ವ್ಯಕ್ತಿತ್ವವನ್ನು ಮತ್ತಷ್ಟು ಗಟ್ಟಿಗೊಳಿಸಿದವು. ವಿಧಾನಸಭೆಯಲ್ಲಿ ತಮ್ಮ ವಿದಾಯದ ಭಾಷಣ ಮಾಡುವಾಗ ಯಡಿಯೂರಪ್ಪನವರು ಅತ್ಯಂತ ಭಾವುಕರಾಗಿ ಆರ್‌ಎಸ್‌ಎಸ್ ಕೊಡುಗೆಯನ್ನು ಸ್ಮರಿಸಿದ್ದರು. 'ನಾನು ಇಂದು ಈ ಮಟ್ಟಕ್ಕೆ ಬೆಳೆಯಲು ಆರ್‌ಎಸ್‌ಎಸ್ ನೀಡಿದ ತರಬೇತಿಯೇ ಕಾರಣ. ಸಂಘದ ಸಂಸ್ಕಾರವನ್ನು ನಾನು ಎಂದಿಗೂ ಮರೆಯಲು ಸಾಧ್ಯವಿಲ್ಲ. ನನ್ನ ಉಸಿರಿರುವ ತನಕ ಬಿಜೆಪಿಯನ್ನು ಕಟ್ಟಲು ಶ್ರಮಿಸುತ್ತೇನೆ' ಎಂದಿದ್ದರು. 1980ರಲ್ಲಿ ಬಿಜೆಪಿ ಸ್ಥಾಪನೆಯಾದಾಗ ಶಿವಮೊಗ್ಗ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಜವಾಬ್ದಾರಿ ಹೊತ್ತು, ನಂತರ ರಾಜ್ಯದಾದ್ಯಂತ ಪಕ್ಷವನ್ನು ಕಟ್ಟಿ ಬೆಳೆಸಿದರು. ಅನಂತಕುಮಾರ್ ಮತ್ತು ಇತರ ನಾಯಕರೊಂದಿಗೆ ಸೇರಿ ಕರ್ನಾಟಕದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದರು.



ಶೂನ್ಯದಿಂದ ಶಿಖರಕ್ಕೇರಿದ ಶಿಕಾರಿಪುರದ ಮಾಸ್‌ಲೀಡರ್!

ಕರ್ನಾಟಕದ ರಾಜಕೀಯ ಇತಿಹಾಸವನ್ನು ಬಿ.ಎಸ್.ಯಡಿಯೂರಪ್ಪ (ಬಿಎಸ್‌ವೈ) ಅವರ ಉಲ್ಲೇಖವಿಲ್ಲದೆ ಬರೆಯಲು ಸಾಧ್ಯವಿಲ್ಲ. ಮಂಡ್ಯದ ಬೂಕನಕೆರೆಯ ಸಾಮಾನ್ಯ ರೈತ ಕುಟುಂಬದಲ್ಲಿ ಜನಿಸಿ, ಶಿವಮೊಗ್ಗದ ಶಿಕಾರಿಪುರವನ್ನು ತಮ್ಮ ಕರ್ಮಭೂಮಿಯನ್ನಾಗಿಸಿಕೊಂಡು, ದಕ್ಷಿಣ ಭಾರತದಲ್ಲಿ ಬಿಜೆಪಿಯ ಭದ್ರಕೋಟೆ ನಿರ್ಮಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಮೇ ತಿಂಗಳಿಗೆ ಯಡಿಯೂರಪ್ಪನವರು ಸಾರ್ವಜನಿಕ ಜೀವನಕ್ಕೆ ಪಾದಾರ್ಪಣೆ ಮಾಡಿ 50 ವರ್ಷಗಳು ಕಳೆಯುತ್ತಿವೆ. ಈ 5 ದಶಕಗಳ ಸುದೀರ್ಘ ಹಾದಿ ಸಾಮಾನ್ಯ ಕಾರ್ಯಕರ್ತನೋರ್ವ ರಾಜ್ಯಾಡಳಿತ ಶಕ್ತಿಕೇಂದ್ರದ ಚುಕ್ಕಾಣಿ ಹಿಡಿವ ಕಥೆಯಾಗಿ ಅನೇಕರಿಗೆ ಸ್ಫೂರ್ತಿಯ ಸ್ವರೂಪವಾಗಿದೆ. ಯಾವುದೇ ರಾಜಕೀಯದ ಹಿನ್ನೆಲೆಯಿಲ್ಲದೇ ಸಾಮಾನ್ಯ ಗುಮಾಸ್ತ ವೃತ್ತಿಯ ಓರ್ವ ವ್ಯಕ್ತಿ ರಾಜಕೀಯ ರಂಗದಲ್ಲಿ ಮಹತ್ತರ ಸ್ಥಾನಕ್ಕೇರುವ ಘಟ್ಟಗಳು ನಿಜಕ್ಕೂ ರೋಚಕ.

1943ರಲ್ಲಿ ಜನಿಸಿದ ಯಡಿಯೂರಪ್ಪನವರ ಜೀವನ ಸತತ ಸಂಘರ್ಷಗಳಿಂದಲೇ ಕೂಡಿತ್ತು. ಸಾಮಾನ್ಯ ಗುಮಾಸ್ತ ವೃತ್ತಿಯಿಂದ ಜೀವನ ಆರಂಭಿಸಿದ ಅವರು, ನಂತರ ಅಕ್ಕಿ ಗಿರಣಿಯಲ್ಲಿ ಕೆಲಸ ಮಾಡಿದರು. ಕೊನೆಗೆ ಶಿಕಾರಿಪುರದಲ್ಲಿ ಹಾರ್ಡ್‌ವೇರ್ ಮಳಿಗೆ ತೆರೆದರು. ಆದರೆ, ಅವರ ಮನಸ್ಸು ಸಮಾಜ ಸೇವೆಯತ್ತ ತುಡಿಯುತ್ತಿತ್ತು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸಕ್ರಿಯ ಕಾರ್ಯಕರ್ತರಾಗಿ ಗುರುತಿಸಿಕೊಂಡ ಅವರು, 1972ರಲ್ಲಿ ಶಿಕಾರಿಪುರ ಪುರಸಭೆಯ ಸದಸ್ಯರಾಗಿ ಆಯ್ಕೆಯಾಗುವ ಮೂಲಕ ರಾಜಕೀಯ ಅಖಾಡಕ್ಕೆ ಧುಮುಕಿದರು. ತುರ್ತು ಪರಿಸ್ಥಿತಿಯ ಸಮಯದಲ್ಲಿ (1975–77) ಜೈಲುವಾಸ ಅನುಭವಿಸಿದ್ದು ಅವರ ರಾಜಕೀಯ ವ್ಯಕ್ತಿತ್ವಕ್ಕೆ ಹೊಸ ಆಯಾಮ ನೀಡಿತು.



80ರ ದಶಕದಲ್ಲಿ ಕರ್ನಾಟಕದಲ್ಲಿ ಬಿಜೆಪಿ ಕೇವಲ ಒಂದು ಸಣ್ಣ ಶಕ್ತಿಯಾಗಿತ್ತು. 1983ರಲ್ಲಿ ಮೊದಲ ಬಾರಿಗೆ ಶಿಕಾರಿಪುರದಿಂದ ಶಾಸಕರಾಗಿ ಆಯ್ಕೆಯಾದ ಯಡಿಯೂರಪ್ಪ, ಅಂದಿನಿಂದ ಆ ಕ್ಷೇತ್ರವನ್ನು ತಮ್ಮ ಅವಿಭಾಜ್ಯ ಅಂಗವನ್ನಾಗಿಸಿಕೊಂಡರು. ಹಳ್ಳಿ ಹಳ್ಳಿಗಳಲ್ಲಿ ಪಾದಯಾತ್ರೆ ನಡೆಸಿ, ರೈತರ ಪರವಾಗಿ ಧ್ವನಿ ಎತ್ತಿದ ಅವರು 'ರೈತ ನಾಯಕ'ನಾಗಿ ಬೆಳೆದರು. ಬಗರ್ ಹುಕುಂ ಸಾಗುವಳಿ ಹೋರಾಟ ಮತ್ತು ಬೆಂಬಲ ಬೆಲೆಗಾಗಿ ಅವರು ನಡೆಸಿದ ಹೋರಾಟಗಳು ಅವರಿಗೆ ಜನಸಾಮಾನ್ಯರ ಬೆಂಬಲ ತಂದುಕೊಟ್ಟವು.

2006ರಲ್ಲಿ ಜೆಡಿಎಸ್ ಜೊತೆಗೂಡಿ ಸಮ್ಮಿಶ್ರ ಸರ್ಕಾರ ರಚಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು. ಉಪಮುಖ್ಯಮಂತ್ರಿಯಾಗಿ ಮತ್ತು ಹಣಕಾಸು ಸಚಿವರಾಗಿ ಅವರು ಮಂಡಿಸಿದ ಬಜೆಟ್‌ಗಳು ಜನಪ್ರಿಯವಾದವು. ವಿಶೇಷವಾಗಿ ಹೆಣ್ಣು ಮಕ್ಕಳಿಗಾಗಿ 'ಭಾಗ್ಯಲಕ್ಷ್ಮಿ' ಯೋಜನೆ ಮತ್ತು ಶಾಲಾ ಮಕ್ಕಳಿಗೆ 'ಸೈಕಲ್ ವಿತರಣೆ'ಯಂತಹ ಕ್ರಾಂತಿಕಾರಿ ಯೋಜನೆಗಳನ್ನು ಜಾರಿಗೆ ತಂದರು.

ಬಿಜೆಪಿಗೆ ದಕ್ಷಿಣದ ಹೆಬ್ಬಾಗಿಲು: 2008ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 110 ಸ್ಥಾನಗಳನ್ನು ಗೆದ್ದು, ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಸರ್ಕಾರ ರಚಿಸಿತು. ಯಡಿಯೂರಪ್ಪನವರು ಪೂರ್ಣ ಪ್ರಮಾಣದ ಮುಖ್ಯಮಂತ್ರಿಯಾದರು. ಈ ಅವಧಿಯಲ್ಲಿ ಅವರು ಕೃಷಿಗಾಗಿಯೇ ಪ್ರತ್ಯೇಕ ಬಜೆಟ್ ಮಂಡಿಸಿ ದಾಖಲೆ ಬರೆದರು. ಮಠ-ಮಾನ್ಯಗಳಿಗೆ ಅನುದಾನ ನೀಡುವುದರ ಮೂಲಕ ಸಾಂಸ್ಕೃತಿಕವಾಗಿಯೂ ಪ್ರಭಾವ ಬೀರಿದರು. ರಾಜಕೀಯ ಜೀವನವು ಸದಾ ಏಳುಬೀಳುಗಳಿಂದ ಕೂಡಿತ್ತು. ಲೋಕಾಯುಕ್ತ ವರದಿಯ ಹಿನ್ನೆಲೆಯಲ್ಲಿ 2011ರಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯಿತು. ನಂತರ ಬಿಜೆಪಿ ತೊರೆದು 'ಕರ್ನಾಟಕ ಜನತಾ ಪಕ್ಷ' (ಕೆಜೆಪಿ) ಸ್ಥಾಪಿಸಿದರು. 2013ರ ಚುನಾವಣೆಯಲ್ಲಿ ಬಿಜೆಪಿ ಸೋಲಿಗೆ ಇದು ಕಾರಣವಾಯಿತು. ಆದರೆ, 2014ರ ಲೋಕಸಭಾ ಚುನಾವಣೆಗೂ ಮುನ್ನ ನರೇಂದ್ರ ಮೋದಿಯವರ ನೇತೃತ್ವದ ಅಡಿಯಲ್ಲಿ ಮತ್ತೆ ಬಿಜೆಪಿಗೆ ಮರಳಿದರು. ಇದು ಬಿಜೆಪಿಗೆ ದಕ್ಷಿಣದಲ್ಲಿ ಹೊಸ ಚೈತನ್ಯ ನೀಡಿತು.

2019ರಲ್ಲಿ ಅವರು 4ನೇ ಬಾರಿಗೆ ಮುಖ್ಯಮಂತ್ರಿಯಾದರು. ಕೊರೊನಾ ಸಂಕಷ್ಟದ ಕಾಲದಲ್ಲಿ 70ರ ಹರೆಯದಲ್ಲೂ ರಾಜ್ಯಾದ್ಯಂತ ಓಡಾಡಿ ಆಡಳಿತ ನಡೆಸಿದರು. ಗೋಹತ್ಯೆ ನಿಷೇಧ ಕಾಯ್ದೆ ಮತ್ತು ತೃತೀಯ ಲಿಂಗಿಗಳಿಗೆ ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ ನೀಡುವಂತಹ ಪ್ರಮುಖ ನಿರ್ಧಾರಗಳನ್ನು ಕೈಗೊಂಡರು. 2021ರಲ್ಲಿ ಬಿಎಸ್‌ವೈ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರೂ, ಅವರ ಪ್ರಭಾವ ಕುಂದಿಲ್ಲ. ಅವರ ಪುತ್ರ ಬಿ.ವೈ.ವಿಜಯೇಂದ್ರ ಈಗ ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಪಕ್ಷವನ್ನು ಮುನ್ನಡೆಸುತ್ತಿದ್ದಾರೆ. ಪ್ರಸ್ತುತ ಚಿತ್ರದುರ್ಗದಲ್ಲಿ ನಡೆಯುತ್ತಿರುವ ಅವರ 50 ವರ್ಷಗಳ ಸಾರ್ವಜನಿಕ ಜೀವನದ ಸಂಭ್ರಮಕ್ಕೆ ಅಮಿತ್ ಶಾ ಸೇರಿದಂತೆ ರಾಷ್ಟ್ರೀಯ ನಾಯಕರು ಆಗಮಿಸುತ್ತಿರುವುದು ಅವರ ಶಕ್ತಿಗೆ ಸಾಕ್ಷಿ. ಲಿಂಗಾಯತ ಸಮುದಾಯದ ಪ್ರಶ್ನಾತೀತ ನಾಯಕನಾಗಿ ಮಾತ್ರವಲ್ಲದೆ, ರಾಜ್ಯದ ಸರ್ವ ಜನಾಂಗದ ಶಾಂತಿಯ ತೋಟದ ರಕ್ಷಕನಾಗಿ ಬಿಎಸ್‌ವೈ ಕರ್ನಾಟಕದ ಇತಿಹಾಸದ ಪುಟಗಳಲ್ಲಿ ಚಿರಸ್ಥಾಯಿಯಾಗಿದ್ದಾರೆ. ಅಧಿಕಾರವಿರಲಿ ಇಲ್ಲದಿರಲಿ, ಯಡಿಯೂರಪ್ಪ ಎಂಬ ಹೆಸರು ಕರ್ನಾಟಕ ಬಿಜೆಪಿಯ ಅಸ್ಮಿತೆಯಾಗಿ ಉಳಿಯಲಿದೆ.

ತಮ್ಮ ರಾಜಕೀಯ ಜೀವನದಲ್ಲಿ ಅನೇಕ ಷಡ್ಯಂತ್ರಗಳಿಗೆ ಬಲಿಯಾದರೂ, ಯಡಿಯೂರಪ್ಪ ಎಂದಿಗೂ ಎದೆಗುಂದಲಿಲ್ಲ. ತಮ್ಮ ಆತ್ಮಗೌರವಕ್ಕೆ ಧಕ್ಕೆ ಬಂದಾಗ ಹೊಸ ಪಕ್ಷ ಕಟ್ಟುವ ಸಾಹಸವನ್ನೂ ಮಾಡಿದರು. ಸೋಲನ್ನೇ ಗೆಲುವಿನ ಸೋಪಾನವನ್ನಾಗಿಸಿಕೊಂಡ ಅವರು, 'ಬಾರದು ಬಪ್ಪದು, ಬಪ್ಪದು ತಪ್ಪದು' ಎಂಬ ಮಾತಿನಂತೆ ತಮ್ಮ ಛಲದಿಂದ ಅಧಿಕಾರವನ್ನು ಮರಳಿ ಪಡೆದರು. ಯಡಿಯೂರಪ್ಪನವರು ಇಂದು ಕೇವಲ ಒಬ್ಬ ವ್ಯಕ್ತಿಯಲ್ಲ, ಅದೊಂದು ಶಕ್ತಿ. ಬಸವಣ್ಣನವರ 'ನುಡಿದಂತೆ ನಡೆ' ಎಂಬ ತತ್ವವನ್ನು ಪಾಲಿಸುತ್ತಾ, ಅಖಂಡ ಕರ್ನಾಟಕದ ಅಭಿವೃದ್ಧಿಯೇ ಪಂಚಾಕ್ಷರಿ ಮಂತ್ರವೆಂದು ನಂಬಿರುವ ಧೀಮಂತ ನಾಯಕ. ಅವರ 50 ವರ್ಷಗಳ ಸಾರ್ವಜನಿಕ ಜೀವನದ ಈ ಸುದೀರ್ಘ ಪಯಣ ಕರ್ನಾಟಕದ ಜನಮಾನಸದಲ್ಲಿ ಅಜರಾಮರವಾಗಿ ಉಳಿಯಲಿದೆ.

ಕಾಡಾನೆ–ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರಕ್ಕೆ ಕ್ರಮ

ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಇಂಗಿತ

ಮಡಿಕೇರಿ/ಕುಶಾಲನಗರ, ಮೇ 6– ಕಾಡಿನಿಂದ ಹೊರ ಬಂದು ತೋಟಗಳಲ್ಲಿ ಬೀಡು ಬಿಟ್ಟಿರುವ ಆನೆಗಳನ್ನು ಸುರಕ್ಷಿತವಾಗಿ ಸೆರೆ ಹಿಡಿದು, ಬೇರೆ ಅರಣ್ಯಕ್ಕೆ ಬಿಡುವ ಅಥವಾ ಆನೆಧಾಮದಲ್ಲಿ ಪುನರ್ವಸತಿ ಕಲ್ಪಿಸಿ ಕಾಡಾನೆ–ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಸರಕಾರದ ಪ್ರಯತ್ನಗಳು ಸಾಗಿದೆ ಎಂದು ಅರಣ್ಯಸಚಿವ ಈಶ್ವರ ಬಿ.ಖಂಡ್ರೆ ಹೇಳಿದರು.


ಪ್ರವಾಸಿ ತಾಣ ದುಬಾರೆ ವ್ಯಾಪ್ತಿಯ ಕಾವೇರಿ ನದಿಗೆ ಅಡ್ಡಲಾಗಿ ತೂಗು ಸೇತುವೆ ನಿರ್ಮಾಣಕ್ಕೆ ಸಚಿವ ಈಶ್ವರ ಬಿ.ಖಂಡ್ರೆ ಶಂಕುಸ್ಥಾಪನೆ ನೆರವೇರಿಸಿದರು.

ಪ್ರವಾಸಿ ತಾಣ ದುಬಾರೆ ವ್ಯಾಪ್ತಿಯ ಕಾವೇರಿ ನದಿಗೆ ಅಡ್ಡಲಾಗಿ 7.30 ಕೋಟಿ ರೂ. ವೆಚ್ಚದಲ್ಲಿ ತೂಗು ಸೇತುವೆ ನಿರ್ಮಾಣಕ್ಕೆ ಭೂಮಿ ಪೂಜೆ, ವಸತಿ ನಿಲಯ ಕಾಮಗಾರಿಗೆ ಶಿಲಾನ್ಯಾಸ ಹಾಗೂ ನೂತನ ವಾಹನಗಳಿಗೆ ಹಸಿರು ನಿಶಾನೆ ತೋರಿದರು.

ಕಾಮಗಾರಿ ಆರಂಭಕ್ಕೆ ಸೂಚನೆ: ರಾಜ್ಯದ ವಿವಿಧ ಭಾಗಗಳಲ್ಲಿ ವಿವಿಧ ವಿನ್ಯಾಸದ ತೂಗು ಸೇತುವೆಗಳಿದ್ದು, ತೂಗು ಸೇತುವೆಗಳನ್ನು ನಿರ್ಮಿಸಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾಗಿರುವವರೇ ಇದನ್ನು ನಿರ್ಮಾಣ ಮಾಡುತ್ತಿದ್ದಾರೆ. ವಿನ್ಯಾಸದಲ್ಲಿ ಯಾವುದೇ ತೊಂದರೆ ಆಗದಂತೆ ನಿಗಧಿತ ಸಮಯಕ್ಕೆ ಕಾಮಗಾರಿ ಪ್ರಾರಂಭಿಸಿ ಶೀಘ್ರದಲ್ಲೇ ಮುಕ್ತಾಯ ಮಾಡಲು ಕೂಡ ಸೂಚನೆ ನೀಡಲಾಗಿದೆ. ಸರಕಾರದ ಮೂಲಕ ಶೀಘ್ರದಲ್ಲೇ ಅನುದಾನ ಬಿಡುಗಡೆ ಮಾಡಿ ಕಾಮಗಾರಿ ಮುಕ್ತಾಯಗೊಳಿಸಿ ತೂಗು ಸೇತುವೆಯನ್ನು ಲೋಕಾರ್ಪಣೆ ಮಾಡಲಾಗುತ್ತದೆ ಎಂದು ಸಚಿವರು ಮಾಹಿತಿ ನೀಡಿದರು.

ಮಾರ್ಗಸೂಚಿ ಪಾಲಿಸಬೇಕು: ಕಾಡಾನೆಗಳು ಇರುವ ಪ್ರದೇಶಗಳಲ್ಲಿ ಎಚ್ಚರ ವಹಿಸಿ, ಮನೆಗಳಿಂದ ಹೊರ ಬಾರದಂತೆ ಸೂಚನೆಗಳನ್ನು ಅರಣ್ಯ ಇಲಾಖೆ ನೀಡುತ್ತಿದ್ದರೂ ಜನರು ಇದನ್ನು ಪಾಲಿಸುತ್ತಿಲ್ಲ. ಇಂತಹ ಉಲ್ಲಂಘನೆಗಳಿಂದಲೂ ಜನರ ಜೀವ ಹಾನಿಯಾದ ದುರ್ಘಟನೆಗಳು ಸಂಭವಿಸುತ್ತಿವೆ. ಅರಣ್ಯ ಇಲಾಖೆ ಹೊರಡಿಸುವ ಮಾರ್ಗಸೂಚಿಗಳನ್ನು ಪಾಲಿಸುವ ಮೂಲಕ ಗ್ರಾಮಸ್ಥರು, ಕಾಡಂಚಿನ ನಿವಾಸಿಗಳು ಇಲಾಖೆಗೆ ಸಹಕಾರ ನೀಡುವಂತೆ ಮನವಿ ಮಾಡಿದರು.

ಆನೆ ಧಾಮಕ್ಕೆ ಕ್ರಮ: ಜೀವ ಹಾನಿ ಮಾಡುವ ಕಾಡಾನೆಗಳನ್ನು ಸೆರೆ ಹಿಡಿದು ಪುನರ್ವಸತಿ ಕಲ್ಪಿಸಲು ಗುರುತು ಮಾಡಿದ್ದ, ಭದ್ರಾ ಅರಣ್ಯ ಪ್ರದೇಶ ಹುಲಿ ಸಂರಕ್ಷಿತವಾಗಿರುವ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಈ ಯೋಜನೆಯನ್ನು ತಿರಸ್ಕರಿಸಿದೆ. ಇದಕ್ಕಾಗಿ ಬೇರೆ ಪ್ರದೇಶವನ್ನು ಗುರುತು ಮಾಡುವಂತೆ ಅರಣ್ಯ ಅಧಿಕಾರಿಗಳಿಗೆ ಸೂಚಿಸಲಾಗಿತ್ತು. ಅದರಂತೆ ಆನೆ ಧಾಮಕ್ಕೆ ಪ್ರದೇಶ ಗುರುತು ಮಾಡುವ ಕಾರ್ಯವೂ ಪ್ರಗತಿಯಲ್ಲಿದೆ ಎಂದರು.

> ದುಬಾರೆ ಆನೆ ಶಿಬಿರಕ್ಕೆ 100 ವರ್ಷಗಳ ಇತಿಹಾಸವಿದೆ. ಇಲ್ಲಿ 15 ಕುಮ್ಕಿ ಆನೆಗಳಿದ್ದು, ದಸರಾ ಮಹೋತ್ಸವ ಸೇರಿ ವಿವಿಧ ಕಾರ್ಯಾಚರಣೆಯಲ್ಲಿ ಭಾಗಿಯಾಗುತ್ತಿವೆ. ಹೀಗಾಗಿ ನಾವು ವನ್ಯಜೀವಿಗಳ ಸಂರಕ್ಷಣೆಗೂ ಮುಂದಾಗಬೇಕು. ಕಾಡಂಚಿನ ಜನರೊಂದಿಗೆ ಅರಣ್ಯ ಅಧಿಕಾರಿ ಮತ್ತು ಸಿಬ್ಬಂದಿ ಸೌಜನ್ಯದಿಂದ ವರ್ತಿಸಬೇಕು. ಕಾನೂನು ಪಾಲಿಸಿ, ಜನರಿಗೆ ಅರಿವು ಮೂಡಿಸಿ, ಆದರೆ ಹೆದರಿಸಬೇಡಿ.
> –ಈಶ್ವರ ಬಿ.ಖಂಡ್ರೆ

ಶಾಸಕ ಡಾ. ಮಂತರ್ ಗೌಡ ಮಾತನಾಡಿ, ಈಗ ಕಾಡಾನೆಗಳಿಂದ ಆಗಿರುವ ಬೆಳೆ ಹಾನಿಗೆ ಸರ್ಕಾರದಿಂದ ಶೀಘ್ರ ಪರಿಹಾರ ನೀಡಬೇಕು ಎಂದು ಮನವಿ ಮಾಡಿದರು. ಅರಣ್ಯ ಇಲಾಖೆಯ ಜನಸಂಪರ್ಕ ಕಾರ್ಯಕ್ರಮದಡಿ ಫಲಾನುಭವಿಗಳಿಗೆ ಜೇನು ಪೆಟ್ಟಿಗೆ, ಕಾಡಿನಂಚಿನ ಗ್ರಾಮದ ಮಹಿಳೆಯರಿಗೆ ಹೊಲಿಗೆ ಯಂತ್ರ ಇತ್ಯಾದಿ ಸೌಲಭ್ಯಗಳನ್ನು ವಿತರಿಸಲಾಯಿತು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕ ಕುಮಾರ್ ಪುಷ್ಕರ್,

ಸಚಿವರ ಘೆರಾವ್‌ಗೆ ಯತ್ನ : ಬಿಜೆಪಿ ಕಾರ್ಯಕರ್ತರ ಬಂಧನ

ಮಡಿಕೇರಿ/ಕುಶಾಲನಗರ: ಅರಣ್ಯ ಸಚಿವರಿಗೆ ಮುತ್ತಿಗೆ ಹಾಕಲು ಮುಂದಾದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದ ಘಟನೆ ಗುಡ್ಡೆಹೊಸೂರು ಜಂಕ್ಷನ್‌ನಲ್ಲಿ ನಡೆದಿದೆ.

ಅರಣ್ಯ ಸಚಿವರು, ಆನೆ ಮಾನವ ಸಂಘರ್ಷ ತಡೆಗಟ್ಟುವಲ್ಲಿ ವಿಫಲರಾಗಿದ್ದಾರೆ. ಸಿ ಅಂಡ್ ಡಿ ಲ್ಯಾಂಡ್ ಸಮಸ್ಯೆ ಬಗೆಹರಿದಿಲ್ಲ ಎಂದು ಆರೋಪಿಸಿ, ಸೋಮವಾರಪೇಟೆ ಮಂಡಲ ಬಿಜೆಪಿಯಿಂದ ಸಚಿವರು ದುಬಾರೆಗೆ ತೆರಳುವ ಮಾರ್ಗದ ಗುಡ್ಡೆ ಹೊಸೂರು ಬಳಿ ರಸ್ತೆ ತಡೆಗೆ ಮುಂದಾಗಿದ್ದರು. ಶಿವಕುಮಾರ ಸ್ವಾಮೀಜಿ ವೃತ್ತದಲ್ಲಿ ಕಾರ್ಯಕರ್ತರು ಸೇರಿದಾಗ ಯಾವುದೇ ರೀತಿಯಲ್ಲಿ ಶಾಂತಿ ಭಂಗ ಉಂಟು ಮಾಡಬಾರದು. ರಸ್ತೆ ಬದಿಯಲ್ಲಿ ನಿಂತು ಸಚಿವರಿಗೆ ಮನವಿ ಪತ್ರ ಸಲ್ಲಿಸಿ ಎಂದು ಪೊಲೀಸರು ಪ್ರತಿಭಟನಾಕಾರರಿಗೆ ಸೂಚಿಸಿದಾಗ ಕಾರ್ಯಕರ್ತರು ನಿರಾಕರಿಸಿದರು. ಈ ಸಂದರ್ಭ ಪೊಲೀಸ್ ಅಧಿಕಾರಿಗಳು ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆಯಿತು. ಕೂಡಲೇ ಪೊಲೀಸರು ಪ್ರತಿಭಟನೆಗೆ ಮುಂದಾಗಿದ್ದ ಐವತ್ತಕ್ಕೂ ಹೆಚ್ಚಿನ ಕಾರ್ಯಕರ್ತರನ್ನು ವಶಕ್ಕೆ ಪಡೆದು ಎರಡು ವಾಹನಗಳಲ್ಲಿ ಕರೆದೊಯ್ದರು.


ಸಚಿವರಿಗೆ ಮುತ್ತಿಗೆ ಹಾಕಲೆತ್ನಿಸಿದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದರು.

ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಬಿ.ಬಿ. ಭಾರತೀಶ್ ಮಾತನಾಡಿ, ಜಿಲ್ಲೆಯಲ್ಲಿ ವನ್ಯಜೀವಿಗಳ ಹಾವಳಿ ಮಿತಿಮೀರಿದೆ ವರ್ಷದಲ್ಲಿ 32ಕ್ಕೂ ಹೆಚ್ಚು ಮಂದಿ ಜೀವ ಕಳೆದುಕೊಂಡಿದ್ದಾರೆ. ಈ ಬಗ್ಗೆ ಗಮನ ಹರಿಸಬೇಕಿದ್ದ ಅರಣ್ಯ ಸಚಿವರು, ಎರಡೂವರೆ ವರ್ಷಗಳ ಬಳಿಕ ಜಿಲ್ಲೆಗೆ ಆಗಮಿಸುತ್ತಿರುವುದು ಜಿಲ್ಲೆಯ ಜನತೆಗೆ ಮಾಡಿದ ದ್ರೋಹವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಮಸ್ಯೆಗಳ ಬಗ್ಗೆ ಸಚಿವರಿಗೆ ಮನವರಿಕೆ ಮಾಡಲು ಮುಂದಾಗಿದ್ದ ನಮ್ಮ ಪ್ರತಿಭಟನೆಯನ್ನು ಕಾಂಗ್ರೆಸ್ಸಿಗರು ಪೊಲೀಸ್ ಇಲಾಖೆ ಮೂಲಕ ಹತ್ತಿಕ್ಕಿದ್ದಾರೆ. ಆ ಮೂಲಕ ಕಾಂಗ್ರೆಸಿಗರು ಸಂವಿಧಾನ ವಿರೋಧಿ ಕಾರ್ಯ ನಡೆಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕಾಂಗ್ರೆಸ್ ಇದೇ ವರ್ತನೆ ಮುಂದುವರೆಸಿದರೆ ಶಾಸಕರ ಕಚೇರಿಯ ಮುಂದೆಯೂ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಮಹೇಶ್ ತಿಮ್ಮಯ್ಯ, ಕಾರ್ಯದರ್ಶಿ ರಕ್ಷಿತ್ ಮಾವಜಿ, ಮಂಡಲ ಬಿಜೆಪಿ ಅಧ್ಯಕ್ಷ ಗೌತಮ್, ಉಪಾಧ್ಯಕ್ಷ ಎಂ.ಡಿ.ಕೃಷ್ಣಪ್ಪ, ಮಹೇಶ್ ತಿಮ್ಮಯ್ಯ, ಮಂಡಲ ಉಪಾಧ್ಯಕ್ಷ ಕೃಷ್ಣಪ್ಪ, ಮಂಡಲ ಪ್ರಧಾನ ಕಾರ್ಯದರ್ಶಿ ದರ್ಶನ್ ಜೋಯಪ್ಪ, ಒಬಿಸಿ ಅಧ್ಯಕ್ಷ ಸುನಿಲ್, ಎಸ್ಟಿ ಮೋರ್ಚಾ ಅಧ್ಯಕ್ಷ ಪ್ರವೀಣ್, ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶರತ್, ಮಂಡಲ ವಕ್ತಾರ ಕಂಠಿ ಕಾರ್ಯಪ್ಪ, ಪ್ರವೀಣ್, ಸುಮನ್ ಪಾಲ್ಗೊಂಡಿದ್ದರು.

ಮನೆಹಳ್ಳಿ ಮಠದ ಶ್ರೀ ಮಹಾಂತ ಶಿವಲಿಂಗ ಸ್ವಾಮೀಜಿ, ಕಲ್ಲಹಳ್ಳಿ ಮಠದ ಶ್ರೀ ರುದ್ರಮುನಿ ಸ್ವಾಮೀಜಿ, ಪಕ್ಷದ ಪ್ರಮುಖರಾದ ವಿ.ಪಿ.ಶಶಿಧರ್, ಹೈಕೋರ್ಟ್ ವಕೀಲ ಹೆಚ್.ಎಸ್. ಚಂದ್ರಮೌಳಿ, ಕೆ.ಕೆ. ಮಂಜುನಾಥ್ ಕುಮಾರ್ ಇದ್ದರು.

ಆಕಸ್ಮಿಕ ಬೆಂಕಿಗೆ 3 ಅಂಗಡಿ ಮಳಿಗೆಗಳು ಆಹುತಿ


ಆಕಸ್ಮಿಕ ಬೆಂಕಿಗೆ 3 ಅಂಗಡಿ ಮಳಿಗೆಗಳು ಆಹುತಿಯಾದವು.

ಮಡಿಕೇರಿ: ಆಕಸ್ಮಿಕವಾಗಿ ತಗುಲಿದ ಬೆಂಕಿಗೆ 3 ಅಂಗಡಿ ಮಳಿಗೆಗಳು ಆಹುತಿಯಾದ ಘಟನೆ ಬುಧವಾರ ವಿರಾಜಪೇಟೆ ನಾಪೋಕ್ಲು ಮುಖ್ಯ ರಸ್ತೆಯ ಕಡಂಗದಲ್ಲಿ ಸಂಭವಿಸಿದೆ.

ಗ್ರಾಮದ ಹೃದಯ ಭಾಗದಲ್ಲಿರುವ ಹೋಟೆಲ್, ಮೊಬೈಲ್ ಹಾಗೂ ತರಕಾರಿ ಅಂಗಡಿಗಳಿಗೆ ಬೆಂಕಿ ತಗುಲಿ ಲಕ್ಷಾಂತರ ರೂಪಾಯಿ ನಷ್ಟ ಸಂಭವಿಸಿದೆ. ಮಧ್ಯಾಹ್ನ 3 ಗಂಟೆ ಸಮಯದಲ್ಲಿ ಹೋಟೆಲ್ ಬದಿಯಲ್ಲಿ ಬೆಂಕಿ ಕಾಣಿಸಿ ಕೊಂಡಿದ್ದು, ತಕ್ಷಣ ಜ್ವಾಲೆ ಅಂಗಡಿ ಮುಂಗಟ್ಟುಗಳಿಗೆ ಆವರಿಸಿದೆ. ಈ ವೇಳೆ ಮೊಬೈಲ್ ಅಂಗಡಿಯಲ್ಲಿದ್ದ ಮೊಬೈಲ್‌ಗಳು, ಲ್ಯಾಪ್‌ಟಾಪ್ ಮತ್ತಿತರ ಬೆಲೆಬಾಳುವ ವಸ್ತುಗಳು ಬೆಂಕಿಯ ಕೆನ್ನಾಲಿಗೆಗೆ ತುತ್ತಾಗಿವೆ. ಪಕ್ಕದಲ್ಲಿದ್ದ ತರಕಾರಿ ಅಂಗಡಿಯಲ್ಲಿದ್ದ ಎಲ್ಲಾ ವಸ್ತುಗಳು ಸುಟ್ಟು ಭಸ್ಮವಾಗಿದೆ.

ಗ್ರಾಮದ ಯುವಕರು ಟ್ರಾಕ್ಟರ್, ಪಿಕ್‌ಅಪ್ ವಾಹನಗಳ ಮೂಲಕ ನೀರು, ಜನರೇಟರ್‌ಗಳನ್ನು ತಂದು ವಾಟರ್ ಪಂಪ್‌ಗಳ ಮೂಲಕ ನೀರು ಹಾರಿಸಿ ಬೆಂಕಿಯನ್ನು ನಂದಿಸಲು ಪ್ರಯತ್ನಿಸಿದರು. ಗೋಣಿಕೊಪ್ಪದಿಂದ ಅಗ್ನಿಶಾಮಕ ದಳ ಆಗಮಿಸಿ ಸಂಪೂರ್ಣ ಬೆಂಕಿಯನ್ನು ನಂದಿಸಿದರಾದರೂ ಆ ಹೊತ್ತಿಗಾಗಲೇ ಎಲ್ಲಾ ಸುಟ್ಟು ಬೂದಿಯಾಗಿತ್ತು. ಬೆಂಕಿ ನಂದಿಸುವ ಕಾರ್ಯಾಚರಣೆಯಲ್ಲಿ ಗ್ರಾಮದ ಯುವಕರು, ಗೋಣಿಕೊಪ್ಪ ಅಗ್ನಿ ಶಾಮಕ ದಳದ ಸಿಬ್ಬಂದಿಗಳು, ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯ ಸಿಬ್ಬಂದಿ ಪಾಲ್ಗೊಂಡಿದ್ದರು.

ಕಂಡಂಗದಲ್ಲಿ ಅಗ್ನಿ ದುರಂತ ಸಂಭವಿಸಿದ ಕೂಡಲೇ ಅಗ್ನಿ ಶಾಮಕ ದಳಕ್ಕೆ ಕರೆ ಮಾಡಲಾಗಿತ್ತು. ಗೋಣಿಕೊಪ್ಪದಿಂದ ಆಗಮಿಸಿದ ಅಗ್ನಿಶಾಮಕ ದಳ ಸಮಯಕ್ಕೆ ಸರಿಯಾಗಿ ತಲುಪಲು ಸಾಧ್ಯವಾಗಲಿಲ್ಲ. ಕೂಡಲೇ ವಿರಾಜಪೇಟೆಯಲ್ಲಿ ಅಗ್ನಿಶಾಮಕ ಠಾಣೆ ಸ್ಥಾಪಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದರು.

ಪೊನ್ನಂಪೇಟೆಯಲ್ಲಿ ಹುಲಿ ದಾಳಿಗೆ ಹಸು ಬಲಿ

ಮಡಿಕೇರಿ: ಪೊನ್ನಂಪೇಟೆ ತಾಲೂಕಿನ ಬಿ.ಶೆಟ್ಟಿಗೇರಿಯಲ್ಲಿ ಬುಧವಾರ ಬೆಳಿಗ್ಗೆ ಹುಲಿ ದಾಳಿಗೆ ಹಸು ಬಲಿಯಾಗಿರುವ ಘಟನೆ ನಡೆದಿದೆ. ಬಿ.ಶೆಟ್ಟಿಗೇರಿ ಗ್ರಾಮದ ನಿವಾಸಿ ನಾಮೇರ ಜಯ ಎಂಬವರಿಗೆ ಸೇರಿದ ಹಸುವನ್ನು ಹುಲಿ ದಾಳಿ ನಡೆಸಿ ಕೊಂದು ಹಾಕಿದೆ. ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಜಿಲ್ಲೆಯಲ್ಲಿ ಕಾಡಾನೆ ಹಾಗೂ ಹುಲಿ ದಾಳಿ ನಿರಂತರವಾಗಿ ನಡೆಯುತ್ತಿದ್ದರು ಆನೆ ಮಾನವ ಸಂಘರ್ಷ, ವನ್ಯಜೀವಿಗಳ ಉಪಟಳವನ್ನು ತಡೆಗಟ್ಟುವಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸ್ವಗ್ರಾಮದಲ್ಲಿ ಸಿಆರ್‌ಪಿಎಫ್ ಯೋಧ ನವೀನ್ ಅಂತ್ಯಕ್ರಿಯೆ

ಮಡಿಕೇರಿ: ದಕ್ಷಿಣ ಕಾಶ್ಮೀರದ ಪುಲ್ವಾಮ ಟ್ರಾಲ್ ಏರಿಯಾದಲ್ಲಿ ಕರ್ತವ್ಯದಲ್ಲಿದ್ದಾಗಲೇ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದ ಸಿಆರ್‌ಪಿಎಫ್ ಯೋಧ ಕೆ.ಜಿ. ನವೀನ್(40) ಅವರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಬುಧವಾರ ನಡೆಯಿತು.

ಮಂಗಳವಾರ ರಾತ್ರಿ 1 ಗಂಟೆಗೆ ಕುಶಾಲನಗರಕ್ಕೆ ತರಲಾದ ಯೋಧ ನವೀನ್ ಪಾರ್ಥಿವ ಶರೀರವನ್ನು ಅವರ ಹುಟ್ಟೂರು ಸೋಮವಾರಪೇಟೆ ತಾಲೂಕಿನ ಯಡವಾರೆ ಗ್ರಾಮಕ್ಕೆ ಕೊಂಡೊಯ್ಯಲಾಯಿತು. ಬಳಿಕ ಕುಟುಂಬಸ್ಥರು ಮತ್ತು ಗ್ರಾಮಸ್ಥರಿಗೆ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಯಿತು. ತದನಂತರ ನವೀನ್ ಅವರ ಜಮೀನಿನಲ್ಲಿ ಅಂತಿಮ ವಿಧಿ ವಿಧಾನ ನೆರವೇರಿಸಿ ಅಂತ್ಯಕ್ರಿಯೆ ಮಾಡಲಾಯಿತು.


ಯೋಧ ನವೀನ್ ಪಾರ್ಥಿವ ಶರೀರದ ಮುಂದೆ ಕುಟುಂಬದವರ ಆಕ್ರಂದನ


ಸೇನಾ ಗೌರವ: ನವೀನ್ ಅವರ ಮೃತ ದೇಹಕ್ಕೆ ಜಮ್ಮುಕಾಶ್ಮೀರದ ಸಿಆರ್‌ಪಿಎಫ್ ಕಚೇರಿ ಆವರಣದಲ್ಲಿ ಸಕಲ ಸೇನಾ ಗೌರವ ಸಲ್ಲಿಸಲಾಯಿತು. ಮೃತದೇಹವನ್ನು ಇಡಲಾಗಿದ್ದ ಶವಪೆಟ್ಟಿಗೆ ತ್ರಿವರ್ಣ ಧ್ವಜ ಹೊದಿಸಿ, 108ನೇ ಸಿಆರ್‌ಪಿಎಫ್ ಬೆಟಾಲಿಯನ್ ಅಧಿಕಾರಿ ಮತ್ತು ಸಿಬ್ಬಂದಿಗಳು ಅಂತಿಮ ಸೇನಾ ಗೌರವ ಸಲ್ಲಿಸಿದರು.

ಈ ವೇಳೆ ಮೃತರ ಪೋಷಕರು ಮತ್ತವರ ಕುಟುಂಬಸ್ಥರ ಅಳಲು ಮುಗಿಲು ಮುಟ್ಟಿತ್ತು. ಮೃತ ಯೋಧನ ತಂದೆ ಕೀಜನ ಜೋಯಪ್ಪ, ತಾಯಿ ವಿಶಾಲಾಕ್ಷಿ, ಪತ್ನಿ ಸುನೀತಾ, ಪುತ್ರಿ ಹಮ್ಮಿ, ಪುತ್ರ ಲವಿನ್ ಮತು ಕುಟುಂಬಸ್ಥರು, ಬಂಧು ಮಿತ್ರರು, ಗ್ರಾಮಸ್ಥರು ಹಾಜರಿದ್ದರು.

ಶಾಸಕರ ಸಂತಾಪ: ಮೃತ ಯೋಧ ನವೀನ್ ಅಂತ್ಯಕ್ರಿಯೆಯಲ್ಲಿ ಶಾಸಕ ಡಾ. ಮಂತರ್ ಗೌಡ ಪಾಲ್ಗೊಂಡು ಸಂತಾಪ ಸೂಚಿಸಿ, ಮೃತರ ಕುಟುಂಬಕ್ಕೆ ಶಾಸಕರು ಸಾಂತ್ವಾನ ಹೇಳಿದರು.

ಸೋಮವಾರಪೇಟೆ ತಹಶೀಲ್ದಾರ್ ಕೃಷ್ಣಮೂರ್ತಿ ಅಂತ್ಯಕ್ರಿಯೆಯಲ್ಲಿ ಹಾಜರಿದ್ದು ಸಂತಾಪ ಸೂಚಿಸಿದರು. ಜಿಲ್ಲಾ ಸಶಸ್ತ್ರ ಪೊಲೀಸ್ ತಂಡ ಗಾಳಿಯಲ್ಲಿ ಗುಂಡು ಹಾರಿಸುವ ಮೂಲಕ ಮೃತ ಯೋಧನಿಗೆ ಅಂತಿಮ ನಮನ ಸಲ್ಲಿಸಿತು. ಜಿಲ್ಲಾ ನಿವೃತ್ತ ಯೋಧರ ಸಂಘ ಪುಷ್ಪ ನಮನದ ಮೂಲಕ ಗೌರವ ಸೂಚಿಸಿತು.

ಅಬ್ದುಲ್ ರಶೀದ್ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ



ಮಡಿಕೇರಿ: ಜಿಲ್ಲಾ 17ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಸಾಹಿತಿ ಅಬ್ದುಲ್ ರಶೀದ್ ಆಯ್ಕೆಯಾಗಿದ್ದಾರೆ.

ನಗರದ ಪತ್ರಿಕಾ ಭವನ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಒಮ್ಮತದಿಂದ ಸರ್ವಾಧ್ಯಕ್ಷರನ್ನು ಆಯ್ಕೆ ಮಾಡಲಾಗಿದೆ. ಸಾಹಿತ್ಯ ಸಮ್ಮೇಳನ ಕುಶಾಲನಗರ ತಾಲೂಕಿನ ಸುಂಟಿಕೊಪ್ಪದಲ್ಲಿ ಮೇ 29ಮತ್ತು 30ರಂದು ನಡೆಯಲಿದೆ.

ಶಾಸಕ ಡಾ. ಮಂತರ್ ಗೌಡ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿ ರಚಿಸಲಾಗಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ 11ಕ್ಕೂ ಹೆಚ್ಚು ಉಪಸಮಿತಿಗಳನ್ನು ರಚಿಸಿ ಸಮ್ಮೇಳನದ ತಯಾರಿಗೆ ಚಾಲನೆ ನೀಡಲಾಗಿದೆ ಎಂದು ಕೇಶವ ಕಾಮತ್ ತಿಳಿಸಿದ್ದಾರೆ.

ಬಂಡೀಪುರದ ಸಫಾರಿ ವೀಕ್ಷಿಸಿದ ಮಠಾಧೀಶರು


ಗುಂಡ್ಲುಪೇಟೆ ತಾಲೂಕಿನ ಹಂಗಳ ಗ್ರಾಮದ ಮಠದಲ್ಲಿ ಮಠಾಧೀಶರ ಗೋಷ್ಠಿಗೆ ಬಂದಿದ್ದ ಚಾಮರಾಜನಗರ–ಮೈಸೂರು ಮಠಾಧೀಶರು ಸುತ್ತೂರು ಶ್ರೀಗಳಾದ ಶಿವರಾತ್ರಿ ದೇಶಿಕೇಂದ್ರಸ್ವಾಮಿಗಳ ನೇತೃತ್ವದಲ್ಲಿ ಬಂಡೀಪುರದ ಸಫಾರಿಗೆ ತೆರಳಿ ಕಾಡಿನ ಸೌಂದರ್ಯ ಆಸ್ವಾದಿಸಿದರು. ಶಾಸಕ ಗಣೇಶ ಪ್ರಸಾದ್, ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್ ಹಾಗೂ ನಾನಾ ಮಠಾದೀಶರು ಇದ್ದರು. ನಂತರ ಜಂಗಲ್ ರೆಸಾರ್ಟ್‌ನಲ್ಲಿ ಗ್ರೂಪ್ ಫೋಟೋ ತೆಗೆಸಿಕೊಂಡರು.

ಮೇ 10, ಉಚಿತ ಕೃತಕ ಕೈ–ಕಾಲು ಜೋಡಣಾ ಶಿಬಿರ


ಪತ್ರಿಕಾಗೋಷ್ಠಿಯಲ್ಲಿ ಡಾ.ನಾಗಾರ್ಜುನ್ ಮಾತನಾಡಿದರು.

ಚಾಮರಾಜನಗರ : ರೋಟರಿ ಸಂಸ್ಥೆ ವತಿಯಿಂದ ಉಚಿತ ಕೃತಕ ಕೈ–ಕಾಲು ಜೋಡಣಾ ಶಿಬಿರವು ಮೇ 10 ರಂದು ನಡೆಯಲಿದೆ ಎಂದು ರೋಟರಿ ಸಂಸ್ಥೆಯ ಜಿಲ್ಲಾ ಮಾಜಿ ಗೌರರ್ ಡಾ.ನಾಗಾರ್ಜುನ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದ ಅವರು ಅಂದು ನಗರದ ಬಿ.ರಾಚಯ್ಯ ಜೋಡಿರಸ್ತೆಯಲ್ಲಿರುವ ರೋಟರಿ ಭವನದಲ್ಲಿ ಬೆಳಗ್ಗೆ 9.30ಕ್ಕೆ ಉಚಿತ ಕೃತಕ ಕೈ–ಕಾಲು ಜೋಡಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು, ಈಗಾಗಲೇ 100 ಮಂದಿ ನೋಂದಾಯಿಸಿಕೊಂಡಿದ್ದಾರೆ. ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಯ ದಿವ್ಯಾಂಗರು ಶಿಬಿರದ ಸದುಪಯೋಗಪಡಿಸಿ ಕೊಳ್ಳುವಂತೆ ಮನವಿ ಮಾಡಿದರು.

ರೋಟರಿ ಸಂಸ್ಥೆಯು ಅಂತಾರಾಷ್ಟ್ರೀಯ ಸೇವಾ ಸಂಸ್ಥೆಯಾಗಿದ್ದು, ಸಮಾಜಮುಖಿ ಕಾರ್ಯಗಳನ್ನು ನಡೆಸುತ್ತಿದ್ದು, ಜನರಿಗೆ ನೆರವಾಗುವ ಕಾರ್ಯಕ್ರಮ ಮಾಡುತ್ತಾ ಬಂದಿದೆ. ಅಂಗವಿಕಲ ಕಲ್ಯಾಣ ಇಲಾಖೆ ಅಧಿಕಾರಿಗಳನ್ನು ವಿಚಾರಿಸಿದಾಗ ಜಿಲ್ಲೆಯಲ್ಲಿ ಕೈ ಕಾಲು ತೊಂದರೆಯುಳ್ಳ ವಿಕಲಚೇನರು ಇದ್ದಾರೆ ಎಂದು ಮಾಹಿತಿ ನೀಡಿದರು. ನಮ್ಮ ಸಂಸ್ಥೆಯ ಅಧ್ಯಕ್ಷರಾದ ಕಾಗಲವಾಡಿಚಂದ್ರು ಅವರ ಅಧಿಕಾರ ವಹಿಸಿಕೊಂಡ ಸಂದರ್ಭದಿಂದಲ್ಲೇ ಕೈ–ಕಾಲು ಕಳೆದುಕೊಂಡಿರುವಂತಹರಿಗೆ ಕೃತಕ ಕೈ–ಕಾಲು ಶಿಬಿರವನ್ನು ಮಾಡಬೇಕು ಎಂದು ಆಶಯದಂತೆ ಈ ಮಹತ್ವ ಆಕಾಂಕ್ಷೆ ಪೂರೈಸುವ ಹಂತಕ್ಕೆ ಬಂದಿದೆ. ಶಿಬಿರದಲ್ಲಿ ಕೈ–ಕಾಲು ಅಳತೆ ಪಡೆದು ಜೂನ್ ತಿಂಗಳ ಮೊದಲ ವಾರದಲ್ಲಿ ಕೃತಕ ಕೈ–ಕಾಲು ಜೋಡಣೆ ಮಾಡಲಾಗುವುದು ಎಂದರು.

ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು, ರೋಟರಿ ಸಂಸ್ಥಾಪಕ ಸದಸ್ಯ ಜಿ.ಆರ್. ಅಶ್ವಥ ನಾರಾಯಣ್, ರೋಟರಿ ಸಂಸ್ಥೆ ಸಂಸ್ಥಾಪಕ ಸದಸ್ಯ ಸಿ.ವಿ.ಶ್ರೀನಿವಾಸಶೆಟ್ಟಿ ಮಾತನಾಡಿದರು. ಹೆಚ್ಚಿನ ಮಾಹಿತಿಗಾಗಿ, ನೊಂದವಣಿಗಾಗಿ ಮೊ. 9620485806, 80882 23227, 9538035559, 9449971709 ಸಂಪರ್ಕಿಸಬಹುದು.

ಪತ್ರಿಕಾಗೋಷ್ಠಿಯಲ್ಲಿ ರೋಟರಿ ಮಾಜಿ ಅಧ್ಯಕ್ಷ ಚಂದ್ರಪ್ರಭಜೈನ್, ಸಂಸ್ಥೆಯ ಮುಂದಿನ ಸಾಲಿನ ಅಧ್ಯಕ್ಷ ಅಬ್ದುಲ್ ಅಜೀಜ್ ದೀನಾ, ಕಾರ್ಯದರ್ಶಿ ಅಂಕಶೆಟ್ಟಿ ಹಾಜರಿದ್ದರು.

ಚಾ.ನಗರ ಜಿಲ್ಲೆಗೆ ಪ್ರತಿ ವರ್ಷ ಮಾಧ್ಯಮ ಪ್ರಶಸ್ತಿ ನೀಡಲು ಸುತ್ತೂರು ಶ್ರೀಗಳಿಗೆ ಮನವಿ

ಚಾಮರಾಜನಗರ, ಮೇ 6– ಸುತ್ತೂರು ಶ್ರೀಮಠದಿಂದ ನೀಡಲಾಗುವ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿಯನ್ನು ಪ್ರತಿವರ್ಷವೂ ಚಾಮರಾಜನಗರ ಜಿಲ್ಲೆಗೆ ಪ್ರತ್ಯೇಕವಾಗಿ ನೀಡುವಂತೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಚಾಮರಾಜನಗರ ಜಿಲ್ಲಾ ಘಟಕದ ವತಿಯಿಂದ ಸುತ್ತೂರು ಶ್ರೀಗಳಾದ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳಿಗೆ ಮನವಿ ಸಲ್ಲಿಸಲಾಯಿತು.

ನಗರದಲ್ಲಿ ನಡೆದ ಶರಣ ಸಾಹಿತ್ಯ ಕಾರ್ಯಕ್ರಮದಲ್ಲಿ ಸ್ವಾಮೀಜಿಗಳು ಭಾಗವಹಿಸಿದ್ದ ವೇಳೆ, ಸಂಘದ ಪದಾಧಿಕಾರಿಗಳು ಮನವಿ ಪತ್ರವನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಪದಾಧಿಕಾರಿಗಳು, ಚಾಮರಾಜನಗರ ಜಿಲ್ಲೆ ಪತ್ರಿಕೋದ್ಯಮ ಕ್ಷೇತ್ರದಲ್ಲಿ ತನ್ನದೇ ಆದ ಗುರುತನ್ನು ಹೊಂದಿದ್ದು, ಅನೇಕ ಹಿರಿಯ ಪತ್ರಕರ್ತರು ಹಲವು ವರ್ಷಗಳಿಂದ ಸಮಾಜಮುಖಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ತಿಳಿಸಿದರು.

ಆದ್ದರಿಂದ ಜಿಲ್ಲೆಯ ಪತ್ರಕರ್ತರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರತಿ ವರ್ಷವೂ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಚಾಮರಾಜನಗರ ಜಿಲ್ಲೆಗೆ ನೀಡಬೇಕು ಎಂದು ಮನವಿ ಮಾಡಿದರು.



ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿಯನ್ನು ಪ್ರತೀ ವರ್ಷ ಜಿಲ್ಲೆಗೆ ನೀಡುವಂತೆ ಸುತ್ತೂರು ಶ್ರೀಗಳಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಆರ್.ಎನ್. ಸಿದ್ದಲಿಂಗಸ್ವಾಮಿ, ಖಾಸಗಿ ಚಾನಲ್ ವರದಿಗಾರ ಎಸ್.ಎಂ. ನಂದೀಶ್, ಪತ್ರಕರ್ತರಾದ ರಾಜು, ಲಿಂಗಪ್ಪ, ಹೊಮ್ಮ ನಂಜುಂಡನಾಯಕ ಸೇರಿದಂತೆ ಇತರರು ಉಪಸ್ಥಿತರಿದ್ದರು.

‘ಲಕ್ಷ್ಯ’ ಕವನ ಸಂಕಲನ ಲೋಕಾರ್ಪಣೆ

ಅಂತರಂಗದ ಸಂವೇದನೆಯಿಂದ ಸಾಹಿತ್ಯ ರಚನೆ ಸಾಧ್ಯ

ಚಾಮರಾಜನಗರ: ಕವಿಗಳಲ್ಲಿ ಅಂತರಂಗದ ಸಂವೇದನೆ, ಸೃಜನಶೀಲತೆಯ ಭಾವನೆಗಳು ಇದ್ದಾಗ ಮಾತ್ರ ಸಾಹಿತ್ಯಗಳು ರಚನೆಯಾಗುತ್ತದೆ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಡಾ.ಸಿ. ಸೋಮಶೇಖರ ತಿಳಿಸಿದರು.

ನಗರದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್‌ನಿಂದ ನಡೆದ ಡಾ.ಎನ್. ಮಮತಾ ಲೋಕೇಶ್ವರಿ ಅವರ ‘ಲಕ್ಷ್ಯ’ ಕವನ ಸಂಕಲನ ಲೋಕಾರ್ಪಣಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಸೃಜನಶೀಲವಾದ ಕ್ರಿಯೆಯಿಂದ ಮಾತ್ರ ಕವನಗಳು ರಚನೆಯಾಗುತ್ತವೆ. ಇಂತಹ ಕವನಗಳ ರಚನೆಗಳ ಬಗ್ಗೆ ಹಲವಾರು ಕವಿಗಳು ಅನೇಕ ರೀತಿಯಲ್ಲಿ ಬಣ್ಣಿಸಿದ್ದಾರೆ. ಕಾವ್ಯ ಹುಟ್ಟುವುದು ಹೃದಯದಲ್ಲಿ ಎಂದು ಠಾಕೂರ್ ಅವರು ಹೇಳಿದ್ದರೆ, ಕಾವ್ಯ ಜ್ಞಾನದ ಸಂಕೇತ ಹಾಗೂ ಹೃದಯದ ಸ್ಪಂದನೆ ಎಂದು ಕವಿ ಕುವೆಂಪು ಅವರು ಹೇಳಿದ್ದಾರೆ ಎಂದರು.



ಜಿಲ್ಲಾ ಶರಣ ಸಾಹಿತ್ಯ ಪರಿಷತ್ ವತಿಯಿಂದ ನಡೆದ ಡಾ.ಎನ್. ಮಮತಾ ಲೋಕೇಶ್ವರಿ ಅವರ ‘ಲಕ್ಷ್ಯ’ ಕವನ ಸಂಕಲನ ಬಿಡುಗಡೆ ಸಮಾರಂಭ ವನ್ನು ಸ್ವಾಮೀಜಿಯವರೊಂದಿಗೆ ಗಣ್ಯರು ಉದ್ಘಾಟಿಸಿದರು.

ಕಾವ್ಯಗಳನ್ನು ರಚನೆ ಮಾಡಬೇಕಾದರೆ ಮೊದಲಿಗೆ ಭಾವನೆಗಳನ್ನು ಅರಿತುಕೊಳ್ಳಬೇಕು. ನೋವು–ನಲಿವುಗಳನ್ನು ತಿಳಿದುಕೊಳ್ಳಬೇಕು. ಅಲ್ಲದೇ ಅಂತರಂಗದ ಅನುಭವ ಮುಖ್ಯವಾಗಿರಬೇಕು. ಜತೆಗೆ ತಾವು ಕಂಡಂತಹ ಸತ್ಯ ಮತ್ತು ಅನ್ವೇಷಣೆಯ ಮೂಲಕ ಕಾವ್ಯಗಳನ್ನು ರಚನೆ ಮಾಡಬೇಕು ಎಂದು ಸಲಹೆ ನೀಡಿದರು.

ಕವಿ ಹಾಗೂ ಕವಯಿತ್ರಿಗಳಾಬೇಕಾದರೆ ಅವರು ಲೋಕಾಂತರಗಳಾಗಿರಬೇಕು. ಸಮಾಜದ ನೋವಿಗೆ ಸ್ಪಂದಿಸಬೇಕು. ಪ್ರಕೃತಿಯ ಜತೆಗೆ ಉತ್ತಮವಾದ ಸಂಬಂಧವನ್ನು ಇಟ್ಟುಕೊಳ್ಳಬೇಕು. ಜೀವನದ ಅನುಭವ, ಹಸಿವು, ಬಡತನದ ಅನುಭವಗಳು ಇರಬೇಕು. ಅಷ್ಟೇ ಅಲ್ಲದೇ ಓದುವ ಆಸಕ್ತಿ ಮತ್ತು ಅಭಿರುಚಿ ಇರಬೇಕು ಎಂದರು.

ಕಲ್ಪನಾ ಶಕ್ತಿ, ಕಲ್ಪನಾಲೋಕ ಹಾಗೂ ಕನಸುಗಳಿರಬೇಕು. ಕನಸುಗಾರನಾಗದವನು ಯಾವುದೇ ಸಾಧನೆಯನ್ನು ಮಾಡಲು ಸಾಧ್ಯವಿಲ್ಲ. ಉದಾರವಾಡಿ, ಸಮಾಜವಾದಿಯಾಗಿರಬೇಕು. ಏಕಾಗ್ರತೆ ಬಹಳ ಮುಖ್ಯ. ಮಾನವೀಯ ಮೌಲ್ಯಗಳನ್ನು ತಿಳಿದುಕೊಳ್ಳಬೇಕು ಎಂದು ತಿಳಿಸಿದರು.

ಲಕ್ಷ್ಯ ಕವನವನ್ನು ಕುರಿತು ಹಿರಿಯ ಸಾಹಿತಿ ಪ್ರೊ.ಎಸ್. ಶಿವರಾಜಪ್ಪ ಮಾತನಾಡಿದರು. ಕವನ ಸಂಕಲನದ ಲೋಕಾರ್ಪಣೆ ಮತ್ತು ಸಾನಿಧ್ಯವನ್ನು ವಹಿಸಿದ್ದ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಆಶೀರ್ವಚನವನ್ನು ನೀಡಿದರು. ಕಾರ್ಯಕ್ರಮದಲ್ಲಿ ಮಾಜಿ ಸಚಿವೆ ಡಾ. ಗೀತಾ ಮಹದೇವಪ್ರಸಾದ್, ಮಾಜಿ ಎಂಎಲ್‌ಸಿ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಬಿ.ಕೆ.ರವಿಕುಮಾರ್, ಜಿಲ್ಲಾ ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಕೆ.ಎಂ. ವಸಂತಮ್ಮ, ಲೇಖಕಿ ಡಾ. ಮಮತಾ ಲೋಕೇಶ್ವರಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕನ್ನಡ ಭಾಷೆ ಬಳಕೆಗೆ ಹಿಂದೇಟು ಬೇಡ



ಯಳಂದೂರು ಪಟ್ಟಣದ ಬಿಳಿಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ತಾಲೂಕು ಕಸಾಪ ವತಿಯಿಂದ ಆಯೋಜಿಸಿದ್ದ ಸಂಸ್ಥಾಪಕರ ದಿನಾಚರಣೆ ಕಾರ್ಯಕ್ರಮವನ್ನು ಸಿಪಿಐ ಸುಬ್ರಹ್ಮಣ್ಯ ಉದ್ಘಾಟಿಸಿದರು.

ಯಳಂದೂರು, ಮೇ 6– ಕನ್ನಡ ಭಾಷೆಯ ಬಳಕೆಗೆ ಯಾವುದೇ ಹಿಂದೇಟು ಹಾಕಬಾರದು, ಇತರೆ ಭಾಷೆಗಳನ್ನು ವ್ಯವಹಾರಿಕವಾಗಿ ಬಳಸಿಕೊಂಡು ಕನ್ನಡವನ್ನು ಎಲ್ಲೆಡೆ ಬಳಕೆ ಮಾಡುವ ಪರಿಪಾಠವನ್ನು ಬಳಸಿಕೊಳ್ಳಬೇಕು ಎಂದು ಆರಕ್ಷಕ ವೃತ್ತ ನಿರೀಕ್ಷಕ ಸುಬ್ರಹ್ಮಣ್ಯ ಕರೆ ನೀಡಿದರು.

ಮಂಗಳವಾರ ಪಟ್ಟಣದ ಬಿಳಿಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿದ್ದ ಪರಿಷತ್ತಿನ ಸಂಸ್ಥಾಪಕ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಭಾಷೆ ನಮ್ಮ ಅಸ್ಮಿತೆಯಾಗಿದೆ. ಇದಕ್ಕೆ ಗೌರವಿಸುವ ಇದನ್ನು ಬಳಸುವ, ಉಳಿಸುವ ನಿಟ್ಟಿನಲ್ಲಿ ನಾವು ಕಟಿಬದ್ಧರಾಗಿರಬೇಕು. ಆಗ ಭಾಷೆಯ ಬೆಳವಣಿಗೆಗೆ ಇದು ಸಹಕಾರಿಯಾಗುತ್ತದೆ ಎಂದರು.

ಮುಖ್ಯ ಭಾಷಣಕಾರ ಶಿಕ್ಷಕ ಮಂಜುನಾಥಸ್ವಾಮಿ ಮಾತನಾಡಿ, ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಐತಿಹ್ಯವಿದೆ. ಇದು ನಮ್ಮ ಹೆಮ್ಮೆಯಾಗಬೇಕು, ಭಾಷೆ ನಮ್ಮ ಅಸ್ಮಿತೆಯಾಗಿದೆ. ಇದನ್ನು ಬೆಳೆಸುವ ನಿಟ್ಟಿನಲ್ಲಿ ನಮ್ಮ ಶ್ರಮ ನಿರಂತರವಾಗಿರಬೇಕು. ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ನಿರಂತರವಾಗಿ ಕೆಲಸ ಮಾಡುತ್ತಿದೆ. ಅನೇಕ ಕನ್ನಡ ಪರ ಸಂಘಟನೆಗಳೂ ಕೂಡ ಇದಕ್ಕೆ ಶ್ರಮಿಸುತ್ತಿವೆ. ನಾವು ಕೂಡ ಇದರ ಭಾಗವಾಗಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲ ಹೇಮಂತ್ ಕುಮಾರ್ ಮಾತನಾಡಿ, ನಮ್ಮ ಜಿಲ್ಲೆ ಗಡಿನಾಡಿನಲ್ಲಿದ್ದರೂ ಕೂಡ ಕನ್ನಡ ಭಾಷೆ ಮಾತನಾಡುವ ಜನರೇ ಹೆಚ್ಚಾಗಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನವರು ನಮ್ಮ ಜಿಲ್ಲೆಯಲ್ಲೂ ಕೂಡ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಬೇಕು. ಇದಕ್ಕೆ ಇಲ್ಲಿನ ಸ್ಥಳೀಯರು, ಕನ್ನಡಾಭಿಮಾನಿಗಳು, ಜನಪ್ರತಿನಿಧಿಗಳು ಹೆಚ್ಚಿನ ಶ್ರಮ ವಹಿಸಬೇಕು ಎಂದು ಸಲಹೆ ನೀಡಿದರು.

ತಾಲೂಕು ಕಸಾಪ ಅಧ್ಯಕ್ಷ ಯರಿಯೂರು ನಾಗೇಂದ್ರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪರಶಿವಮೂರ್ತಿ ಮಾತನಾಡಿದರು.

ಕಾರ್ಯದರ್ಶಿ ಡಿ.ಪಿ. ಮಹೇಶ್, ಕೋಶಾಧ್ಯಕ್ಷ ಫೈರೋಜ್‌ಖಾನ್. ಕರವೇ ಜಿಲ್ಲಾ ಉಪಾದ್ಯಕ್ಷ ವೈ.ಕೆ.ಮೋಳೆ ನಾಗರಾಜು, ಪಪಂ ನಾಮನಿರ್ದೇಶಿತ ಸದಸ್ಯ ಲಿಂಗರಾಜುಮೂರ್ತಿ ಚಾಮಲಾಪುರ ವಿಜಯ್ ಪ್ರಾಧ್ಯಾಪಕರಾದ ಪದ್ಮ, ಗಣೇಶ್‌ಪ್ರಸಾದ್, ಶ್ರೀನಿವಾಸ್, ಮಂಜುಳಾ ಸೇರಿದಂತೆ ಅನೇಕರು ಇದ್ದರು.


ವಿ.ಸಿ.ಹೊಸೂರು ಗ್ರಾಮದಲ್ಲಿ ಲಿಂಗದೀಕ್ಷೆ

ಚಾಮರಾಜನಗರ: ತಾಲೂಕಿನ ವಿ.ಸಿ. ಹೊಸೂರು ಗ್ರಾಮದ ಶ್ರೀ ಗುರು ಮಲ್ಲೇಶ್ವರ ಭಿಕ್ಷದ ಮಠದಲ್ಲಿ ಧರ್ಮಪ್ರಸಾರ ಶಿವದೀಕ್ಷೆ –ಲಿಂಗದೀಕ್ಷೆ ಕಾರ್ಯಕ್ರಮ ನಡೆಯಿತು.

ಮೈಸೂರಿನ ಬಸವೇಶ್ವರ ಮಠದ ಶ್ರೀ ಶಿವಪ್ರಭು ಮಹಾಸ್ವಾಮೀಜಿಯವರು ಮಠದಲ್ಲಿ ಶಿವಪೂಜೆಯನ್ನು ನಿರ್ವಹಿಸಿ, ಗ್ರಾಮದ ಮಹಿಳೆಯರು, ಯುವಕರಿಗೆ ಲಿಂಗಧಾರಣೆ ಮಾಡುವ ಮುಖಾಂತರ ದೀಕ್ಷೆಯನ್ನು ನೀಡಿದರು.

ವಿದ್ಯಾಪೀಠದ ಪಂಚಾಕ್ಷರಿ ಸ್ವಾಮೀಜಿ, ಮೂಡ್ಲುಪುರ ನದೀಶ್, ಅಶೋಕ್, ಊರಿನ ಗೌಡ್ರು ನಂಜುಂಡಸ್ವಾಮಿ, ಪುಟ್ಟಣ್ಣ, ಶಾಂತಪ್ಪ, ನಂಜೇಂದ್ರಪ್ಪ, ಮಹದೇವಪ್ಪ, ಹೆಚ್.ಆರ್. ಸ್ವಾಮಿ, ಪ್ರಸಾದ್, ಗಿರೀಶ್, ಮಂಜು, ಶಿವರಾಜ್, ಗ್ರಾಮಸ್ಥರು ಹಾಜರಿದ್ದರು.

ಆರ್.ಪಿ.ಕಾಂತರಾಜು ನಿಧನ



ಚಾಮರಾಜನಗರ: ನಗರದ ಹಿರಿಯ ವರ್ತಕ ಆರ್.ಪಿ. ಕಾಂತರಾಜು(87) ಬುಧವಾರ ಸಂಜೆ ನಿಧನರಾದರು.

ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿಯನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ನಾಳೆ(ಗುರುವಾರ) ಚಾಮರಾಜನಗರದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ — ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SSLCಯಲ್ಲಿ ಫೇಲಾದ ವಿದ್ಯಾರ್ಥಿಗಳಿಗೆ ಮೊಬೈಲ್ ಶೋರೂಮ್‌ನಲ್ಲಿ ಕೆಲಸಕ್ಕಾಗಿ ಹೆಚ್ಚಿನ ಅವಕಾಶ
ಆಸಕ್ತರು ಸಂಪರ್ಕಿಸಿ.
9886409722

ಬೇಕಾಗಿದ್ದಾರೆ
ಎಮ್.ಎನ್.ಸಿ. ಕಂಪನಿಗೆ 30 ರಿಂದ 65 ವರ್ಷದೊಳಗಿನ ಗೃಹಿಣಿಯರು, ನಿವೃತ್ತ ವ್ಯಕ್ತಿ, ಬಿಸಿನೆಸ್ ವ್ಯಕ್ತಿಯರು ಬೇಕಾಗಿದ್ದಾರೆ. ಅರ್ಹತೆ: ಪಿಯುಸಿ / ಯಾವುದೇ ಪದವೀಧರರು.
ಸಂಪರ್ಕಿಸಿ: ಟಿ.ಎಸ್. ರವೀಂದ್ರನಾಥ್
Mob: 6361386598

ಬೇಕಾಗಿದ್ದಾರೆ
ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಹಗಲು/ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಹುಡುಗ/ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ :
9980131139
ವಿಜಯ ಸರ್ವೀಸ್‌ಸ್ಟೇಷನ್
ಧನ್ವಂತರಿ ರಸ್ತೆ, ಮೈಸೂರು

ಬೇಕಾಗಿದ್ದಾರೆ
ನುರಿತ ಬೈಂಡರ್ಸ್ ಮತ್ತು ಬೈಂಡಿಂಗ್ ಹೆಲ್ಪರ್ ಬೇಕಾಗಿದ್ದಾರೆ. (ಪುರುಷ ಮತ್ತು ಮಹಿಳೆಯರು) ಸಂಪರ್ಕಿಸಿ :
9845497455
ಮಹದೇಶ್ವರ ಪ್ರಿಂಟರ್ಸ್
ನಂ. 29, ಅಂಗನವಾಡಿ ರಸ್ತೆ, 2ನೇ ಹಂತ, ಗಾಯತ್ರಿಪುರಂ, ಮೈಸೂರು–570019

ಡ್ರೈವರ್ಸ್ ಬೇಕಾಗಿದ್ದಾರೆ
ಕೆ.ಆರ್. ಸಾಗರ(KRS)ನಲ್ಲಿ ಸಿಲಿಂಡರ್ ಸರಬರಾಜು ಮಾಡಲು ಡ್ರೈವರ್ಸ್ ಬೇಕಾಗಿದ್ದಾರೆ. ಸ್ವಂತ ವಾಹನವಿದ್ದರು ಅವಕಾಶವಿದೆ.
7259826999
9482047333

JOB OPENINGS
Location : Kuvempunagar, Mysuru, Sales Executive(Male)- 2 Posts
Sales Co ordinator (Female) - Post, Both Freshers/Experienced
9980747256

ಶ್ರೀ ಗೌರೀಶಂಕರ ಟ್ರಾವೆಲ್ಸ್
29–5–2026 (13 ದಿನ): ಹರಿದ್ವಾರ್, ಋಷಿಕೇಶ್, ಗಂಗೋತ್ರಿ, ಉತ್ತರ ಕಾಶಿ, ಯಮುನೋತ್ರಿ, ಗುಪ್ತಕಾಶಿ, ಬದರಿನಾಥ್, ಕೇದಾರ್‌ನಾಥ್, ದೇವಪ್ರಯಾಗ್, ದೆಹಲಿ. (ವಿಮಾನ, ಬಸ್, ಊಟ, ರೂಂ)
Mob: 9620002114

ಬೇಕಾಗಿದ್ದಾರೆ
1. ಸೆಕ್ಯೂರಿಟಿ ಗಾರ್ಡ್ ಮಂಡ್ಯ, ಮೈಸೂರು ಹಾಗೂ ಬನ್ನೂರು ರೋಡ್, ವಿದ್ಯಾವಿಕಾಸ್ ಕಾಲೇಜು ಸುತ್ತಮುತ್ತ. 2. ಆಫೀಸ್ ಅಸಿಸ್ಟೆಂಟ್ (M/F) ಮೇಟಗಳ್ಳಿ, ವಿಜಯನಗರ, ಹೆಬ್ಬಾಳ್, ಗೋಕುಲಂ ಸುತ್ತಮುತ್ತ ಮಾತ್ರ. BA, Bcom ny Degree (MS WORD/EXCEL KANNADA NUDI) 3. ಹೌಸ್ ಕೀಪಿಂಗ್ (ಗಂಡಸರು) ಜೆ.ಪಿ.ನಗರ ಸುತ್ತಮುತ್ತ. ಸಂಪರ್ಕಿಸಿ
9900749104 - 9036745292

SITE FOR SALE
2 Adjacent Sites 25X40 sqft (11B khata) South facing Gejagalli, near srinagara, mysuru. 33 lakhs per site (Negotiable)
8904523988
9945494767

ನಮ್ಮ ಸಂಸ್ಥೆಗೆ ಬೇಕಾಗಿದ್ದಾರೆ
ಸಮಾಜ ಸೇವಾ ಮನೋಭಾವದ ಕಂಪ್ಯೂಟರ್ ಜ್ಞಾನವುಳ್ಳ ವಿದ್ಯಾವಂತ ಯುವತಿಯರು ಬೇಕಾಗಿದ್ದಾರೆ.
ಆಕರ್ಷಕ ಸಂಬಳ. ನೇರ ಸಂಪರ್ಕಿಸಿ
6361740552
9449408551

COMMERCIAL SITE FOR SALE
40x60 Muda Allotment with 60ft Road Nearby Raju Corner, 2nd Phase, 4th Stage, Vijayanagar, Mysore
8904812796

WANTED TEACHING STAFF
for reputed institution (Experience Preferred) for all subjects.Transport facilities available.Drop your resume through WhatsApp
8971577685
9980631121

WANTED
Patient Coordinator with Minimum Two Years of Similar Exp in Hospital
Send Resume to Preranahospital2013@gmail.com
9480477674

ರೂಮ್ ಬಾಯ್ಸ್ ಬೇಕಾಗಿದ್ದಾರೆ
ಪಿರಿಯಾಪಟ್ಟಣದ ಲಾಡ್ಜ್‌ನಲ್ಲಿ ಕೆಲಸ ಮಾಡಲು ರೂಂ ಬಾಯ್ಸ್ ಬೇಕಾಗಿದ್ದಾರೆ
7349477338

ಪ್ರಮಾಣ ಪತ್ರ
ಮಂಗಳ W/o ಲೇ. ಸಿದ್ದೇಗೌಡ ಆದ ನಾನು ಮಾದೇಗೌಡನಹುಂಡಿ ಗ್ರಾಮ, ಕಸಬಾ ಹೋಬಳಿ, ಟಿ.ನರಸೀಪುರ ತಾಲೂಕು, ಮೈಸೂರು ಜಿಲ್ಲೆ ಇಲ್ಲಿ ವಾಸವಿದ್ದು, ಆಧಾರ್ ಕಾರ್ಡ್, ರೇಷನ್ ಕಾರ್ಡ್, ಮತದಾರರ ಗುರುತಿನ ಚೀಟಿಯಲ್ಲಿ ನನ್ನ ಹೆಸರು 'ಮಂಗಳ' ಎಂದು ನಮೂದಾಗಿದ್ದು, ಯೂನಿಯನ್ ಬ್ಯಾಂಕ್ ಖಾತೆಯಲ್ಲಿ ನನ್ನ ಹೆಸರು 'ಮಂಗಳಮ್ಮ' ಎಂದು ತಪ್ಪಾಗಿ ನಮೂದಾಗಿರುತ್ತದೆ. ನನ್ನ ಸರಿಯಾದ ಹೆಸರು, 'ಮಂಗಳ' ಎಂದು ಪ್ರಮಾಣೀಕರಿಸುತ್ತೇನೆ ಹಾಗೂ ಸದರಿ ಪ್ರಮಾಣ ಪತ್ರವು ಸಂಬಂಧಪಟ್ಟ ಯೂನಿಯನ್ ಬ್ಯಾಂಕ್ ರವರಿಗೆ ಸಲ್ಲಿಸಲು ಅವಶ್ಯವಿರುತ್ತದೆ.
ಸಹಿ/– ಮಂಗಳ

ತಕ್ಷಣ ಬೇಕಾಗಿದ್ದಾರೆ
ಮ್ಯಾನೇಜರ್ ಹುದ್ದೆಗೆ ಮಾಜಿ ಸೈನಿಕರು (EX - Service man) ಸೆಕ್ಯುರಿಟಿ ಏಜೆನ್ಸಿಯಲ್ಲಿ ಕೆಲಸ ಮಾಡಿದ ಅನುಭವವುಳ್ಳ ಮೈಸೂರಿನ ಸುತ್ತಮುತ್ತಲಿನವರು ಬೇಕಾಗಿದ್ದಾರೆ, (ಇಂಗ್ಲಿಷ್, ಕನ್ನಡ, ಹಿಂದಿ ಮತ್ತು ತೆಲುಗು ಭಾಷೆ ಮಾತನಾಡುವವರು)
ಸ್ಕ್ವಾಡ್ರನ್ ಸೆಕ್ಯೂರಿಟಿ – ಮ್ಯಾನ್ ಪವರ್ ಸರ್ವೀಸ್
#221, 6ನೇ ಕ್ರಾಸ್, ಮಹಾದೇಶ್ವರ ಬಡಾವಣೆ, ತ್ರಿನೇತ್ರ ಸರ್ಕಲ್, ಹೆಬ್ಬಾಳ್ ಮೈಸೂರು–570016
ಸಂಪರ್ಕಿಸಿ: 7975930787
8197269895, 8050900395

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

SITE FOR SALE
30/60 MUDA SITE For Sale in DATTAGALLI (PRIME LOCATION) Mysore.
40/60 Site For Sale in Annanda Nagara Near Royal Oak Mysore.
PH: 9900464111

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535175624

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ಸಂಪು, ಟ್ಯಾಂಕ್ ಕ್ಲೀನಿಂಗ್, ಸೋಲಾರ್ ಸರ್ವೀಸ್.
6362150462, 7795749881

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ಇರುವ ಕಾರ್ ಶೋರೂಮ್ ಹಾಗೂ ಬೈಕ್ ಶೋರೂಮ್‌ಗಳಿಗೆ ತಕ್ಷಣ ಯುವಕ ಮತ್ತು ಯುವತಿಯರು ಬೇಕಾಗಿದ್ದಾರೆ.
EDUCATION, SSLC, PUC, ITI, DIPOMA DEGREE ಖಾಲಿ ಇರುವ ಹುದ್ದೆಗಳು CASHIER, BILLING, RECEPTIONIST, HR, ADMIN, ACCOUNT, ETC, SALARY (18K-38K) ಹೆಚ್ಚಿನ ಮಾಹಿತಿಗಾಗಿ ಕರೆಮಾಡಿ,
9632659609
7899627704

ಕಳೆದಿದೆ
ಮೈಸೂರು ಸಿಟಿ–570017, ಹಿನಕಲ್ ಪೋಸ್ಟ್, ಹೆಬ್ಬಾಳ್, 25/5ನೇ ಕ್ರಾಸ್, ಮನೆ ನಂಬರ್ 840/ಎಸ್ ರಲ್ಲಿ ವಾಸವಾಗಿರುವ ಲೇಟ್ ಬದ್ರಿ ಪ್ರಸಾದ್ ರವರ ಮಗನಾದ ಸುಮಾರು 33 ವರ್ಷ ವಯಸ್ಸಿನ ಶ್ರೀ ವಿನಯ್ ಪ್ರಸಾದ್ ಬಿ [ಆಧಾರ್ ನಂ 6996 4541 8163] ಆದ ನಾನು ಈ ಮೂಲಕ ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಹೇಳುವುದೇನೆಂದರೆ. ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದು, ಆದಾಗಿ ನನ್ನ ತಂದೆಯವರಾದ ಬದ್ರಿಪ್ರಸಾದ್ ರವರ ಹೆಸರಿನಲ್ಲಿರುವ ಮೈಸೂರು ಸಿಟಿ, ಹೆಬ್ಬಾಳ್ 2ನೇ ಹಂತ ಬಡಾವಣೆಯ ನಿವೇಶನ ಸಂಖ್ಯೆ 840/ಎಸ್ ರ ಸ್ವತ್ತನ್ನು ಹೊಂದಿದ್ದು, ಸದರಿ ಸ್ವತ್ತಿನ ದಿನಾಂಕ 20–03–2010 ರ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಮೈಸೂರು, ಪುಸ್ತಕ ಸಂಖ್ಯೆ 225, ಪುಟ ಸಂಖ್ಯೆ ವಿ.38 ರ ವರ್ಗಾವಣೆ ಪತ್ರವು ಮನೆಯನ್ನು ಸ್ಥಳಾಂತರಗೊಳಿಸುವ ಸಮಯದಲ್ಲಿ ನನಗೆ ಅರಿವಿಲ್ಲದ ಹಾಗೇ ಕಳೆದು ಹೋಗಿರುತ್ತದೆ. ಯಾರಿಗಾದರೂ ಸಿಕ್ಕಿದರೆ ಮೇಟಗಳ್ಳಿ ಪೊಲೀಸ್ ಠಾಣೆಗೆ ಅಥವಾ
ಸಂಪರ್ಕಿಸಿ :9620696395

ಅಡುಗೆಯವರು ಬೇಕಾಗಿದ್ದಾರೆ
ಮಾಂಸಹಾರಿ ಹೋಟೆಲ್‌ಗೆ ನಾಟಿ ಸ್ಟೈಲ್ ಅಡುಗೆ ಮಾಡುವ ಪುರುಷರು ಮತ್ತು ಮಹಿಳೆಯರು ಬೇಕಾಗಿದ್ದಾರೆ.
ಮೊ: 6364548607

Name Change
I ROGER FERNANDEZ CHRISTY Residing at H.No 39 1st FLOOR MIG 2 GROUP 3.KHB COLONY VTC HOOTAGAHALLI PO BELAVADI 570018 have changed my name from ROGER FERNANDEZ CHRISTY to ROGER FERNANDES CHRISTY in before Notary Rajkumar Delhi vide affidavit Dated 2-5-2026
Sd/- ROGER FERNANDES CHRISTY

ಪ್ರವಾಸ
09.05.2026, 10.06.2026 ರಿಂದ 14 ದಿನಗಳು ಚಾರ್‌ಧಾಮ ಪ್ರವಾಸ, 28.06.2026, 10.07.2026 ರಿಂದ 8/13 ದಿನಗಳು ಅಮರನಾಥ್, ಕಾಶ್ಮೀರ ಪ್ರವಾಸ 25.07.2026 ರಿಂದ 13 ದಿನಗಳು ರಿಯಾಯಿತಿ ದರದಲ್ಲಿ ಮಾನಸ ಸರೋವರ, ಕೈಲಾಸ ಪರ್ವತ, ನೇಪಾಳ
ವಿಷ್ಣು ಟೂರ್ಸ್ ಅಂಡ್ ಟ್ರಾವೆಲ್ಸ್, ಬೆಂಗಳೂರು
9342287551
9986624447, 9986254573

PLOTS FOR SALE
at Rs 2600 per sq.ft Narayanaguru Nagara layout, Kumarabeedu, 1km from Sobha Retreat Layout, Mysore. Brokers Excuse. Contact:
7483722108

ಕೊಡಗು ಸಹಕಾರ ಸಂಘ ನಿ.,
ಜಯಲಕ್ಷ್ಮೀಪುರಂ, ಮೈಸೂರು.
ಪ್ರಕಟಣೆ
ಈ ಸಂಘದ ಸಭಾಂಗಣ ನೋಡಿಕೊಳ್ಳಲು ಮತ್ತು ಶುಚಿತ್ವ ಕೆಲಸಕ್ಕಾಗಿ ನೌಕರರು ಬೇಕಾಗಿದ್ದಾರೆ. ಇಲ್ಲೇ ಉಳಿದುಕೊಳ್ಳಲು ವಸತಿ ಸೌಲಭ್ಯವಿದ್ದು ಮಾಸಿಕ ಸಂಚಿತ ವೇತನ ಮತ್ತು ಶುಚಿತ್ವ ಭತ್ಯೆ ಪಾವತಿಸಲಾಗುವುದು. ಆಸಕ್ತಿ ಉಳ್ಳವರು ಕೂಡಲೇ ಸಂಘದ ಕಚೇರಿ ದೂರವಾಣಿ ಸಂಖ್ಯೆ 0821-2511987 ಅಥವಾ ಮೊಬೈಲ್ ಸಂಖ್ಯೆ 9901392444 ನ್ನು ಸಂಪರ್ಕಿಸುವುದು.

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯೋಮಿತಿ : 50 ವರ್ಷದೊಳಗೆ
ಸಂಬಳ: 18000 (8 ಗಂಟೆ, 26 ದಿನಗಳು) ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular/ Saturday / Correspondence Courses with piactical training
www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೇಕಾಗಿದ್ದಾರೆ
ಗ್ಯಾಸ್ ಏಜನ್ಸಿಯಲ್ಲಿ ಸಿಲಿಂಡರ್ ಡೆಲಿವರಿ ಮಾಡಲು ಹುಡುಗರು ಬೇಕಾಗಿದ್ದಾರೆ. ಸರಕು ಸಾಗಾಣೆ ಮಾಡುವ ಆಟೋ/ಮಿನಿ ವ್ಯಾನ್ ಇದ್ದವರಿಗೆ ಮೊದಲ ಆದ್ಯತೆ. ಸಂಪರ್ಕಿಸಿ
7975409456
9686202867

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
ರೂ. 900. ಸಂಪರ್ಕಿಸಿ:
Mob: 9108048064

Site For Sale
3340 Sq.Ft, East Face, MCC, E Khatha Rs.5500/- per Sq.Ft #.J.P.Nagar, Near New Kamakshi Hospital, Mysore
Contact: 9900299714
ಕೆಲಸಕ್ಕೆ ಬೇಕಾಗಿದ್ದಾರೆ
ಆಫೀಸ್ ಕೆಲಸಕ್ಕೆ, ಹುಡುಗರು, ಹುಡುಗಿಯರು ಬೇಕಾಗಿದ್ದಾರೆ ವಿದ್ಯಾಭ್ಯಾಸ: ಪಿ.ಯು.ಸಿ ಯಿಂದ ಪದವಿ ವರೆಗೆ
ಸಂಪರ್ಕಿಸಿ: 9945813602

ಹಳೆಯ ಮನೆ ಮಾರಾಟಕ್ಕಿದೆ
15x50 ಪೂರ್ವ ದಿಕ್ಕು, ವಿದ್ಯಾರಣ್ಯಪುರಂ, 24ನೇ ಕ್ರಾಸ್.
Mob: 6366556050

ವೃದ್ಧಾಶ್ರಮ
ಪಾರ್ಶ್ವವಾಯು ಪೀಡಿತರು, ಹಾಸಿಗೆ ಹಿಡಿದವರು ಮತ್ತು ವಯಸ್ಸಾದ ವೃದ್ಧರನ್ನು ಸುಸಜ್ಜಿತವಾದ ಸ್ಥಳದಲ್ಲಿ ಇರಿಸಿಕೊಂಡು ನೋಡಿಕೊಳ್ಳುತ್ತೇವೆ, ಶುದ್ಧತೆ,ಶುದ್ಧ ಆಹಾರ ಮತ್ತು ಮೆಡಿಕಲ್ ಸೌಲಭ್ಯ ನಮ್ಮ ಮೊದಲ ಆದ್ಯತೆ. ಸ್ಥಳ: ಮೈಸೂರು
9916905188

ಶ್ರೀ ಓಂಕಾರೇಶ್ವರ ಟೂರಿಸ್ಟ್
2 ದಿನಗಳ ಪ್ರವಾಸ, 9–5–2026: ಹೊರನಾಡು, ಶೃಂಗೇರಿ, ಬಳೆ ಪದ್ಮಾವತಿ ಇತ್ಯಾದಿ.
7 ದಿನಗಳ ಉತ್ತರ ಕರ್ನಾಟಕ (24–5–2026): ಹಂಪಿ, ಬಾದಾಮಿ, ಕೂಡಲ ಸಂಗಮ ಇತ್ಯಾದಿ.
2 ದಿನಗಳ ಕೇರಳ ಪ್ರವಾಸ 4–6–2026: ವೈನಾಡ್, ಕೊಟ್ಟಿಯೂರು, ಮಹದೇವ ಟೆಂಪಲ್.
6 ದಿನಗಳ ಕೇರಳ ಪ್ರವಾಸ 13–6–2026: ವೈನಾಡ್, ಮುನ್ನಾರ್, ಹಾಲಪ್ಪಿ, ಅನಂತ ಪದ್ಮನಾಭ, ಜಟಾಯು ಇತ್ಯಾದಿ.
Mob: 8618884805

ಪ್ರವಾಸ
9 ದಿನಗಳ ಅಯೋಧ್ಯಾ ನೇಪಾಳ ಮುಕ್ತಿನಾಥ ಪ್ರವಾಸ 4–6–26.
4 ದಿನಗಳ ಕಾಶಿ ಪ್ರವಾಸ 4–6–26.
10 ದಿನಗಳ ಕಾಶ್ಮೀರ ಲೇಹ್ ಲಡಾಕ್ ಪ್ರವಾಸ 16–6–26.
13 ದಿನಗಳ ಚಾರ್ ಧಾಮ್ ಪ್ರವಾಸ 26–5–26
ಸುವರ್ಣ ಯಾತ್ರಾ
9019462508 / 9008381022

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, NIE ಕಾಲೇಜ್ ಪಕ್ಕ, ಮೈಸೂರು
Mob: 9916908454

ಕೆಲಸಕ್ಕೆ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಿ, ಅನುಭವವಿರುವ ಹಾಗೂ ಕಂಪ್ಯೂಟರ್ ಅನುಭವವುಳ್ಳವರು ಬೇಕಾಗಿದ್ದಾರೆ.
ಶ್ರೀ ವರಲಕ್ಷ್ಮಿ ಸ್ಯಾರಿಹೌಸ್ & ಗೋಲ್ಡ್‌ಕವರಿಂಗ್ ಆಭರಣ ಶಾಪ್, ಹೆಬ್ಬಾಳ್, ಕಾವೇರಿ ಸರ್ಕಲ್, ಮೈಸೂರು
9632564819
8277558171

HOUSE FOR SALE
1500 sq. ft corner house, North facing, 2 BHK in Kandaya Nagara 1st Stage, Srirampura 2nd Stage, Mysore.
8105079105, 9972669002

ಪ್ರಾಣಾಯಾಮ ಧ್ಯಾನ ತರಬೇತಿ
ಕ್ರಮ ಬದ್ಧ ಪ್ರಾಣಾಯಾಮ ಮತ್ತು ಧ್ಯಾನ ತರಬೇತಿಯನ್ನು ನುರಿತ ಯೋಗ ತರಬೇತು ದಾರರು ನಿಮ್ಮ ಮನೆಗೆ ಬಂದು ಐದು ದಿನಗಳಲ್ಲಿ ನೀಡುತ್ತಾರೆ. ಆರೋಗ್ಯ ಜೀವನಕ್ಕಾಗಿ ಸಂಪರ್ಕಿಸಿ
Mob: 9449886322

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ, ಹೆಬ್ಬಾಳ್ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮೇಲ್ಪಟ್ಟು, ಸಂಬಳ: 20500+ W/o(8 hrs) ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9880727819
9620667819

ನಿವೇಶನ ಮಾರಾಟಕ್ಕಿದೆ
30x40 ಪೂರ್ವ ದಿಕ್ಕು ಟ್ರ್ಯಾನ್‌ಕ್ವಿಲ್ ಬಡಾವಣೆ, ಆರ್.ಟಿ. ನಗರ. ಹೆಚ್ಚಿನ ಮಾಹಿತಿಗಾಗಿ
Mob: 8904976084

ಡ್ರೈವರ್ ಬೇಕಾಗಿದ್ದಾರೆ
ಗೂಡ್ಸ್ ವಾಹನಕ್ಕೆ ಉಚಿತ ಊಟ, ವಸತಿ ಸೌಲಭ್ಯವಿದೆ.
ಸಂಬಳ: 15,000 – 20,000
Ph: 0821-2491755

ನೇರ ಆಯ್ಕೆ ಉದ್ಯೋಗವಕಾಶ
ವರ್ಕ್ ಫ್ರಮ್ ಮನೆಯಿಂದಲೇ ಕೆಲಸ ಪಾರ್ಟ್ ಟೈಮ್ ಅಂಡ್ ಫುಲ್ ಟೈಮ್ ವರ್ಕ್‌ಗಳಿಗೆ ವಿದ್ಯಾರ್ಥಿಗಳಿಗೆ ಮಹಿಳೆಯರಿಗೆ, ವಯಸ್ಕರಿಗೆ ಮೊದಲ ಆದ್ಯತೆ. ಕೊರಿಯರ್ ಸೌಲಭ್ಯವಿದೆ. 7th, 10th, PUC, Any Degree ಪಾಸ್ / ಫೇಲ್ ಆದವರು 18,000 ರಿಂದ 25,000.
Mob: 7090177661



SUNZONE SOLAR SYSTEM
VM Double Road, Kuvempunagar, Mysuru
9845175443

FOR SALE
20x30 & 30x40 House Available in Dattagalli.
20x30,20x35, 30x40 Sites @ Bogadi,Rainbow School
30x50, 40x60, 50x80 Sites Near RT Nagar, Brahmins Lyt
2&3 BHK Apartments, With All Amenities @ Ramkrishna Nagar.
20x40,30x40,40x60 Site@ JP Ngr.
30x50 House Near Infosys
95386 90359, 90359 90359

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಆಫ್‌ಸೆಟ್ ಮೆಷಿನ್ ಪ್ರಿಂಟರ್ (ಸಿಂಗಲ್ ಕಲರ್) ಮತ್ತು ಫೋಲ್ಡಿಂಗ್ ಮೆಷಿನ್ ಆಪರೇಟರ್ ಹಾಗೂ ಸಹಾಯಕರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು. ಕೂಡಲೆ ಸಂಪರ್ಕಿಸಿ
ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್
ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು–570001
9902639593

ಜಮೀನು ಮಾರಾಟಕ್ಕಿದೆ
LAND FOR SALE
ಮೈಸೂರು–ಬೆಂಗಳೂರು ಹೊಸ ಹೈವೇ ಪಕ್ಕದಲ್ಲಿ 6 ಕಿ.ಮೀ ಮಣಿಪಾಲ್ ಆಸ್ಪತ್ರೆ ಸಿಗ್ನಲ್ ನಿಂದ ಎಲ್ಲಾ ಕಮರ್ಷಿಯಲ್ ಉದ್ದೇಶಗಳಿಗೆ ಉಪಯೋಗ. ಆಸಕ್ತರು ಮಾತ್ರ ಸಂಪರ್ಕಿಸಿ:
Mob: 73488 31599

SITES FOR SALE
in Hebbal infosys 7 Acres, JV Land MUDA Approved Layout Sites for Sales, In gated Community 30x40, 40x60, East, North, West Facing is Available Sqft 3500/- Negotiable, Cab also Arranged
9380142389

WANTED TEACHERS
SDET-School Siddalingapura Post Office road Near Water tank Siddalingapura Mysore-Banglore Road.
SUBJECT: KAN / ENG / HINDI / MATHS / SCIENCE / SOCIAL. Qualification: B.Sc., B.ed, B.A.B.ed / D.ed /NST
9845924194
9535587045

ಕೆಲಸಕ್ಕೆ ಬೇಕಾಗಿದ್ದಾರೆ
ಚೆನ್ನಮ್ಮ ಅಜ್ಜಿ ಗಾಣದ ಎಣ್ಣೆ ವಿಜಯನಗರ 2ನೇ ಹಂತ, ಅಭಿಷೇಕ್ ಸರ್ಕಲ್ ಪಕ್ಕ, ಮೈಸೂರು
8am-3pm & 3pm-10pm
ಸಂಬಳ: 10,000 – ಸಂಬಳ: 10,000
9900993370

ಬೇಕಾಗಿದ್ದಾರೆ
ಮೈಸೂರು ಕೆ.ಆರ್.ಎಸ್ ಮುಖ್ಯ ರಸ್ತೆಯ ಪಂಪ್ ಹೌಸ್ ವೃತ್ತ ಬೆಳಗೊಳದಲ್ಲಿರುವ ಪೆಟ್ರೋಲ್ ಬಂಕ್‌ಗೆ ಅನುಭವವುಳ್ಳ (ಪುರುಷ ಅಥವ ಮಹಿಳೆ) ಮ್ಯಾನೇಜರ್ ಬೇಕಾಗಿದ್ದಾರೆ.
9844998530
9164937457

ಬಾಡಿಗೆಗೆ
ಮೈಸೂರಿನ ಕೆಆರ್‌ಎಸ್ ಮುಖ್ಯ ರಸ್ತೆಯ ಮೇಟಗಳ್ಳಿಯಲ್ಲಿ ಮೂರು ಗೋದಾಮುಗಳ ವಿಸ್ತೀರ್ಣ 32000 ಚದರ ಅಡಿ 10600 ಮತ್ತು 7500 ಚದರ ಅಡಿ ಒಟ್ಟಿಗೆ 50100 ಚದರ ಅಡಿ ಬಾಡಿಗೆಗೆ ಲಭ್ಯವಿರುತ್ತದೆ ಜೊತೆಗೆ ಸಾಕಷ್ಟು ಪಾರ್ಕಿಂಗ್ ಸ್ಥಳಾವಕಾಶವನ್ನು ಕೂಡ ಹೊಂದಿದೆ.
ಆಸಕ್ತರು ಸಂಪರ್ಕಿಸಿ
9740068815

SITE FOR SALE
30x40 JJ Enclave Bogadi Road
9740088990

ಬೇಕಾಗಿದ್ದಾರೆ
ಹೋಟೆಲ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಕಟ್ಟಿಂಗ್ / ಗ್ರೈಂಡಿಂಗ್, ದೋಸೆ ಕೌಂಟರ್, ವಾಷಿಂಗ್‌ಗೆ ಹುಡುಗರು ಬೇಕಾಗಿದ್ದಾರೆ.
Mob: 8550074110

ಸೈಟುಗಳು ಮಾರಾಟಕ್ಕಿದೆ
30x40 ಸೈಟು ಆದಿತ್ಯ ಸರ್ಕಲ್ ಹತ್ತಿರ. ದಟ್ಟಗಳ್ಳಿ. 40x60 ನಾರ್ತ್ ಆದಿತ್ಯ ಸರ್ಕಲ್ ಹತ್ತಿರ, ದಟ್ಟಗಳ್ಳಿ. 20x30 ಸೈಟ್ ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಹತ್ತಿರ. 35 ಲಕ್ಷ
9945042875

WANTED
Sales Girls and Boys for Footwear Shop
8951593118

WANTED
i10 Nios Car Automatic
9845129495
BROKER EXCUSE

ಬೇಕಾಗಿದ್ದಾರೆ
ಟಾಟಾ ಏಸ್ ಡ್ರೈವರ್ ಬೇಕಾಗಿದ್ದಾರೆ
ಡ್ರೈವಿಂಗ್ ಲೈಸನ್ಸ್ ಹೊಂದಿರಬೇಕು
ಸಂಬಳ: 15,000/–
ಅಶೋಕ ರೋಡ್, ಮೈಸೂರು
Call: 95382 22384
0821-4267800

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

(40x60) E/S Corner
Deepa Nagar (Near Bogadi Ring Road) Attach to Vijayanagar 4th Stage.
Mob: 95388-39926

40x60 SITE FOR SALE
Roopa Nagar
Call: 98802 73834

WANTED
Sales Executives for two wheeler service centre (Field work). Experienced / freshers. Salary 25K to 30K.
Mob: 9380010600

ಕಾರ್ ಡ್ರೈವರ್ ಬೇಕಾಗಿದ್ದಾರೆ
ಮೈಸೂರಿನ ವಿಜಯನಗರ 2ನೇ ಹಂತ, ಅನುಭವವಿರುವ ಕಾರ್ ಡ್ರೈವರ್ ಬೇಕಾಗಿದ್ದಾರೆ.
Mob: 96635 99999

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಮತ್ತು ಹೌಸ್‌ಕೀಪಿಂಗ್ ಮತ್ತು ಸೂಪರ್‌ವೈಸರ್.
7411646663, 9632606663

SITE FOR SALE
40x40 North face (1650 feet near SVIE School), Pancha-charya Layout.
Call: 98802 73834

REQUIRED
Office Staff - Male
Marketing Executives
Driver for a Ashok Dost vehicle. Loading and unloading labours.
Mob: 8762357131

AFFIDAVIT
I, Pallavi M, R/a No. 1710, I Cross, Chikkavokkalageri, Lashkar Mohalla, Mysuru city, States that, my Father Late Mahadeva. C Name was mentioned in Aadhar(635987914525) as Mahadeva. C S/o Late Mariyappa but in Pan card it was mentioned as Mahadeva. C S/o Chikkasiddaiah. hence above mentioned names belongs to my father Mahadeva C & The one Person. this Affidavit to present PNB met Life Insurance Company (Policy No. 24916695).
Sd/- Pallavi M

SITE FOR SALE (MUDA Approved)
Suvarna Layout (near udbur gate (H.D.Kote road)
1) 30'x40' - 279- North 27L
2) 25'x30' - 40-South - 18L
(Slightly Negotiable)
Rajiv Layout : (H.D. Kote Road) 1) 30'x40' - 1563- South- 30L
9448739000(Owner)

ನಮ್ಮಲ್ಲಿ ಹೋಟೆಲ್‌ಗಳಿಗೆ ಮತ್ತು ಕ್ಯಾಟರಿಂಗ್ ಅದವರಿಗೆ ಮತ್ತು ಫಾಸ್ಟ್‌ಫುಡ್(Fast Food) ಮಾಡುವವರಿಗೆ ಉತ್ತಮವಾದ ಕಮರ್ಷಿಯಲ್(Commercial) ರಾಕೆಟ್ ಹುಡ್‌ಸ್ಟೌವ್ (Rocket hood stove) ಸೌದೆ ಒಲೆಗಳನ್ನು ಮಾಡಿಕೊಡಲಾಗುತ್ತದೆ. ಶೇಕಡ 70% ರಷ್ಟು ಹಣ ಉಳಿತಾಯ.
9900961768
8867273429

WALK-IN INTERVIEW
ದಿನಾಂಕ : 08/05/2026
ಶ್ರೀ ಅರುಣೋದಯ ITI ಮೈಸೂರು ಸಂಸ್ಥೆಗೆ ಪ್ರಾಂಶುಪಾಲರು ಹಾಗೂ ಕಿರಿಯ ತರಬೇತಿ ಅಧಿಕಾರಿ(J.T.O) (ಎಲೆಕ್ಟ್ರಾನಿಕ್ಸ್ ಮೆಕ್ಯಾನಿಕ್) ಹುದ್ದೆಗೆ ಡಿಪ್ಲೋಮಾ/ಬಿ.ಇ ಎಲೆಕ್ಟ್ರಾನಿಕ್ಸ್ ಪದವಿ ಪಡೆದಿರುವ ಅಭ್ಯರ್ಥಿಗಳು ತಮ್ಮ ಮೂಲ ದಾಖಲಾತಿಗಳೊಂದಿಗೆ ಈ ಕೂಡಲೇ ಸಂಪರ್ಕಿಸಿ.

DOMINOS
ಕೆಲಸಕ್ಕೆ ಬೇಕಾಗಿದ್ದಾರೆ
Delivery Boy, Full Time & Part Time Positions Available, Contact Us :
Darshan - 9663976016, 9686229245
Charan : 7411115704

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮುಂದುವರೆದ ವರ್ಗೀಕೃತ ಜಾಹೀರಾತಿಗಾಗಿ 11ನೇ ಪುಟ ನೋಡಿ

ಮೈಸೂರು ಮಿತ್ರ

ಪ್ರಸ್ತುತ ನಮ್ಮ ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ

ಭಗೀರಥ ಪ್ರಯತ್ನ, ಧೈರ್ಯ, ಪರಿಶ್ರಮ ಅಗತ್ಯ

ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ಅಭಿಪ್ರಾಯ

ತಿ.ನರಸೀಪುರ, ಮೇ 6– ಭಗೀರಥ ಗಂಗೆಯನ್ನು ಭೂ ಲೋಕಕ್ಕೆ ತರಲು ಮಾಡಿದ ತಪಸ್ಸು ಕೇವಲ ಒಂದು ಪೌರಾಣಿಕ ಘಟನೆಯಲ್ಲ. ಅದು ಮಾನವನ ಶಕ್ತಿಯು ಎಷ್ಟು ದೊಡ್ಡ ಸಾಧನೆ ಮಾಡಬಲ್ಲದು ಎಂಬುದಕ್ಕೆ ಸ್ಪಷ್ಟ ಉದಾಹರಣೆ ಎಂದು ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ತಿಳಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ಉಪ್ಪಾರ ಸಂಘದ ಸಂಯುಕ್ತಾಶ್ರಯದಲ್ಲಿ ಬುಧವಾರ ನಡೆದ ಮಹರ್ಷಿ ಭಗೀರಥ ಜಯಂತಿಯಲ್ಲಿ ಭಗೀರಥರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಗಂಗೆಯನ್ನು ಭೂ ಲೋಕಕ್ಕೆ ತರಲು ಭಗೀರಥರು ಮಾಡಿದ ತಪಸ್ಸು ಮತ್ತು ಅವರ ಸಂಕಲ್ಪ ಬಲವು ನಮ್ಮ ಜೀವನಕ್ಕೆ ಆದರ್ಶವಾಗಬೇಕು. ಭಗೀರಥರು ತ್ಯಾಗ, ಪರಿಶ್ರಮದ ಪ್ರತೀಕ ಹಾಗೂ ಸಂಕಲ್ಪ ಬಲದ ಜೀವಂತ ಉದಾಹರಣೆ. ತಮ್ಮ ಪೂರ್ವಜರ ಮೋಕ್ಷಕ್ಕಾಗಿ ಗಂಗೆಯನ್ನು ಭೂ ಲೋಕಕ್ಕೆ ತರಲು ಅವರು ಮಾಡಿದ ತಪಸ್ಸು ಅಸಾಧಾರಣ. ದೇವತೆಗಳನ್ನು ಮನವೊಲಿಸುವಷ್ಟು ಅವರ ಧೈರ್ಯ ಮತ್ತು ದೃಢ ಸಂಕಲ್ಪ ನಮ್ಮೆಲ್ಲರಿಗೂ ಸ್ಫೂರ್ತಿದಾಯಕ. ಭಗೀರಥರ ಪ್ರಮುಖ ಸಂದೇಶವೇನೆಂದರೆ ಸಾಧನೆಗೆ ಶ್ರಮವೇ ಮಾರ್ಗ. ಯಾವ ಕೆಲಸವಾದರೂ ದೃಢ ನಿಶ್ಚಯದಿಂದ ಮಾಡಿದರೆ ಅದು ಖಂಡಿತ ಯಶಸ್ವಿಯಾಗುತ್ತದೆ. ಇಂದಿನ ಯುವ ಪೀಳಿಗೆ ಈ ಸಂದೇಶ ಅರ್ಥ ಮಾಡಿಕೊಳ್ಳಬೇಕು. ಪ್ರಸ್ತುತ ನಾವು ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಪರಿಹಾರ ಬೇಕಾದರೆ ಭಗೀರಥರಂತೆ ನಿರಂತರ ಪ್ರಯತ್ನ, ಧೈರ್ಯ ಮತ್ತು ಸಮಾಜದ ಬಗ್ಗೆ ಕಾಳಜಿ ಅಗತ್ಯ. ಅವರು ಮಾಡಿದ ತಪಸ್ಸು ಕೇವಲ ವೈಯಕ್ತಿಕ ಲಾಭಕ್ಕಾಗಿ ಅಲ್ಲ. ಸಮಸ್ತ ಮಾನವ ಕುಲದ ಒಳಿತಿಗಾಗಿ. ಹಾಗಾಗಿ ಸಮಾಜ ಸೇವೆ, ನಿಷ್ಠೆ ಮತ್ತು ಶ್ರಮವೇ ನಮ್ಮ ಬದುಕಿನ ಮೂಲಮಂತ್ರವಾಗಬೇಕು ಎಂದರು.

> “ಭಗೀರಥರದ್ದು ನಮ್ಮ ಭಾರತೀಯ ಸಂಸ್ಕೃತಿಯಲ್ಲಿಯೇ ಅಪ್ರತಿಮ ವ್ಯಕ್ತಿತ್ವ. ಅವರ ಜೀವನವೇ ಪರಿಶ್ರಮ, ತ್ಯಾಗ ಮತ್ತು ಅಚಲ ಸಂಕಲ್ಪದ ಸಂದೇಶವಾಗಿದೆ. ಪ್ರಸ್ತುತ ನಾವು ಎದುರಿಸುತ್ತಿರುವ ಸವಾಲುಗಳು ಬೇರೆಯಾದರೂ, ಅವುಗಳನ್ನು ಎದುರಿಸುವ ಮನೋಬಲ ಭಗೀರಥರಿಂದಲೇ ಕಲಿಯಬೇಕಾಗಿದೆ. ಸಮಾಜದಲ್ಲಿ ಶುದ್ಧತೆ, ಶಿಸ್ತು, ಮತ್ತು ಸಹಕಾರ ಇವುಗಳನ್ನು ಬೆಳೆಸುವಲ್ಲಿ ಪ್ರತಿಯೊಬ್ಬರ ಪಾತ್ರವೂ ಮಹತ್ವದ್ದಾಗಿದೆ. ಇಂದಿನ ಸಮಾಜದಲ್ಲಿ ನಾವು ಅನೇಕ ಸವಾಲುಗಳನ್ನು ಎದುರಿಸುತ್ತಿದ್ದೇವೆ. ಆದರೆ ಭಗೀರಥರಂತೆ ನಾವು ದೃಢ ಸಂಕಲ್ಪ ಹೊಂದಿದರೆ, ಯಾವುದೇ ಸಮಸ್ಯೆ ಬಗೆಹರಿಸಬಹುದು. – **ಗೋವಿಂದಶೆಟ್ಟಿ, ಉಪ್ಪಾರ ಸಮಾಜದ ಹಿರಿಯ ಮುಖಂಡ.**



ತಿ.ನರಸೀಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಗೀರಥರ ಭಾವಚಿತ್ರಕ್ಕೆ ಮುಖಂಡರು ಪುಷ್ಪಾರ್ಚನೆ ಮಾಡಿದರು.

ತಾಲೂಕು ಭಗೀರಥ ಉಪ್ಪಾರ ಸಂಘದ ಅಧ್ಯಕ್ಷ, ನಿವೃತ್ತ ಪ್ರಾಂಶುಪಾಲ ಸೋಮಣ್ಣ ಮಾತನಾಡಿ, ಭಗೀರಥ ಮಹರ್ಷಿಗಳು ಮಾಡಿದ ಸಾಧನೆ ತಮ್ಮ ವೈಯಕ್ತಿಕ ಲಾಭಕ್ಕಾಗಿ ಅಲ್ಲ. ಸಮಸ್ತ ಜನಾಂಗದ ಒಳಿತಿಗಾಗಿ ಆಗಿತ್ತು. ಇಂದಿನ ಯುವ ಪೀಳಿಗೆಗೆ ಭಗೀರಥರ ಆದರ್ಶಗಳು ಅವಶ್ಯಕ. ಪರಿಶ್ರಮ, ನಿಷ್ಠೆ, ಶ್ರದ್ಧೆ ಮತ್ತು ಸಮಾಜದ ಬಗ್ಗೆ ಕಾಳಜಿ ಬೆಳೆಸಿಕೊಂಡಾಗ ಮಾತ್ರ ನಮ್ಮ ಬದುಕು ಅರ್ಥಪೂರ್ಣವಾಗುತ್ತದೆ. ಇಂತಹ ಕಾರ್ಯಕ್ರಮಗಳು ನಮ್ಮ ಸಂಸ್ಕೃತಿ ಮತ್ತು ಮೌಲ್ಯ ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದರು.

ಈ ವೇಳೆ ಶ್ರೀಭಗೀರಥ ಉಪ್ಪಾರ ಜನಕಲ್ಯಾಣ ಟ್ರಸ್ಟ್ ಅಧ್ಯಕ್ಷ ಸಿದ್ದಪ್ಪಸ್ವಾಮಿ, ಗೌರವಾಧ್ಯಕ್ಷ ರಾಮಶೆಟ್ಟಿ, ಡೈರಿ ಅಧ್ಯಕ್ಷ ಕನ್ನಹಳ್ಳಿ ಮೋಳೆ ಚಿಕ್ಕಸ್ವಾಮಿ, ಪ್ರಚಾರ ಸಮಿತಿ ಅಧ್ಯಕ್ಷ ಕೇತಹಳ್ಳಿ ಸಿದ್ದಶೆಟ್ಟಿ, ದೊಡ್ಡೇಬಾಗಿಲು ಪಿಎಸಿಎಸ್ ಅಧ್ಯಕ್ಷ ಮರಿಸ್ವಾಮಿ, ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಪ್ರಕಾಶ್, ನಿರ್ದೇಶಕ ತೋಂಟೇಶ್, ಉಪನ್ಯಾಸಕ ಕುಮಾರಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷರಾದ ಮಹೇಶ್, ನಂದಿನಿ ರಾಜೇಂದ್ರ, ರಾಜಣ್ಣ, ಚಿನ್ನಸ್ವಾಮಿ, ಕೆ.ಮಹದೇವಶೆಟ್ಟಿ, ಗೀತಾ, ಮಹಾದೇವ, ರಾಚಪ್ಪಾಜಿ, ಮರಿಸ್ವಾಮಿ ಕೃಷ್ಣಾಪುರ ಮಹೇಶ, ಕೆಂಪಯ್ಯನಹುಂಡಿ ಶ್ರೀನಿವಾಸ, ಬಿಇಓ ಶಿವಸ್ವಾಮಿ, ಸೆಸ್ಕಾಂ ಎಇಇ ವೀರೇಶ್, ರಾಜಣ್ಣ, ಅಕ್ಬರ್, ನಿತಿನ್ ಮತ್ತಿತರರಿದ್ದರು.

ಶ್ರೀಕ್ಷೇತ್ರ ಧರ್ಮಸ್ಥಳ ಸಂಸ್ಥೆಯಿಂದ ಮಹಿಳಾ ಸಬಲೀಕರಣ

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡ

ಕೆ.ಆರ್.ನಗರ, ಮೇ 6– ಈ ಹಿಂದೆ ಕಾಂಗ್ರೆಸ್ ಸರ್ಕಾರ ಸ್ತ್ರೀ ಶಕ್ತಿ ಮಹಿಳಾ ಸ್ವಸಹಾಯ ಸಂಘಗಳನ್ನು ಆರಂಭಿಸಿ ಮಹಿಳೆಯರು ಆರ್ಥಿಕವಾಗಿ ಸಬಲರಾಗಲು ಅನುಕೂಲ ಮಾಡಿಕೊಟ್ಟಿತ್ತು. ಅದೇ ಮಾದರಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿ ವೃದ್ಧಿ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡ ತಿಳಿಸಿದರು.

ಪಟ್ಟಣದ ಸಿಎಂ ರಸ್ತೆಯಿಂದ ಶ್ರೀರಾಮ ಬಡಾವಣೆಗೆ ಸ್ಥಳಾಂತರಗೊಂಡ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ನೂತನ ಆಡಳಿತ ಕಚೇರಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಹಿಳಾ ಸಂಘಗಳು ಅಸ್ತಿತ್ವಕ್ಕೆ ಬಂದ ನಂತರ ಮಹಿಳೆಯರು ಬ್ಯಾಂಕ್‌ಗಳಲ್ಲಿ ಖಾತೆಗಳನ್ನು ತೆರೆಯಲು ಆರಂಭಿಸಿದ್ದಾರೆ. ಮಾಜಿ ಸಿಎಂ ದಿ.ಎಸ್.ಎಂ.ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರ ಸ್ವ–ಸಹಾಯ ಸಂಘಗಳನ್ನು ರಚನೆ ಮಾಡುವ ಮೊದಲು ಮಹಿಳೆಯರು ಬ್ಯಾಂಕ್ ಖಾತೆ ಹೊಂದಿರಲಿಲ್ಲ. ಇದೀಗ ಮಹಿಳೆಯರು ಬ್ಯಾಂಕ್‌ಗಳಲ್ಲಿ ಆರ್ಥಿಕ ವ್ಯವಹಾರ ನಡೆಸುತ್ತಿದ್ದಾರೆ ಎಂದರು.

ಗ್ರಾಮಾಭಿವೃದ್ಧಿ ಯೋಜನೆಯು ಮಹಿಳೆಯರಿಗೆ ಸಾಲ ಸೌಲಭ್ಯ ನೀಡಿ ಅವರು ಆರ್ಥಿಕವಾಗಿ ಸಬಲರಾಗಲು ಅನುವು ಮಾಡಿಕೊಟ್ಟಿದೆ. ಅಲ್ಲದೇ ಗ್ರಾಮೀಣ ಭಾಗದ ಕೆರೆ ಕಟ್ಟೆಗಳನ್ನು ಪುನಶ್ಚೇತನಗೊಳಿಸಿ ಹಳ್ಳಿಗಾಡಿನ ಜನ ಜಾನುವಾರುಗಳಿಗೆ ನೀರು ಒದಗಿಸುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ ಎಂದರು.

ರೈತರ ಕೃಷಿ ಚಟುವಟಿಕೆಗೆ ಬೇಕಾಗುವ ಟ್ರಾಕ್ಟರ್ ಸೇರಿದಂತೆ ಇನ್ನಿತರ ಯಂತ್ರೋಪಕರಣಗಳನ್ನು ನೀಡುವುದು. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಸೇರಿದಂತೆ ನೊಂದವರಿಗೆ ಮಸಾಶನ ನೀಡುವ ಮೂಲಕ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರು ರಾಜ್ಯದ ಜನತೆ ಮೆಚ್ಚುವಂತಹ ಕೆಲಸ ಮಾಡುತ್ತಿದ್ದಾರೆ ಎಂದು ಬಣ್ಣಿಸಿದರು.

ಈ ವೇಳೆ ಲಾಳನಹಳ್ಳಿ ಗುರುಮಲ್ಲೇಶ್ವರ ದಾಸೋಹ ಮಠದ ಶರಣೆ ಜಯದೇವಿತಾಯಿ, ಮೈಸೂರು ವಿಭಾಗದ ಯೋಜನಾ ನಿರ್ದೇಶಕ ಯೋಗೇಶ್, ಎಂಐಎಸ್ ಯೋಜನಾಧಿಕಾರಿ ಸತೀಶ್, ತಾಲೂಕು ಯೋಜನಾಧಿಕಾರಿ ಸದಾನಂದ ದೇವಾಡಿಗ ಮಾತನಾಡಿದರು.

ಪೂಜಾ ಕಾರ್ಯದಲ್ಲಿ ಶಾಸಕ ಡಿ.ರವಿಶಂಕರ್ ಭಾಗವಹಿಸಿದ್ದರು. ಈ ವೇಳೆ ಮದ್ಯವರ್ಜನ ಶಿಬಿರದ ಕಾರ್ಯಕರ್ತರಾದ ಸಂಪತ್ ಕುಮಾರ್, ಮಹದೇವ್, ಯೋಜನಾ ಕಚೇರಿ ಸಿಬ್ಬಂದಿಗಳಾದ ಮಹದೇವಸ್ವಾಮಿ, ರಜತ್, ಜಗದಾಂಭ, ಪ್ರಿಯಾಂಕ, ರಾಜೇಶ್ ಮತ್ತಿತರರಿದ್ದರು.



ಸ್ಥಳಾಂತರಗೊಂಡ ಕಚೇರಿಯನ್ನು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡ ಉದ್ಘಾಟಿಸಿದರು

ಸಂಘಟಿತ ಹೋರಾಟ, ಶಿಕ್ಷಣದಿಂದ ಸಾಮಾಜಿಕ ಬದಲಾವಣೆ

ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ

ಹೆಚ್.ಡಿ.ಕೋಟೆ, ಮೇ 6– ಸಂಘಟಿತ ಹೋರಾಟ ಹಾಗೂ ಶಿಕ್ಷಣದಿಂದ ಮಾತ್ರ ಸಾಮಾಜಿಕ ಬದಲಾವಣೆ ಸಾಧ್ಯ ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ವಡ್ಡರಪಾಳ್ಯದಲ್ಲಿ ನಡೆದ ಧಾರ್ಮಿಕ ಸಭೆಯ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಯಾವ ಸಮಾಜ ಸಂಘಟಿತವಾಗಿರುತ್ತದೆಯೋ ಅಂತಹ ಸಮಾಜದ ಧ್ವನಿಗೆ ಮಾತ್ರ ಸರ್ಕಾರ ಕಿವಿಗೊಡುತ್ತದೆ. ಸಂಘಟನೆ ಇಲ್ಲದಿದ್ದರೆ ಹಕ್ಕುಗಳನ್ನು ಪಡೆಯುವುದು ಅಸಾಧ್ಯ ಎಂದರು.

ಸಮಾಜದಲ್ಲಿ ಸಾಮಾಜಿಕ ನ್ಯಾಯ ಪಡೆಯಲು ಸಂಘಟನೆಗಿಂತ ಮಿಗಿಲಾದ ಅಸ್ತ್ರ ಮತ್ತೊಂದಿಲ್ಲ. ಚದುರಿ ಹೋಗಿರುವ ಧ್ವನಿಗಳು ಆಡಳಿತ ವ್ಯವಸ್ಥೆ ತಲುಪುವುದಿಲ್ಲ. ಸಂಘಟಿತ ಸಮಾಜಕ್ಕೆ ಮಾತ್ರ ಸರ್ಕಾರವು ಬದ್ಧತೆಯಿಂದ ಸ್ಪಂದಿಸುತ್ತದೆ. ಹೀಗಾಗಿ ಪ್ರತಿಯೊಬ್ಬರೂ ಒಕ್ಕೂಟ ವ್ಯವಸ್ಥೆಯಡಿ ಬಲಗೊಳ್ಳಬೇಕು ಎಂದರು.

ಕೇವಲ ಪದವೀಧರರಾದರೆ ಸಾಲದು ಪ್ರಜ್ಞಾವಂತರಾಗಬೇಕು. ಇಂದಿನ ಕಾಲ ಘಟ್ಟದಲ್ಲಿ ಕೇವಲ ಅಕ್ಷರಸ್ಥರಾದರೆ ಸಾಲದು ನಮ್ಮಲ್ಲಿರುವ ಜ್ಞಾನವಂತರು ಪ್ರಜ್ಞಾವಂತರಾಗಿ ಬದಲಾಗಬೇಕು. ಸಮಾಜದ ಆಗುಹೋಗುಗಳ ಬಗ್ಗೆ ಅರಿವು ಮೂಡಿಸಿಕೊಂಡು ಸಾಂವಿಧಾನಿಕ ಹಕ್ಕುಗಳ ಬಗ್ಗೆ ಜಾಗೃತಿ ಹೊಂದಿದಾಗ ಮಾತ್ರ ಶೋಷಣೆ ಮುಕ್ತ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದರು.



ಕಾರ್ಯಕ್ರಮವನ್ನು ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಉದ್ಘಾಟಿಸಿದರು.

ಕೂಲಿ ಕಾರ್ಮಿಕರ ಮಕ್ಕಳಿಗೆ ಶಿಕ್ಷಣವೇ ಆಸರೆ. ಆರ್ಥಿಕವಾಗಿ ಹಿಂದುಳಿದಿರುವ ಮತ್ತು ಕೂಲಿ ಕಾರ್ಮಿಕರ ಅಭಿವೃದ್ಧಿಗೆ ಶಿಕ್ಷಣವೇ ಏಕೈಕ ದಾರಿ. ಕಾರ್ಮಿಕರ ಮಕ್ಕಳು ಕೇವಲ ಮೂಲಭೂತ ಶಿಕ್ಷಣಕ್ಕೆ ಸೀಮಿತವಾಗಬಾರದು. ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುವ ಮೂಲಕ ತಲೆಮಾರುಗಳ ಬಡತನ ಹೋಗಲಾಡಿಸಬೇಕು. ಶಿಕ್ಷಣವು ಬದುಕನ್ನು ಕಟ್ಟಿ ಕೊಡುವುದರ ಜೊತೆಗೆ ಗೌರವಯುತ ಜೀವನಕ್ಕೆ ನಾಂದಿಯಾಡುತ್ತದೆ ಎಂದರು.

ಈ ವೇಳೆ ಭೋವಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ ಮಾತನಾಡಿದರು. ಭೋವಿ ನಿಗಮದ ಮಾಜಿ ಅಧ್ಯಕ್ಷ ಜಿ.ವಿ.ಸೀತಾರಾಮ, ಮೈಸೂರು ಭೋವಿ ಸಮಾಜದ ಜಿಲ್ಲಾಧ್ಯಕ್ಷ ವಿಜಯಕುಮಾರ, ನಿಕಟಪೂರ್ವ ಅಧ್ಯಕ್ಷ ನಾಗರಾಜು, ಐಡಿಯಾ ನಾಗರಾಜು, ಶ್ರೀನಿವಾಸ, ವೆಂಕಟೇಶ, ರಾಮಕೃಷ್ಣ, ಮಲ್ಲಯ್ಯ, ದೇವಯ್ಯ, ದೇವರಾಜ, ಬ್ಯಾಂಕ್ ಶೇಖರ, ಕೃಷ್ಣ, ಗೋಪಾಲ, ಮಹಾದೇವ, ಹಿರಿಯೂರು ದಾಸಣ್ಣ ಇತರರಿದ್ದರು.

ಶೋಷಿತ ಸಮುದಾಯಗಳ ಸಂಘಟಿಸಲು ರಾಜ್ಯಾದ್ಯಂತ ಪ್ರವಾಸ

ಒಕ್ಕೂಟಗಳ ಗೌರವಾಧ್ಯಕ್ಷ ಎನ್.ಆರ್.ನಾಗೇಶ್

ನಂಜನಗೂಡು, ಮೇ 6– ಶೋಷಿತ ಸಮುದಾಯಗಳನ್ನು ಒಂದೇ ವೇದಿಕೆಯಡಿ ರಾಜಕೀಯವಾಗಿ ಸಂಘಟಿಸಿ ಬಲಪಡಿಸುವ ನಿಟ್ಟಿನಲ್ಲಿ ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ಅಹಿಂದ ಒಕ್ಕೂಟಗಳ ಗೌರವಾಧ್ಯಕ್ಷ ಎನ್.ಆರ್.ನಾಗೇಶ್ ತಿಳಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಅಹಿಂದ ವರ್ಗಗಳ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಅಹಿಂದ ವರ್ಗಗಳ ಮತದಾರರು ಶೇ.71 ರಿಂದ 75ರಷ್ಟು ಇದ್ದರೂ ಸಹ ಸಾಂಪ್ರದಾಯಿಕವಾಗಿ ಪ್ರಬಲವಾಗಿರುವ ಜಾತಿ ವ್ಯವಸ್ಥೆಯಿಂದಾಗಿ ತುಳಿತಕ್ಕೆ ಒಳಗಾಗಿರುವ ಸಣ್ಣ ಸಣ್ಣ ಸಮುದಾಯದ ಶೋಷಿತ ವರ್ಗಗಳ ಸಮುದಾಯಗಳಿಗೆ ಸರ್ಕಾರಿ ಸವಲತ್ತುಗಳು ಸಿಗದೆ ಆರ್ಥಿಕ, ಸಾಮಾಜಿಕವಾಗಿ ಹಿಂದುಳಿದಿವೆ. ಜೊತೆಗೆ ರಾಜಕೀಯ ಸ್ಥಾನಮಾನಗಳಿಂದಲೂ ವಂಚಿತರಾಗುತ್ತಿದ್ದೇವೆ. ಆದ್ದರಿಂದ ತುಳಿತಕ್ಕೆ ಒಳಗಾಗಿರುವ ಶೋಷಿತ ಸಮುದಾಯಗಳನ್ನು ಸಂಘಟಿಸಿ ಅವರಿಗೆ ಶಕ್ತಿ ತುಂಬಿ ಸರ್ಕಾರಿ ಸವಲತ್ತುಗಳನ್ನು ಒದಗಿಸುವ ನಿಟ್ಟಿನಲ್ಲಿ ರಾಜ್ಯ ಅಹಿಂದ ವರ್ಗಗಳ ಒಕ್ಕೂಟದಿಂದ ರಾಜ್ಯಾದ್ಯಂತ ಪ್ರವಾಸ ಕೈಗೊಂಡು ತಾಲೂಕು ಸಮಿತಿ ರಚಿಸಿ ಅಹಿಂದ ವರ್ಗಗಳನ್ನು ಬಲಪಡಿಸಲಾಗುತ್ತಿದೆ ಎಂದರು.

ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯರ್ ಮಾತನಾಡಿ, ಶೋಷಿತ ಸಮುದಾಯಗಳಿಗೆ ಸರ್ಕಾರಿ ಸವಲತ್ತುಗಳನ್ನು ಒದಗಿಸುವ ನಿಟ್ಟಿನಲ್ಲಿ ಈಗಾಗಲೇ ಸಂಘಟನೆಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಲಾಗಿದ್ದು, ಅಹಿಂದ ವರ್ಗಗಳ ಸಭೆ ನಡೆಸುವಂತೆ ಒತ್ತಡ ಹೇರಲಾಗಿದೆ ಎಂದರು.

ಈ ವೇಳೆ ತಾಲೂಕು ಅಹಿಂದ ಒಕ್ಕೂಟ ಘಟಕ ರಚನೆ ಮಾಡಲಾಯಿತು. ಸಮಾರಂಭದಲ್ಲಿ ಅಹಿಂದ ವರ್ಗಗಳ ಒಕ್ಕೂಟದ ರಾಜ್ಯ ಮಹಿಳಾ ಅಧ್ಯಕ್ಷೆ ಗೀತಾ, ಶಾಂತರಾಜೇ ಅರಸ್, ಮುತ್ತುರಾಜ್, ಸುರೇಶ್ ಕುಮಾರ್, ತಾಲೂಕು ಅಧ್ಯಕ್ಷ ಶಿವಕುಮಾರ್, ಸೂರಹಳ್ಳಿ ಲಕ್ಷ್ಮಣ, ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.



ಸಭೆಯಲ್ಲಿ ಎನ್.ಆರ್.ನಾಗೇಶ್ ಮಾತನಾಡಿದರು.

ಶ್ರೀಗಳಿಂದ ಆರ್ಶೀವಾದ ಪಡೆದ ಸಾರಾ ಪುತ್ರ



ಬೆಂಗಳೂರಿನ ಆದಿಚುಂಚನಗಿರಿ ಮಹಾಸಂಸ್ಥಾನ ಮಠಕ್ಕೆ ಮಾಜಿ ಸಚಿವ ಸಾ.ರಾ.ಮಹೇಶ್ ಅವರ ಹಿರಿಯ ಪುತ್ರ, ಖ್ಯಾತ ಮೂಳೆ ತಜ್ಞ ಡಾ.ಧನುಷ್ ಭೇಟಿ ನೀಡಿ ಮಠದ ಪೀಠಾಧ್ಯಕ್ಷ ಡಾ.ಪ್ರಕಾಶನಾಥ ಸ್ವಾಮೀಜಿ (ಶೇಖರ್ ಸ್ವಾಮೀಜಿ) ಅವರನ್ನು ಅಭಿನಂದಿಸಿ, ಶ್ರೀಗಳಿಂದ ಆರ್ಶೀವಾದ ಪಡೆದರು.

ಬಿ.ಎಸ್.ಯಡಿಯೂರಪ್ಪ ಅಭಿಮಾನೋತ್ಸವ ಅಂಗವಾಗಿ

ಮೈಸೂರಿನಿಂದ ಚಿತ್ರದುರ್ಗವರೆಗಿನ ಬೈಕ್ ರ‍್ಯಾಲಿಗೆ ಚಾಲನೆ

ತಿ.ನರಸೀಪುರ, ಮೇ 6– ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಅಭಿಮಾನೋತ್ಸವದ ಅಂಗವಾಗಿ ಮೈಸೂರಿನಿಂದ ಚಿತ್ರದುರ್ಗವರೆಗಿನ ಬೈಕ್ ರ‍್ಯಾಲಿಗೆ ತಾಂಡವಪುರದಲ್ಲಿ ಚಾಲನೆ ನೀಡಲಾಯಿತು.

ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತಾಂಡವಪುರ ಬಿಜೆಪಿ ಶಕ್ತಿ ಕೇಂದ್ರದಿಂದ ಏರ್ಪಡಿಸಿದ್ದ ಬೈಕ್ ರ‍್ಯಾಲಿಗೆ ಚಾಲನೆ ನೀಡಿ ಮಾತನಾಡಿದ ವರುಣ ಕ್ಷೇತ್ರದ ಬಿಜೆಪಿ ಅಧ್ಯಕ್ಷ ನಗರ್ಲೆ ಎನ್.ಎಂ.ಮಹದೇವ ಸ್ವಾಮಿ, ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಕೈಗೊಂಡಿದ್ದ ಜನಪರ, ರೈತಪರ ಆಡಳಿತ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಜನರಿಗೆ ತಲುಪಿಸುವ ಸಲುವಾಗಿ ಈ ಅಭಿಮಾನೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪನವರು ರೈತರ ಕಣ್ಣೀರು ಒರೆಸುವುದೇ ತಮ್ಮ ಮೊದಲ ಆದ್ಯತೆಯಾಗಬೇಕೆಂದು ಸತತವಾಗಿ ರೈತಪರ ಯೋಜನೆಗಳನ್ನು ಜಾರಿಗೊಳಿಸಿ ತಾವೊಬ್ಬ ರೈತಪರ ನಾಯಕ ಎಂಬುದನ್ನು ಸಾಬೀತುಪಡಿಸಿದ್ದಾರೆ ಎಂದರು.

2007ರ ಬಜೆಟ್‌ನಲ್ಲಿ ರೈತರ ಸಾಲ ಮನ್ನಾ ಮಾಡಿದರಲ್ಲದೆ, ಸಹಕಾರಿ ಬ್ಯಾಂಕುಗಳ ಬಡ್ಡಿ ದರವನ್ನು ಶೇ.14ಕ್ಕೆ ಇಳಿಸುವ ಐತಿಹಾಸಿಕ ತೀರ್ಮಾನ ಕೈಗೊಂಡ ಯಡಿಯೂರಪ್ಪನವರು ನುಡಿದಂತೆ ನಡೆದು ರೈತರು ಮತ್ತು ಜನಸಾಮಾನ್ಯರ ಮೆಚ್ಚುಗೆಗೆ ಪಾತ್ರರಾದರು. 2008ರಲ್ಲಿ ಶೂನ್ಯ ಬಡ್ಡಿ ದರದಲ್ಲಿ ರೈತರಿಗೆ ಸಾಲ ನೀಡಿದರು. ಶ್ರಮಜೀವಿ ನೇಕಾರರ ಸಾಲ ಮನ್ನಾ ಮಾಡುವ ಮೂಲಕ ನೇಕಾರರಿಗೆ ಉತ್ತೇಜನ ನೀಡಿದರು ಎಂದರು.

2018ರಲ್ಲಿ ರೈತರ ಲಕ್ಷ ರೂ. ಸಾಲ ಮನ್ನಾ ಮಾಡಿದರು. 2020ರಲ್ಲಿ ಸಹಕಾರಿ ಸಂಘಗಳಲ್ಲಿ ರೈತರು ಮಾಡಿದ್ದ ಸಾಲದ ಮೇಲಿನ ಸುಸ್ತಿ ಬಡ್ಡಿ ಮನ್ನಾ ಮಾಡಿ ರೈತರನ್ನು ಚಕ್ರಬಡ್ಡಿ ಸುಳಿಯಿಂದ ಪಾರು ಮಾಡಿದ್ದು ಸೇರಿದಂತೆ ಇನ್ನು ಹತ್ತು ಹಲವು ಯೋಜನೆಗಳನ್ನು ಜಾರಿಗೆ ತಂದರು. ಅಲ್ಲದೇ 2021ರಲ್ಲಿ ಕೋವಿಡ್–19 ಅನ್ನು ಯಶಸ್ವಿಯಾಗಿ ನಿಭಾಯಿಸಿದರಲ್ಲದೆ, ಕೋವಿಡ್‌ನಿಂದ ಸಾವನ್ನಪ್ಪಿದ ರೈತರ ಸಾಲ ಮನ್ನಾ ಮಾಡಿದರು. ಈ ಎಲ್ಲಾ ವಿಚಾರಗಳನ್ನು ಜನರಿಗೆ ತಿಳಿಸುವ ನಿಟ್ಟಿನಲ್ಲಿ ಈ ಬೈಕ್ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ ಎಂದರು.

ಈ ವೇಳೆ ಜಿಪಂ ಮಾಜಿ ಸದಸ್ಯರಾದ ಗುರುಸ್ವಾಮಿ, ಬಿ.ಎನ್.ಸದಾನಂದ, ಶಕ್ತಿ ಕೇಂದ್ರದ ಅಧ್ಯಕ್ಷ ಮಹದೇವಪ್ಪ, ತಾಂಡವಪುರ ಶಕ್ತಿ ಕೇಂದ್ರದ ಬೂತ್ ಅಧ್ಯಕ್ಷರು, ಸದಸ್ಯರು ಮತ್ತು ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.



ಬೈಕ್ ರ‍್ಯಾಲಿಗೆ ನಗರ್ಲೆ ಎನ್.ಎಂ.ಮಹದೇವಸ್ವಾಮಿ ಚಾಲನೆ ನೀಡಿದರು.

ಕೆ.ಆರ್.ನಗರ: ಶವದ ಗುರುತು ಪತ್ತೆ

ಕೆ.ಆರ್.ನಗರ, ಮೇ 6– ಪಟ್ಟಣದ ಪೊಲೀಸ್ ಠಾಣಾ ವ್ಯಾಪ್ತಿಯ ಚೀರನಹಳ್ಳಿ ಬಳಿಯ ಚಾಮರಾಜ ಬಲದಂಡೆ ನಾಲೆ ಏರಿ ಪಕ್ಕದ ಪೊದೆಯಲ್ಲಿ ಇತ್ತೀಚೆಗೆ ದೊರೆತಿದ್ದ ಅಪರಿಚಿತ ಶವದ ಗುರುತು ಪತ್ತೆ ಹಚ್ಚುವಲ್ಲಿ ಕೆ.ಆರ್.ನಗರ ಪಟ್ಟಣದ ಪೊಲೀಸರು ಯಶಸ್ವಿಯಾಗಿದ್ದಾರೆ.

ಶಿವಮೊಗ್ಗ ಜಿಲ್ಲೆ ಶಿಕಾರಿಪುರದ ನಿವಾಸಿ ಲೇ.ಮುನಿಯ ಮತ್ತು ಮೀನಾ ದಂಪತಿ ಪುತ್ರ ಕಾರ್ತಿಕ್(23) ಎಂದು ಗುರ್ತಿಸಲಾಗಿದೆ. ಈತ ಅಲೆಮಾರಿ ಜನಾಂಗಕ್ಕೆ ಸೇರಿದವರಾಗಿದ್ದು, ಹಾಸನ ಜಿಲ್ಲೆ ಅರಕಲಗೂಡು ತಾಲೂಕಿನ ಕೊಣನೂರು ಗ್ರಾಮದ ಹುಡುಗಿಯೊಂದಿಗೆ ಮದುವೆಯಾಗಿದ್ದ ಎನ್ನಲಾಗಿದೆ. ಈತನ ಕೈ ಮೇಲಿನ ಹಚ್ಚೆ ಮತ್ತು ಚಹರೆ ನೋಡಿ ಶವದ ಗುರುತು ಪತ್ತೆ ಹಚ್ಚಿದ ತಾಯಿ ಮೀನಾ ಇವನೇ ನನ್ನ ಮಗ ಕಾರ್ತಿಕ್ ಎಂದು ಪಟ್ಟಣದ ಪೊಲೀಸ್ ಠಾಣೆಗೆ ಆಗಮಿಸಿ ಗುರುತು ಪತ್ತೆ ಹಚ್ಚಿದ್ದಾರೆ. ಇದೀಗ ಆತನ ಕೊಲೆಯಾರು ಮಾಡಿದ್ದಾರೆ ಎಂಬುದು ಪೊಲೀಸರ ತನಿಖೆಯಿಂದ ತಿಳಿದು ಬರಬೇಕಿದೆ.

ವಿಜೃಂಭಣೆಯ ಶ್ರೀಚೌಡೇಶ್ವರಿ ಅಮ್ಮನವರ ವರ್ಧಂತಿ, ಪೂಜಾ ಮಹೋತ್ಸವ

ಸರಗೂರು, ಮೇ 6– ಪಟ್ಟಣದಲ್ಲಿ ಶ್ರೀಚೌಡೇಶ್ವರಿ ಅಮ್ಮನವರ ವರ್ಧಂತಿ ಹಾಗೂ 86ನೇ ಜ್ಯೋತಿ ಪೂಜಾ ಮಹೋತ್ಸವ ದೊಡ್ಡಬಳ್ಳಾಪುರ ಪುಷ್ಪಾಂಡ ಮಹರ್ಷಿ ಆಶ್ರಮದ ತಪಸಿಹಳ್ಳಿ ಶ್ರೀದಿವ್ಯಜ್ಞಾನಂದಗಿರಿ ಸ್ವಾಮೀಜಿ ನೇತೃತ್ವದಲ್ಲಿ ಬುಧವಾರ ವಿಜೃಂಭಣೆಯಿಂದ ನಡೆಯಿತು.

ಮಹೋತ್ಸವ ಅಂಗವಾಗಿ ಪಟ್ಟಣವನ್ನು ತಳಿರು ತೋರಣ, ಬಣ್ಣ ಬಣ್ಣದ ವಿದ್ಯುತ್ ದೀಪದಿಂದ ಸಿಂಗರಿಸಲಾಗಿತ್ತು. ದೇವಾಲಯದಲ್ಲಿ ಮುಂಜಾನೆಯಿಂದಲೇ ಗಣಪತಿ ಹೋಮ ಪುಣ್ಯಾಹ, ಕಳಸ ಪ್ರತಿಷ್ಠಾಪನೆ, ದುರ್ಗಾ ಹೋಮ, ಕುಂಕುಮಾರ್ಚನೆ ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳು ನೆರವೇರಿತು.

ಬಳಿಕ ಶ್ರೀಚೌಡೇಶ್ವರಿ ಅಮ್ಮನವರ ಉತ್ಸವ ಮೂರ್ತಿಯನ್ನು ಹೂವಿನ ಪಲ್ಲಕ್ಕಿಯಲ್ಲಿ ಜ್ಯೋತಿ ಸಮೇತವಾಗಿ ಮಂಗಳ ವಾದ್ಯದೊಂದಿಗೆ ಕಪಿಲಾ ನದಿಗೆ ತಂದು ಗಂಗೆ ಪೂಜೆ ನಡೆಸಲಾಯಿತು. ಬಳಿಕ ಹರಕೆ ಹೊತ್ತ ಭಕ್ತರು ಬಾಯಿ ಬೀಗ, ಅಲಗು ಸೇವೆ, ಸ್ತೋತ್ರ ಪಠಣ, ಖಡ್ಗಸ್ತೋತ್ರ ಪಠಣ, ಭಜನೆ ಮೂಲಕ ಪೂರ್ಣ ಕುಂಭ ಕಳಸದೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮಂಗಳವಾದ್ಯ, ಸತ್ತಿಗೆ, ವೀರಗಾಸೆ ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳೊಂದಿಗೆ ಅಮ್ಮನವರನ್ನು ಮೆರವಣಿಗೆ ಮಾಡಲಾಯಿತು. ಮೆರವಣಿಗೆ ದೇವಾಲಯ ತಲುಪಿದ ಬಳಿಕ ಪಟ್ಟಣದ ನೇಕಾರ ತೊಗಟವೀರ ಕ್ಷತ್ರಿಯ ಸಮಾಜದ ವತಿಯಿಂದ ಅಮ್ಮನವರಿಗೆ ಮಹಾಮಂಗಳಾರತಿ ಮಾಡಿ ಪ್ರಸಾದ ವಿನಿಯೋಗ ಮಾಡಲಾಯಿತು. ನಂತರ ಭಕ್ತರಿಗೆ ಅನ್ನಸಂತರ್ಪಣೆ ಮಾಡಲಾಯಿತು. ರಾತ್ರಿ 8.30ರ ವೇಳೆ ದೇವಿಗೆ ಮಹಾಮಂಗಳಾರತಿ ಮಾಡಿ ತೀರ್ಥ ಪ್ರಸಾದ ವಿತರಿಸಲಾಯಿತು.

ಮೇ 7ರಂದು ಮಧ್ಯಾಹ್ನ 1.30ಕ್ಕೆ ದೇವಾಲಯದಲ್ಲಿ ಶ್ರೀಚೌಡೇಶ್ವರಿ ಅಮ್ಮನವರಿಗೆ ಮಹಾಮಂಗಳಾರತಿ ಮಾಡಿ ತೀರ್ಥ ಪ್ರಸಾದ ವಿನಿಯೋಗ ಮಾಡಲಾಗುವುದು. ಅಲ್ಲದೇ ಅಮ್ಮನವರ ಉತ್ಸವ ಮೂರ್ತಿ ಮೆರವಣಿಗೆ ಮಾಡಲಾಗುವುದು. ರಾತ್ರಿ 9 ಗಂಟೆಗೆ ದೇವಸ್ಥಾನದ ಎದುರಿನ ರಂಗ ಮಂಟಪದಲ್ಲಿ ಮಾಂಗಲ್ಯ ಭಾಗ್ಯ ಅಥವಾ ದೊಡ್ಡಮನೆ ಮಕ್ಕಳು ಎಂಬ ಸುಂದರ ಸಾಮಾಜಿಕ ನಾಟಕ ಏರ್ಪಡಿಸಲಾಗಿದೆ.

ಮೇ 8 ರಂದು ಮಧ್ಯಾಹ್ನ 1.30ಕ್ಕೆ ತಾಯಿಗೆ ಮಹಾಮಂಗಳಾರತಿ ಮಾಡಲಾಗುವುದು. ಸಂಜೆ 6.30ಕ್ಕೆ ಶ್ರೀಚೌಡೇಶ್ವರಿ ಅಮ್ಮನವರ ಉತ್ಸವ ಮೂರ್ತಿಯನ್ನು ಪ್ರಸಿದ್ಧ ಆದಿಶಕ್ತಿ ಲೈಟಿಂಗ್ಸ್ ಗಣೇಶ್ ವಾಸು ಅವರ ವೈವಿಧ್ಯಮಯ ವಿದ್ಯುತ್ ದೀಪಗಳಿಂದ ಅಲಂಕೃತಗೊಂಡ ಹೂವಿನ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ಪಟ್ಟಣದ ರಾಜ ಬೀದಿಗಳಲ್ಲಿ ಮೆರವಣಿಗೆ ಮಾಡಿ ದೇವಾಲಯದಲ್ಲಿ ಮಹಾಮಂಗಳಾರತಿ ಮಾಡಿ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಗುವುದು. ರಾತ್ರಿ 9 ಗಂಟೆಗೆ ಖಾಸಗಿ ವಾಹಿನಿಯ ಸರಿಗಮಪ ಖ್ಯಾತಿಯ ಸುಚೇತನ್ ರಂಗಸ್ವಾಮಿ ತಂಡದಿಂದ ಸಂಗೀತ ರಸಮಂಜರಿ ಕಾರ್ಯಕ್ರಮ ನಡೆಯಲಿದೆ. ಮೇ 9ರಂದು ಮಧ್ಯಾಹ್ನ 1.30ಕ್ಕೆ ಎಂದಿನಂತೆ ತಾಯಿಗೆ ಮಹಾಮಂಗಳಾರತಿ ಮಾಡಲಾಗುವುದು. ರಾತ್ರಿ 9 ಗಂಟೆಗೆ ತೋಗಟವೀರ ಸಮಾಜದ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿದೆ. ಮೇ 10ರಂದು ಮಧ್ಯಾಹ್ನ 3 ಗಂಟೆಗೆ ವಸಂತೋತ್ಸವ, ಬಣ್ಣದೋಕುಳಿ ನಂತರ ಶ್ರೀಚೌಡೇಶ್ವರಿ ಅಮ್ಮನವರ ಪಲ್ಲಕ್ಕಿ ಉತ್ಸವ ನಡೆಯಲಿದೆ. ಬಳಿಕ ಕಪಿಲಾ ನದಿಯಲ್ಲಿ ತೆಪ್ಪೋತ್ಸವ ಹಾಗೂ ಪ್ರಮುಖ ರಸ್ತೆಯಲ್ಲಿ ಅಮ್ಮನವರ ಮೆರವಣಿಗೆ ನಡೆಸಿ, ದೇವಾಲಯದಲ್ಲಿ ಮಹಾಮಂಗಳಾರತಿ ನೆರವೇರಿಸಲಾಗುವುದು. ರಾತ್ರಿ 9 ಗಂಟೆಗೆ ಅಮ್ಮನವರಿಗೆ ಅನ್ನಶಾಂತಿ ನಡೆಸಲಾಗುವುದು. ಈ ಎಲ್ಲಾ ಪೂಜಾ ಕಾರ್ಯ ಅರ್ಚಕರಾದ ಜಿ.ಕೆ.ಗೋಪಿನಾಥ್ ಹಾಗೂ ಪುರೋಹಿತ್ ಎಸ್.ಹರೀಶ್, ಸುಕೃತ್ ಬಾರದ್ವಾಜ್ ನೆರವೇರಿಸುವರು. ಈ ಎಲ್ಲಾ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಬೇಕು ಎಂದು ತೊಗಟವೀರ ಕ್ಷತ್ರೀಯ ಸಮಾಜದ ಯಜಮಾನರಾದ ವಿ.ರವಿಂದ್ರಪ್ರಸಾದ್, ಎಸ್.ವಿ.ರವಿಕುಮಾರ್, ಜಿ.ರಘುರಾಮ್, ಸಿ.ರಂಗಧಾಮ, ತೋಗಟವೀರ ಕ್ಷತ್ರಿಯ ನೇಕಾರ ಸಮಾಜ, ತೊಗಟವೀರ ಕ್ಷತ್ರಿಯ ನೇಕಾರ ಯುವಕ ಸಂಘ, ತೊಗಟವೀರ ಕ್ಷತ್ರಿಯ ನೇಕಾರ ಭಜನಾ ಮಂಡಳಿ ತಿಳಿಸಿದ್ದಾರೆ.



ಸರಗೂರಲ್ಲಿ ಶ್ರೀಚೌಡೇಶ್ವರಿ ಅಮ್ಮನವರ 86ನೇ ವರ್ಧಂತಿ ಹಾಗೂ ಜ್ಯೋತಿ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಜನಗಣತಿ ವೇಳೆ ಹೃದಯಾಘಾತ: ಶಿಕ್ಷಕ ಸಾವು




ಕೆ.ಆರ್.ನಗರ, ಮೇ 6– ಜನಗಣತಿ ವೇಳೆ ಸರ್ಕಾರಿ ಶಾಲೆ ಶಿಕ್ಷಕರೊಬ್ಬರು ಹೃದಯಾಘಾತದಿಂದ ಸಾವನ್ನಪ್ಪಿರುವ ಘಟನೆ ಬುಧವಾರ ಬೆಳಗ್ಗೆ ಪಟ್ಟಣದ ಕುವೆಂಪು ಬಡಾವಣೆಯಲ್ಲಿ ನಡೆದಿದೆ.

ಮೂಲತಃ ತಾಲೂಕಿನ ಚಿಕ್ಕನಾಯಕನಹಳ್ಳಿ ಗ್ರಾಮದ ನಿವಾಸಿ, ಪಟ್ಟಣದ ಕೊಳಲು ರಸ್ತೆಯ ಕುವೆಂಪು ಬಡಾವಣೆಯಲ್ಲಿ ವಾಸವಿದ್ದ ಹುಣಸೂರು ತಾಲೂಕು ಮುಳ್ಳೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸಹ ಶಿಕ್ಷಕ ಸಿ.ಕೆ.ರಂಗನಾಥ್ (53) ಸಾವನ್ನಪ್ಪಿದವರು. ಇವರಿಗೆ ಪತ್ನಿ, ಓರ್ವ ಪುತ್ರ, ಪುತ್ರಿ ಇದ್ದಾರೆ.

ಕೆ.ಸಿ.ರಂಗನಾಥ್ ಅವರನ್ನು ಜನಗಣತಿ ಮಾಡಲು ನಿಯೋಜಿಸಲಾಗಿತ್ತು ಬುಧವಾರ ಬೆಳಗ್ಗೆ ಪಟ್ಟಣದ ಕುವೆಂಪು ಬಡಾವಣೆಯಲ್ಲಿ ಜನಗಣತಿ ಮಾಡುವ ವೇಳೆ ಹೃದಯಘಾತವಾಗಿದ್ದು, ಸ್ಥಳೀಯರು ತಕ್ಷಣ ಅವರನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದೊಯ್ದರಾದರೂ, ಪರೀಕ್ಷೆ ನಡೆಸಿದ ವೈದ್ಯರು ರಂಗನಾಥ್ ಸಾವನ್ನಪ್ಪಿರುವುದನ್ನು ಧೃಡಪಡಿಸಿದರು. ಅಂತಿಮವಾಗಿ ಮೃತರ ಅಂತ್ಯಕ್ರಿಯೆ ಚಿಕ್ಕನಾಯಕನಹಳ್ಳಿಯಲ್ಲಿ ನಡೆಯಿತು.

ಸಂತಾಪ: ಹೃದಯಾಘಾತದಿಂದ ನಿಧನರಾದ ಸಿ.ಕೆ.ರಂಗನಾಥ್ ಅವರು ಸರಳ ಸಜ್ಜನಿಕೆಯ ಶಿಕ್ಷಕರಾಗಿದ್ದರು. ವೃತ್ತಿಯಲ್ಲಿ ಕರ್ತವ್ಯ ನಿಷ್ಠೆ ಉಳ್ಳವರಾಗಿದ್ದವರು. ಮೃತರ ಕುಟುಂಬಕ್ಕೆ ಅಗಲಿಕೆಯ ನೋವು ತಡೆಯುವ ಶಕ್ತಿ ದೇವರು ಕರುಣಿಸಲಿ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಸಂತಾಪ ಸೂಚಿಸಿದ್ದಾರೆ.

ಕಲಾವಿದ ಸಿದ್ದರಾಜು ನಿಧನ



ಸುತ್ತೂರು, ಮೇ 6– ನಂಜನಗೂಡು ತಾಲೂಕಿನ ತಾಯೂರು ಗ್ರಾಮದ ನಿವಾಸಿ, ಮರಗಾಲು ಕಲಾವಿದ ಸಿದ್ದರಾಜು(50) ಮಂಗಳವಾರ ಬೆಳಗ್ಗೆ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಚಿತ್ರದುರ್ಗದಲ್ಲಿ ಮೇ 9ಕ್ಕೆ ಬಿಎಸ್‌ವೈ ಅಭಿಮಾನೋತ್ಸವ

ನಾಳೆ ಯಡಿಯೂರಪ್ಪನವರ 'ಪುರ ಪ್ರವೇಶ' ; ಸಾಂಪ್ರದಾಯಿಕ ಕಾರ್ಯಕ್ರಮವಾಗಿ ಅದ್ದೂರಿ ಮೆರವಣಿಗೆ

ಮೈಸೂರು, ಮೇ 6(ಎಂಕೆ)– ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ 50 ವರ್ಷಗಳ ಸಾರ್ವಜನಿಕ ಜೀವನ ಪಯಣದ ನೆನಪಿನ ಅಂಗವಾಗಿ ಮೇ 9 ರಂದು ಚಿತ್ರದುರ್ಗದಲ್ಲಿ ಹಮ್ಮಿಕೊಂಡಿರುವ 'ಬಿ.ಎಸ್.ವೈ ಅಭಿಮಾನೋತ್ಸವ' ಸಮಾರಂಭವನ್ನು ಸಾಂಸ್ಕೃತಿಕ ಹಬ್ಬದ ರೀತಿಯಲ್ಲಿ ಆಚರಿಸಲು ಮುನ್ನುಡಿಯಾಗಿ 'ಪುರ ಪ್ರವೇಶ'ವನ್ನು ಸಾಂಪ್ರದಾಯಿಕ ಕಾರ್ಯಕ್ರಮ ಅದ್ದೂರಿಯಾಗಿ ನಡೆಸಲು ಮಾಜಿ ಉಪ ಮುಖ್ಯಮಂತ್ರಿಗಳೂ ಆದ ಸಂಸದ ಗೋವಿಂದ ಕಾರಜೋಳ ಅವರ ನೇತೃತ್ವದ ಸ್ವಾಗತ ಸಮಿತಿ ತೀರ್ಮಾನಿಸಿದೆ.

ಮೇ 8 ರಂದು ಸಂಜೆ 4.30ಕ್ಕೆ ಚಿತ್ರದುರ್ಗ ನಗರಕ್ಕೆ ಮಾಜಿ ಸಿಎಂ ಯಡಿಯೂರಪ್ಪ ಅವರು ಆಗಮಿಸಲಿದ್ದು, ಸಾಂಪ್ರದಾಯಿಕವಾಗಿ 'ಪುರ ಪ್ರವೇಶ' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಇದಕ್ಕೆ ಸಾಂಸ್ಕೃತಿಕ ಮೆರಗು ನೀಡಲು 1000ಕ್ಕೂ ಹೆಚ್ಚಿನ ಸಂಖ್ಯೆಯ ಮಹಿಳೆಯರು ಮಂಗಳವಾದ್ಯದ ಸಹಿತ ಪೂರ್ಣಕುಂಭದೊಂದಿಗೆ ಭಾಗವಹಿಸಲಿದ್ದಾರೆ. ಹಾಗೆಯೇ ರೈತರು 'ಸಾಂಪ್ರದಾಯಿಕ ರಾಶಿ ಪೂಜೆ' ಯೊಂದಿಗೆ ರೈತಗೌರವ ಸಲ್ಲಿಸಲಿದ್ದಾರೆ. ಕನಕದಾಸ ವೃತ್ತದ ಸಮೀಪದ ಚಂದ್ರವಳ್ಳಿ ಮೈದಾನದಿಂದ ಸಾಗುವ ಮೆರವಣಿಗೆಯಲ್ಲಿ ಯಡಿಯೂರಪ್ಪನವರನ್ನು ಅಲಂಕೃತ ವಾಹನದ ಮೂಲಕ ಮೆರವಣಿಗೆಯಲ್ಲಿ ಕರೆತರಲಾಗುವುದು.

2000ಕ್ಕೂ ಹೆಚ್ಚಿನ ಸಂಖ್ಯೆಯ ರೈತರು ನೇಗಿಲು ಹಿಡಿದು ಶಿಸ್ತುಬದ್ಧವಾಗಿ ಮೆರವಣಿಗೆಯಲ್ಲಿ ಸಾಗಲಿದ್ದು, ಒನಕೆ ಓಬವ್ವನ ನೆಲದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ 'ನಾರಿ ಶಕ್ತಿ ವಂದನ್' ಕಾಯ್ದೆಗೆ



ಗೌರವ ಸಲ್ಲಿಸಲು 200ಕ್ಕೂ ಹೆಚ್ಚು ಮಹಿಳೆಯರು ಒನಕೆ ಓಬವ್ವನ ಪಾತ್ರಧಾರಿಗಳಾಗಿ ಶಿಸ್ತುಬದ್ಧವಾಗಿ ಮೆರವಣಿಗೆಯಲ್ಲಿ ನಡೆದು ಬರಲಿದ್ದಾರೆ. ರಾಜ್ಯದ ವಿವಿಧ ಮೂಲೆಗಳಿಂದ ಆಗಮಿಸುತ್ತಿರುವ ಸುಮಾರು 25ಕ್ಕೂ ಹೆಚ್ಚು ಸಾಂಸ್ಕೃತಿಕ ಹಾಗೂ ಜನಪದ ತಂಡಗಳು ಮೆರವಣಿಗೆಗೆ ಮೆರಗು ನೀಡಲಿವೆ.

ಮೆರವಣಿಗೆಗೆ ವಿಶೇಷ ಮೆರಗು ನೀಡುವ ನಿಟ್ಟಿನಲ್ಲಿ ಯಡಿಯೂರಪ್ಪ ಅವರ ಹೋರಾಟದ ದಿನಗಳ ನೆನಪಾಗಿ ಅವರ ಹಳೆಯ ಅಂಬಾಸಿಡರ್ ಕಾರು 'ಸಿಕೆಆರ್–45' ಆಕರ್ಷಣೆಯಾಗಲಿದೆ. ಅವರು ನಡೆದು ಬಂದ ಹಾದಿ, ಸಾಧನೆ ಹಾಗೂ ಅವರು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಜಾರಿಯಾದ ಜನಪ್ರಿಯ 'ಭಾಗ್ಯಲಕ್ಷ್ಮಿ' ಯೋಜನೆ, ಹೆಣ್ಣುಮಕ್ಕಳಿಗೆ ಸೈಕಲ್ ವಿತರಣೆ, ಕೃಷಿ ಬಜೆಟ್ ಮೊದಲಾದವುಗಳನ್ನು ಪ್ರತಿಬಿಂಬಿಸುವ ಸ್ತಬ್ಧ ಚಿತ್ರಗಳು ಸಾಗಲಿದ್ದು, ನಾಡಿನ ಹೆಸರಾಂತ ಕಲಾವಿದರು ಈ ಸ್ತಬ್ಧ ಚಿತ್ರಗಳನ್ನು



ಆರ್.ರಘು ಕೌಟಿಲ್ಯ

ರೂಪಿಸುತ್ತಿದ್ದಾರೆ.

ಪುರ ಪ್ರವೇಶ ಮೆರವಣಿಗೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷರೂ ಆದ ಮಾಜಿ ಸಚಿವ ಶ್ರೀರಾಮುಲು ಸೇರಿದಂತೆ ಅನೇಕ ಜನಪ್ರತಿನಿಧಿಗಳು ಭಾಗವಹಿಸಲಿದ್ದು, ಮೆರವಣಿಗೆಯಲ್ಲಿ ಚಿತ್ರದುರ್ಗದ ಜನತೆ ಹಾಗೂ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ಆರ್.ರಘು ಕೌಟಿಲ್ಯ ಕೋರಿದ್ದಾರೆ.

ಮೇ 9, 10 ರಂದು ರಾಜ್ಯಮಟ್ಟದ ಬ್ರಾಹ್ಮಣ ವಧು–ವರರ ಸಮಾವೇಶ, ಶ್ರೀನಿವಾಸ ಕಲ್ಯಾಣೋತ್ಸವ

ಬೆಂಗಳೂರು,ಮೇ 6– ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಮೈಸೂರಿನ ಮಂಗಳಸೂತ್ರ ಫೌಂಡೇಶನ್, ಸಪ್ತಪದಿ ಫೌಂಡೇಶನ್ ಟ್ರಸ್ಟ್ ಮತ್ತು ಬೆಂಗಳೂರಿನ ವಿವಿಧ ಬ್ರಾಹ್ಮಣ ಸಂಘಟನೆ ವತಿಯಿಂದ ರಾಜ್ಯ ಮಟ್ಟದ ಬ್ರಾಹ್ಮಣ ವಧು–ವರರ ಸಮಾವೇಶ ಹಾಗೂ ಶ್ರೀನಿವಾಸ ಕಲ್ಯಾಣೋತ್ಸವ ಕಾರ್ಯಕ್ರಮವನ್ನು ಮೇ.9 ಮತ್ತು 10 ರಂದು ಬೆಂಗಳೂರಿನ ಬನಶಂಕರಿ ಎರಡನೇ ಹಂತದ ಬಸವನಗುಡಿಯಲ್ಲಿರುವ ಗಾಯತ್ರಿ ಭವನದಲ್ಲಿ ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಆಯೋಜಿಸಲಾಗಿದೆ. ಆಸಕ್ತರು ಪೋಸ್ಟ್ ಕಾರ್ಡ್ ಸೈಜ್ ಫೋಟೋ, ಜಾತಕ, ಬಂಯೋಡೇಟಾದೊಂದಿಗೆ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ ಟ್ರಸ್ಟ್‌ನ ಸಂಚಾಲಕ ಶ್ರೀನಿವಾಸ್ ಮೊ:9449425536, 8088843300 ಸಂಪರ್ಕಿಸಬಹುದು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ



ಮೈಸೂರು, ಮೇ 6– ಮೈಸೂರಿನ ಜಗನ್ಮೋಹನ ಪ್ಯಾಲೆಸ್ ರಸ್ತೆಯಲ್ಲಿ ರುವ ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.70ಕ್ಕಿಂತ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ ಬ್ಯಾಂಕ್‌ನ ಸದಸ್ಯರ ಮಕ್ಕಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ.

ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.70ಕ್ಕಿಂತ ಹೆಚ್ಚು ಅಂಕಪಡೆದು ತೇರ್ಗಡೆಯಾದ ಬ್ಯಾಂಕಿನ ಸದಸ್ಯರ ಮಕ್ಕಳ ಪೈಕಿ ಗರಿಷ್ಠ ಅಂಕ ಪಡೆದ 20 ವಿದ್ಯಾರ್ಥಿಗಳಿಗೆ ತಲಾ 5000 ರೂ.ಪ್ರೋತ್ಸಾಹಧನ ಹಾಗೂ ಜಿಲ್ಲಾ, ರಾಜ್ಯ ಮತ್ತು ಅಂತರ ರಾಜ್ಯ ಮಟ್ಟದ ಕ್ರೀಡೆಯಲ್ಲಿ ಭಾಗವಹಿಸಿದ ಬ್ಯಾಂಕ್ ಸದಸ್ಯರ ಮಕ್ಕಳಲ್ಲಿ ಮೂವರಿಗೆ ತಲಾ 5000 ರೂ. ಕ್ರೀಡಾ ಪ್ರೋತ್ಸಾಹಧನ ನೀಡಲಾಗುತ್ತದೆ.

ಅರ್ಜಿ ಪಡೆದು ಭರ್ತಿಮಾಡಿ, ಎರಡು ಪಾಸ್‌ಪೋರ್ಟ್ ಅಳತೆಯ ಫೋಟೋದೊಂದಿಗೆ ಮೇ 11ರ ಸಂಜೆ 6 ಗಂಟೆಯೊಳಗೆ ಬ್ಯಾಂಕಿನ ಜನರಲ್ ಮ್ಯಾನೇಜರ್‌ಗೆ ಸಲ್ಲಿಸಬೇಕು ಎಂದು ಪ್ರಕಟಣೆಯಲ್ಲಿ ಕೋರಿದೆ.

ಪುಸ್ತಕಗಳನ್ನು ಕೊಳ್ಳುವ, ಓದುವ, ಸಂಗ್ರಹಿಸುವ ಪ್ರವೃತ್ತಿ ಪ್ರತಿಯೊಬ್ಬರಲ್ಲೂ ಬೆಳೆಯಬೇಕು

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಆಶಯ

ಮೈಸೂರು, ಮೇ 6– ಓದುವ ಹವ್ಯಾಸವನ್ನು ಹೆಚ್ಚಿಸಿ ಪುಸ್ತಕ ಸಂಸ್ಕೃತಿಯನ್ನು ಹರಡುವುದೇ ಮನೆಗೊಂದು ಗ್ರಂಥಾಲಯ ಯೋಜನೆಯ ಉದ್ದೇಶವಾಗಿದೆ. ಪುಸ್ತಕಗಳನ್ನು ಕೊಳ್ಳುವ, ಓದುವ ಮತ್ತು ಸಂಗ್ರಹಿಸುವ ಪ್ರವೃತ್ತಿ ಪ್ರತಿಯೊಬ್ಬರಲ್ಲೂ ಬೆಳೆಯಬೇಕೆಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ತಿಳಿಸಿದರು.

ಅವರು ಇತ್ತೀಚೆಗೆ ಹಿರಿಯ ಸಾಹಿತಿ ಡಾ. ಅಮ್ಮಸಂದ್ರ ಸುರೇಶ್ ಅವರ ಮನೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಮನೆಗೊಂದು ಗ್ರಂಥಾಲಯ ಯೋಜನೆಯಡಿಯಲ್ಲಿ ಗ್ರಂಥಾಲಯವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಕರ್ನಾಟಕ ರಾಜ್ಯಾದ್ಯಂತ ಮನೆಗಳು, ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಸುಮಾರು ಒಂದು ಕೋಟಿ ಗ್ರಂಥಾಲಯಗಳನ್ನು ಆರಂಭಿಸುವುದು ಈ ಯೋಜನೆಯ ಉದ್ದೇಶವಾಗಿದ್ದು ಈಗಾಗಲೇ ಸುಮಾರು ಮುವತ್ತಾರು ಸಾವಿರ ಗ್ರಂಥಾಲಯಗಳನ್ನು ಅನುಷ್ಠಾನಕ್ಕೆ ತರಲಾಗಿದೆ ಎಂದು ತಿಳಿಸಿದ ಅವರು ಪ್ರತಿಯೊಬ್ಬರಲ್ಲೂ ಪುಸ್ತಕಗಳನ್ನು ಖರೀದಿ ಮಾಡಿ ಓದುವ ಹವ್ಯಾಸ ಮತ್ತು ಪುಸ್ತಕಗಳನ್ನು ಸಂಗ್ರಹಿಸಿಡುವ ಹವ್ಯಾಸವನ್ನು ಈ ಯೋಜನೆಯ ಮೂಲಕ ಈಡೇರಿಸುವ ಆಶಯವನ್ನು ಹೊಂದಿರುವುದಾಗಿ ತಿಳಿಸಿದರು.



ಮನೆಗೊಂದು ಗ್ರಂಥಾಲಯ ಯೋಜನೆಯ ಕರಪತ್ರಗಳನ್ನು ಬಿಡುಗಡೆಗೊಳಿಸಲಾಯಿತು.

ಮನೆಗೊಂದು ಗ್ರಂಥಾಲಯ ಯೋಜನೆಯಡಿಯಲ್ಲಿ ಮೈಸೂರು ನಗರದಲ್ಲಿ ಈಗಾಗಲೇ ಹಲವು ನಾಗರಿಕರು ತಮ್ಮ ಮನೆಗಳಲ್ಲಿ ಗ್ರಂಥಾಲಯಗಳನ್ನು ಆರಂಭಿಸಿದ್ದಾರೆ. ಈ ಯೋಜನೆಗೆ ನಾಗರಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದು ತಿಳಿಸಿದ ಮನಗೊಂದು ಗ್ರಂಥಾಲಯ ಯೋಜನೆಯ ಜಿಲ್ಲಾ ಜಾಗೃತ ಸಮಿತಿ ಅಧ್ಯಕ್ಷರಾದ ಎಂ ಚಂದ್ರಶೇಖರ್, ಮಕ್ಕಳು ಮತ್ತು ಯುವಕರಲ್ಲಿ ಓದುವ ಹವ್ಯಾಸ ಕುಸಿಯುತ್ತಿದ್ದು, ಈ ಯೋಜನೆಯ ಮೂಲಕ ಪುಸ್ತಕಗಳ ಮಹತ್ವವನ್ನು ಮನೆಮನೆಗೂ ತಲುಪಿಸಲಾಗುವುದು ಎಂದು ಹೇಳಿದರು.

ಜಗತ್ತಿನಲ್ಲಿ ಅತೀ ಹೆಚ್ಚು ಓದುವ ಹವ್ಯಾಸವನ್ನು ಒಳಗೊಂಡಿರುವ ದೇಶಗಳಲ್ಲಿ ಅಮೆರಿಕದ ನಂತರದ ಸ್ಥಾನವನ್ನು ಭಾರತ ಹೊಂದಿದ್ದು ಇದೊಂದು ಮಹತ್ವದ ವಿಷಯವಾಗಿದೆ ಎಂದು ತಿಳಿಸಿದ ಸಾಹಿತಿ ಮತ್ತು ವಿಜ್ಞಾನಿ ಡಾ.ಪ್ರಸನ್ನ ಸಂತೆಕಡೂರು ಒತ್ತಡಗಳಿಂದ ಹೊರಬರಲು ಓದು ಸಹಕಾರಿಯಾಗಿದೆ. ಮಾನಸಿಕ ಆರೋಗ್ಯಕ್ಕೂ ಓದು ಉತ್ತಮ ಚಿಕಿತ್ಸೆಯಾಗಿದ್ದು ಓದಿನ ಮೂಲಕ ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಜೊತೆಗೆ ಮಾನಸಿಕ ಆರೋಗ್ಯವನ್ನು ನಮ್ಮದಾಗಿಸಿಕೊಳ್ಳಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ. ಅಮ್ಮಸಂದ್ರ ಸುರೇಶ್ ದಂಪತಿಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಮನೆಗೊಂದು ಗ್ರಂಥಾಲಯ ಯೋಜನೆಯ ಕರಪತ್ರಗಳನ್ನು ಬಿಡುಗಡೆಗೊಳಿಸಲಾಯಿತು. ಶರಣ ದೇವರಾಜು ಪಿ. ಚಿಕ್ಕಹಳ್ಳಿ ಕಾರ್ಯಕ್ರಮದ ನಿರೂಪಣೆ ಮಾಡಿದರು. ಈ ವೇಳೆ ಹಿರಿಯ ಪತ್ರಕರ್ತ ಕೆ. ನರಸಿಂಹ ಮೂರ್ತಿ, ಹೆಗ್ಗಡದೇವನಕೋಟೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಕನ್ನಡ ಪ್ರಮೋದ್, ನೆರಳು ಚಾರಿಟಬಲ್ ಟ್ರಸ್ಟ್‌ನ ಕಾರ್ಯದರ್ಶಿ ಪುರುಷೋತ್ತಮ, ಖಜಾಂಚಿ ಕುಮಾರ್, ಸೇರಿದಂತೆ ಹಲವು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಎಸ್‌ಸಿಪಿ–ಟಿಎಸ್‌ಪಿ ಅಭಿವೃದ್ಧಿ ಯೋಜನೆಗೆ ಹಣ ಬಿಡುಗಡೆ ಮಾಡುವಂತೆ ಆಗ್ರಹ



ರಾಮಸ್ವಾಮಿ


ಮೈಸೂರು, ಮೇ 6– ಎಸ್‌ಸಿಪಿ–ಟಿಎಸ್‌ಪಿ ಯೋಜನೆಯಡಿ ಅಭಿವೃದ್ಧಿ ಕಾಮಗಾರಿಗಳಿಗೆ ಶೀಘ್ರವೇ ಹಣ ಬಿಡುಗಡೆ ಮಾಡಲು ಮಾಜಿ ಗ್ರಾಪಂ ಸದಸ್ಯ ಹುಯಿಲಾಳು ರಾಮಸ್ವಾಮಿ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಎಸ್‌ಸಿಪಿ–ಟಿಎಸ್‌ಪಿ ಯೋಜನೆಯಡಿ ಹಲವಾರು ಅಭಿವೃದ್ಧಿ ಕಾಮಗಾರಿಗಳಿಗೆ ಹಣ ಮೀಸಲಿಡುವ ವಿಚಾರದಲ್ಲಿ ಸರ್ಕಾರ ಆಶ್ವಾಸನೆಯನ್ನು ಮಾತ್ರವೇ ಕೊಟ್ಟಿದೆ. ಆದರೆ ಯಾವುದೇ ಕಚೇರಿಗೂ ಈ ಯೋಜನೆಯಡಿ ಅನುದಾನ ಬಿಡುಗಡೆಯಾಗಿಲ್ಲ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ಕ್ಷೇತ್ರದ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಬಳಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಬೇಸರಿಸಿದರು.

ಎಸ್‌ಸಿಪಿ–ಟಿಎಸ್‌ಪಿ ಉಪಯೋಜನೆ ಪ್ರಾಯೋಜಿತದಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕಲಾವಿದರಿಗೆ ಅನುದಾನ ಬಿಡುಗಡೆ ಮಾಡುವಂತೆ 2023 ರಿಂದಲೂ ಮನವಿ ಮಾಡಲಾಗುತ್ತಿದೆ. ಅರಣ್ಯದ ಅಕ್ಕ–ಪಕ್ಕದಲ್ಲಿರುವ ಎಸ್‌ಸಿ–ಎಸ್‌ಟಿ ಸಮುದಾಯ ದವರಿಗೆ ಸೇರಿದ ಜಮೀನಿಗೆ ಸೋಲಾರ್ ತಂತಿ ಹಾಕಿ, ಕಾಡು ಪ್ರಾಣಿಗಳ ಹಾವಳಿಯಿಂದ ಬೆಲೆ ರಕ್ಷಿಸಿಕೊಳ್ಳುವಂತೆ ಅನುದಾನ ಮಂಜೂರು ಮಾಡಲು ಹಲವಾರು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಎಸ್ಸಿ–ಎಸ್‌ಟಿಗಳ ಅಭಿವೃದ್ಧಿಗಾಗಿ ಮೀಸಲಿಟ್ಟಿರುವ ಹಣ ದುರ್ಬಳಕೆ ಮಾಡದೇ, ಎಸ್‌ಸಿಪಿ – ಟಿಎಸ್‌ಪಿ ಯೋಜನೆಯಡಿ ಅನುದಾನ ವನ್ನು ಸದ್ಬಳಕೆ ಮಾಡಿಕೊಳ್ಳುವ ಮೂಲಕ ಅಭಿವೃದ್ಧಿ ಕಾಮಗಾರಿಗಳಿಗೆ, ಸೋಲಾರ್ ತಂತಿ ಬೇಲಿ ಮತ್ತು ಕಲಾವಿದರಿಗೆ ಗೌರವ ಧನ ಕೊಡುವತ್ತ ಚಿಂತನೆ ನಡೆಸಬೇಕಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಶ್ಚಿಮ ಬಂಗಾಳದ ಬಿಜೆಪಿ ನಾಯಕ ಸುವೇಂದು ಅಧಿಕಾರಿಯ ಆಪ್ತ ಸಹಾಯಕನ ಗುಂಡಿಕ್ಕಿ ಹತ್ಯೆ!

ಕೋಲ್ಕತ್ತಾ: ಪಶ್ಚಿಮ ಬಂಗಾಳದ ರಾಜಕೀಯ ವಲಯದಲ್ಲಿ ಮತ್ತೆ ನೆತ್ತರು ಹರಿದಿದೆ. ನಂದಿಗ್ರಾಮದಲ್ಲಿ ಮಮತಾ ಬ್ಯಾನರ್ಜಿ ಅವರನ್ನೇ ಸೋಲಿಸಿ ಅಬ್ಬರಿಸಿದ್ದ ಬಿಜೆಪಿ ನಾಯಕ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಅವರ ಆಪ್ತ ಸಹಾಯಕ ಚಂದ್ರನಾಥ್



ಅವರನ್ನು ದುಷ್ಕರ್ಮಿಗಳು ಭೀಕರವಾಗಿ ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ.

ಪಶ್ಚಿಮ ಬಂಗಾಳದ ಹೈ ಪ್ರೊಫೈಲ್ ಕ್ಷೇತ್ರಗಳಲ್ಲಿ ಒಂದಾದ ನಂದಿಗ್ರಾಮ ಮತ್ತು ಸುತ್ತಮುತ್ತಲಿನ ಭಾಗಗಳಲ್ಲಿ ಸುವೇಂದು ಅಧಿಕಾರಿ ಅವರ ನೆರಳಿನಂತೆ ಗುರುತಿಸಿಕೊಂಡಿದ್ದ ಚಂದ್ರನಾಥ್ ಅವರನ್ನು ಗುರಿಯಾಗಿಸಿಕೊಂಡು ಈ ದಾಳಿ ನಡೆದಿದೆ. ಮುಸುಕುಧಾರಿಗಳಾಗಿ ಬಂದ ದುಷ್ಕರ್ಮಿಗಳು ಅತ್ಯಂತ ಹತ್ತಿರದಿಂದ ಗುಂಡಿನ ದಾಳಿ ನಡೆಸಿದ್ದು, ಚಂದ್ರನಾಥ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ.

ಟಾರ್ಗೆಟ್ ಕಿಲ್ಲಿಂಗ್: ಸುವೇಂದು ಅಧಿಕಾರಿ ಅವರ ರಾಜಕೀಯ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ಆಪ್ತನನ್ನೇ ಗುರಿಯಾಗಿಸಿ ಕೊಲೆ ಮಾಡಲಾಗಿದೆ.

ರಾಜಕೀಯ ಸಂಘರ್ಷ: ಈ ಹತ್ಯೆಯ ಹಿಂದೆ ಆಡಳಿತಾರೂಢ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಕಾರ್ಯಕರ್ತರ ಕೈವಾಡವಿದೆ ಎಂದು ಬಿಜೆಪಿ ಗಂಭೀರ ಆರೋಪ ಮಾಡಿದೆ.

ಹಿನ್ನೆಲೆ: 2021ರ ಚುನಾವಣೆಯಲ್ಲಿ ಮಮತಾ ಬ್ಯಾನರ್ಜಿ ಅವರ ವಿರುದ್ಧ ಸುವೇಂದು ಅಧಿಕಾರಿ ಗೆಲುವು ಸಾಧಿಸಿದಾಗಿನಿಂದಲೂ ಈ ಭಾಗದಲ್ಲಿ ರಾಜಕೀಯ ಕಿಚ್ಚು ಹೆಚ್ಚಾಗಿತ್ತು. ಬಂಗಾಳದಲ್ಲಿ ಪ್ರಜಾಪ್ರಭುತ್ವ ಸತ್ತು ಹೋಗಿದೆ. ವಿರೋಧ ಪಕ್ಷದ ನಾಯಕರ ಆಪ್ತರನ್ನು ಕೊಲ್ಲುವ ಮೂಲಕ ಭಯದ ವಾತಾವರಣ ಸೃಷ್ಟಿಸಲು ಟಿಎಂಸಿ ಯತ್ನಿಸುತ್ತಿದೆ ಎಂದು ಸ್ಥಳೀಯ ಬಿಜೆಪಿ ನಾಯಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೂದಿ ಮುಚ್ಚಿದ ಕೆಂಡದಂತಾದ ಪರಿಸ್ಥಿತಿ : ಈ ಹತ್ಯೆಯ ಬೆನ್ನಲ್ಲೇ ಪಶ್ಚಿಮ ಬಂಗಾಳದ ಹಲವೆಡೆ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ ಘಟನಾ ಸ್ಥಳಕ್ಕೆ ಭಾರಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿದೆ. ಸುವೇಂದು ಅಧಿಕಾರಿ ಅವರು ಈ ಬಗ್ಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಫಲಿತಾಂಶಗಳ ನಂತರದ ಅಧಿಕಾರ ಬದಲಾವಣೆಯ ಸಮಯದಲ್ಲಿ ಹಿಂಸಾಚಾರ ಕಡಿಮೆಯಾಗುವ ಲಕ್ಷಣಗಳು ಕಾಣುತ್ತಿಲ್ಲ. ಬಿಜೆಪಿ ನಾಯಕ ಮತ್ತು ರಾಜ್ಯದ ಹೊಸ ರಾಜಕೀಯ ವ್ಯಕ್ತಿ ಸುವೇಂದು ಅಧಿಕಾರಿ ಅವರ ಆಪ್ತ ಸಹಾಯಕ (ಪಿಎ) ಚಂದ್ರ ನಾಥ್ ಅವರನ್ನು ಹಾಡಹಗಲೇ ಮಧ್ಯಮ್ ಗ್ರಾಮದಲ್ಲಿ ಗುಂಡಿಕ್ಕಿ ಕೊಲೆ ಮಾಡಲಾಗಿದೆ. ಪ್ರತ್ಯಕ್ಷದರ್ಶಿಗಳ ಪ್ರಕಾರ, ದುಷ್ಕರ್ಮಿಗಳು ಸುವೇಂದು ಅಧಿಕಾರಿಯ ಆಪ್ತನನ್ನು ಗುಂಡಿಟ್ಟು ಕೊಲೆ ಮಾಡಿದ್ದು, ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ

ಇಂದು ಶಾಸಕ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಜನ ಸಂಪರ್ಕ ಸಭೆ

ಮೈಸೂರು, ಮೇ 6(ಎಸ್‌ಪಿಎನ್)– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ



ವ್ಯಾಪ್ತಿಯ ವಾರ್ಡ್ ನಂ. 58ರ ವ್ಯಾಪ್ತಿಯ ರಾಮಕೃಷ್ಣನಗರ 'ಹೆಚ್.' ಬ್ಲಾಕ್ ಸಾಲುಮರದ ತಿಮ್ಮಕ್ಕ ಪಾರ್ಕ್‌ನಲ್ಲಿ ಗುರುವಾರ ಸಂಜೆ 5 ಗಂಟೆಗೆ ಜನಸಂಪರ್ಕ ಸಭೆಯನ್ನು ಶಾಸಕ ಜಿ.ಟಿ.ದೇವೇಗೌಡರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ.

ಸದರಿ ಸಭೆಯಲ್ಲಿ ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ, ಪಾಲಿಕೆ ಶೇಖ್ ತನ್ವೀರ್ ಆಸೀಫ್, ಎಂಡಿಎ ಆಯುಕ್ತ ರಕ್ಷಿತ್, ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ.

ಆರೋಗ್ಯಕರ ಜೀವನಕ್ಕೆ ಕೈಗಳ ಸ್ವಚ್ಛತೆ ಅವಶ್ಯ

ವಿಶ್ವ ಕೈ ನೈರ್ಮಲ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ.ಸಿ.ಪಿ.ಮಧು ಕಿವಿಮಾತು

ಮೈಸೂರು, ಮೇ 6– ಆರೋಗ್ಯಕರ ಜೀವನಕ್ಕೆ ಕೈಗಳ ಸ್ವಚ್ಛತೆಗೆ ಪ್ರಧಾನ ಆದ್ಯತೆ ನೀಡಬೇಕು, ಇದು ಕಾಯಿಲೆಗಳನ್ನು ತಡೆಯುವ ಅತ್ಯಂತ ಸರಳ ಮತ್ತು ಪರಿಣಾಮಕಾರಿ ಮಾರ್ಗವಾಗಿದೆ ಎಂದು ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ.ಸಿ.ಪಿ.ಮಧು ಹೇಳಿದರು.

ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ವಿಶ್ವ ಕೈ ನೈರ್ಮಲ್ಯ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಸೋಂಕು ಅಥವಾ ಕೀಟಾಣುಗಳು ನಮ್ಮ ದೇಹವನ್ನು ಪ್ರವೇಶಿಸುವುದು ಕೈಗಳ ಮೂಲಕ ಆದ್ದರಿಂದಲೇ ಕೈಗಳ ಸ್ವಚ್ಛತೆಗೆ ಪ್ರಧಾನ ಆದ್ಯತೆ ನೀಡಬೇಕು ಎಂದರು.

ವೈದ್ಯರು ರೋಗಿಯನ್ನು ಮುಟ್ಟುವ ಮುನ್ನ ಮತ್ತು ನಂತರ ಕೈಗಳನ್ನು ಸ್ವಚ್ಛಗೊಳಿಸಿಕೊಳ್ಳಬೇಕು ಇದರಿಂದ ಸೋಂಕು ಒಬ್ಬರಿಂದ ಒಬ್ಬರಿಗೆ ಹರಡುವ ಸಾಧ್ಯತೆ ಕಡಿಮೆ ಈ ಅಭ್ಯಾಸವನ್ನು ಎಲ್ಲಾ ಆರೋಗ್ಯ ಕಾರ್ಯಕರ್ತರು ಕಡ್ಡಾಯವಾಗಿ ರೂಢಿಸಿಕೊಳ್ಳಬೇಕು ಮತ್ತು ಇದರ ಬಗ್ಗೆ ಜಾಗೃತಿ ಮತ್ತು ಅರಿವು ಬಹಳ ಮುಖ್ಯ ಎಂದು



ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ವಿಶ್ವ ಕೈ ನೈರ್ಮಲ್ಯ ದಿನಾಚರಣೆಯನ್ನು ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಪಿ.ಮಧು ಉದ್ಘಾಟಿಸಿದರು.

ಅಭಿಪ್ರಾಯಪಟ್ಟರು.

ಜೆಎಸ್‌ಎಸ್ ಆಸ್ಪತ್ರೆಯ ಉಪ ನಿರ್ದೇಶಕರಾದ ಡಾ. ಸುಮನ ಮಾತನಾಡಿ, ರೋಗ ಹರಡುವುದನ್ನು ತಡೆಗಟ್ಟಲು ಮತ್ತು ನಿಯಂತ್ರಿಸಲು ಕೈಗಳನ್ನು ಸ್ವಚ್ಛಗೊಳಿಸಿಕೊಳ್ಳಬೇಕು, ಆಸ್ಪತ್ರೆಯಲ್ಲಿ ನರ್ಸ್‌ಗಳ ಪಾತ್ರ ಬಹಳ ಪ್ರಮುಖವಾದದ್ದು ಅವರುಗಳು ವಾರ್ಡ್‌ಗೆ ಪ್ರವೇಶಿಸುವ ವೈದ್ಯರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಕೈ ನೈರ್ಮಲ್ಯ ಬಗ್ಗೆ ಜಾಗೃತಿ ಮೂಡಿಸಬೇಕು ಮತ್ತು ಕಡ್ಡಾಯವಾಗಿ ಕೈ ತೊಳೆಯಲು ಹೇಳಬೇಕು ಎಂದರು, ಹಾಗೂ ಕೈ ನೈರ್ಮಲ್ಯ ಬಗ್ಗೆ ಅವರು ಸ್ವರಚಿತ ಹಾಡಿನ ಮೂಲಕ ಕೈ ತೊಳೆಯುವ ವಿಧಾನವನ್ನು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜೆಎಸ್‌ಎಸ್ ಆಸ್ಪತ್ರೆಯ ಮಕ್ಕಳ ವಿಭಾಗದ ಮುಖ್ಯಸ್ಥ ಡಾ.ಡಿ.ಶ್ರೀನಿವಾಸ್‌ಮೂರ್ತಿ ಮಾತನಾಡಿ, ಕೈ ನೈರ್ಮಲ್ಯ ಎಂಬ ಪದ ತುಂಬಾ ಚಿಕ್ಕ ವಿಷಯವಾಗಿದ್ದರು ಇದು ಸಾವನ್ನು ತಪ್ಪಿಸುತ್ತದೆ ಎಂದು ಅಭಿಪ್ರಾಯಪಟ್ಟರು. ನಮ್ಮಿಂದ ಇನ್ನೊಬ್ಬರಿಗೆ ತೊಂದರೆ ಆಗಬಾರದು ಹಾಗೂ ಸೋಂಕು ಇರುವ ವ್ಯಕ್ತಿಯನ್ನು ಮುಟ್ಟಿ ಆ ಸೋಂಕು ನಮ್ಮ ಕೈಗಳಿಂದ ಮತ್ತೊಬ್ಬರಿಗೆ ಹರಡಿ ಅವರ ಪ್ರಾಣಕ್ಕೆ ಕುತ್ತಾಗಬಹುದು ಎಂದರು. ಆದ್ದರಿಂದ ನಮಗೋಸ್ಕರ ಮತ್ತು ಬೇರೆಯವರಿಗೋಸ್ಕರ ನಾವು ನಮ್ಮ ಕೈಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೇಕು ಎಂದರು. ಕೈಗಳನ್ನು ಸ್ವಚ್ಛಗೊಳಿಸುವುದು ಪ್ರಾಥಮಿಕ ಮತ್ತು ಸುಲಭವಾದ ಮಾರ್ಗವಾಗಿದೆ ಬ್ಯಾಕ್ಟೀರಿಯಾ ಮತ್ತು ವೈರಸ್‌ಗಳ ಹರಡುವಿಕೆಯನ್ನು ತಡೆಯುವ ಮೂಲಕ ಅನೇಕ ಮಾರಣಾಂತಿಕ ಕಾಯಿಲೆಗಳಿಂದ ರಕ್ಷಣೆ ಪಡೆಯಬಹುದು ಎಂದರು.

ಆಸ್ಪತ್ರೆಯ ಸೋಂಕು ನಿಯಂತ್ರಣ ಸಮಿತಿಯ ಕಾರ್ಯದರ್ಶಿ ಡಾ. ಚೇತಕ್ ಕೆ.ಬಿ. ನರ್ಸಿಂಗ್ ಸೇವೆಗಳ ಮುಖ್ಯಸ್ಥರಾದ ಶ್ರೀಮತಿ ಜಾನೆಟ್ ಮಥಿಯಾಸ್ ಉಪಸ್ಥಿತರಿದ್ದರು.

9ನೇ ಪುಟದಿಂದ ಮುಂದುವರೆದ

ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ ವಿಚಾರ

ಐಐಟಿ ರೂರ್ಕಿಯ ಸಂರಕ್ಷಣೆ ವರದಿ ಎತ್ತಿಹಿಡಿದ ಸುಪ್ರೀಂಕೋರ್ಟ್

ಹಾನಿ ತಡೆಗೆ ಸಂರಕ್ಷಣಾ ಯೋಜನೆ ರೂಪಿಸಲು ರಾಜ್ಯಕ್ಕೆ ಸೂಚನೆ ; ಮುಂದಿನ ವಿಚಾರಣೆ ಜು.30ಕ್ಕೆ ನಿಗದಿ


ದೇವರಾಜ ಮಾರುಕಟ್ಟೆ


ಲ್ಯಾನ್ಸ್‌ಡೌನ್ ಬಿಲ್ಡಿಂಗ್

ಈ ಎರಡು ಕಟ್ಟಡಗಳ ಪಾರಂಪರಿಕ ಮೌಲ್ಯವನ್ನು ಗಮನದಲ್ಲಿಟ್ಟುಕೊಂಡು ಪುನರುಜ್ಜೀವನಗೊಳಿಸಿ ಸಂರಕ್ಷಿಸಬಹುದು ಎಂದು ಐಐಟಿ ರೂರ್ಕಿ ಸಮಿತಿಯು ತನ್ನ ವರದಿಯಲ್ಲಿ ಸುಪ್ರೀಂಕೋರ್ಟ್‌ಗೆ ತಿಳಿಸಿದೆ. ಲ್ಯಾನ್ಸ್‌ಡೌನ್ ಕಟ್ಟಡ ಹದಗೆಡಲು ಅಸಮರ್ಪಕ ಬದಲಾವಣೆ, ಮುಚ್ಚಿದ ಒಳಚರಂಡಿ ವ್ಯವಸ್ಥೆ ಕಾರಣ. ಅವೈಜ್ಞಾನಿಕ ಸೇರ್ಪಡೆಗಳೇ ಈ ಕಟ್ಟಡದ ಹಾನಿಗೆ ಕಾರಣ ಎಂದು ಸುಪ್ರೀಂಕೋರ್ಟ್‌ಗೆ ಐಐಟಿ ರೂರ್ಕಿ ವರದಿ ನೀಡಿದೆ.

ಮೈಸೂರು,ಮೇ 6(ಐಸಿಟಿ/ಪಿಎಂ)– ಮೈಸೂರಿನ ಹೃದಯಭಾಗದಲ್ಲಿರುವ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ನ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸಬೇಕೆಂದು ಸುಪ್ರೀಂಕೋರ್ಟ್ ಹೇಳಿದೆ.

ಮೇ 4ರಂದು ಐಐಟಿ ರೂರ್ಕಿ ಸಮಿತಿ ವರದಿಯನ್ನು ಪರಿಶೀಲಿಸಿದ ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದಿವಾಲಾ ಮತ್ತು ವಿಜಯ್ ಬಿಷ್ಣೋಯ್ ಒಳಗೊಂಡ ಪೀಠವು, ಈ ಎರಡೂ ನಿರ್ಮಾಣಗಳನ್ನು ಸಂರಕ್ಷಿಸಬೇಕು ಮತ್ತು ಅಗತ್ಯ ನವೀಕರಣದೊಂದಿಗೆ ಪುನಃಸ್ಥಾಪನೆ ಕಾರ್ಯಗಳನ್ನು ಕೈಗೊಳ್ಳಬೇಕು ಎಂದು ಅಭಿಪ್ರಾಯಪಟ್ಟಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಸಮಗ್ರ ಯೋಜನಾ ವರದಿಯನ್ನು ಸಿದ್ಧಪಡಿಸಬೇಕೆಂದು ಪೀಠ ಹೇಳಿದೆ.

ಈ ಎರಡು ನಿರ್ಮಾಣಗಳನ್ನು ನೆಲಸಮಗೊಳಿಸಬೇಕೆಂಬ ಪ್ರಸ್ತಾವನೆ ಪ್ರಶ್ನಿಸಿ ಸಲ್ಲಿಸಲಾಗಿದ್ದ ಸ್ಪೆಷಲ್ ಲೀವ್ ಪಿಟಿಷನ್ (ಎಸ್‌ಎಲ್‌ಪಿ) ಸಂಬಂಧ ನ್ಯಾಯಾಲಯವು ವಿಚಾರಣೆ ನಡೆಸಿ, ಐಐಟಿ ರೂರ್ಕಿ ಸಮಿತಿಯು ಸಂಶೋಧನೆಗಳಿಗೆ ಅನುಗುಣವಾಗಿ ಮುಂದುವರೆಯುವಂತೆ ರಾಜ್ಯ ಸರ್ಕಾರ, ಜಿಲ್ಲಾಡಳಿತ ಮತ್ತು ಮೈಸೂರು ಮಹಾನಗರ ಪಾಲಿಕೆಗೆ ನಿರ್ದೇಶನ ನೀಡಿದೆ.

ಸದರಿ ಪಾರಂಪರಿಕ ನಿರ್ಮಾಣಗಳಿಗೆ ಯಾವುದೇ ಹಾನಿಯಾಗದಂತೆ ಸೂಕ್ತ ಕ್ರಮಗಳನ್ನು ಶೀಘ್ರವೇ ಕೈಗೊಳ್ಳುವಂತೆ ಸೂಚಿಸಿದ ನ್ಯಾಯಾಲಯವು, ಮುಂದಿನ ವಿಚಾರಣೆಯನ್ನು ಜು.30ಕ್ಕೆ ನಿಗದಿಪಡಿಸಿದೆ. ಇಂಡಿಯನ್ ನ್ಯಾಷನಲ್ ಟ್ರಸ್ಟ್ ಫಾರ್ ಆರ್ಟ್ ಅಂಡ್ ಕಲ್ಚರಲ್ ಹೆರಿಟೇಜ್ ಟ್ರಸ್ಟ್ (ಇಂಟ್ಯಾಚ್) ಶಿಫಾರಸುಗಳನ್ನು ಪರಿಗಣಿಸುವಂತೆಯೂ ಪೀಠವು ಅಧಿಕಾರಿಗಳಿಗೆ ಸೂಚಿಸಿತು.

ಐಐಟಿ ರೂರ್ಕಿ ವರದಿ: ಅಕ್ಟೋಬರ್ 2025ರಲ್ಲಿ ನಡೆಸಿದ ಕಟ್ಟಡಗಳ ಸಮಗ್ರ ವಿಶ್ಲೇಷಣೆ ಮತ್ತು ಆಡಿಟ್ ಆಧಾರದಲ್ಲಿ ಐಐಟಿ ರೂರ್ಕಿ ತಜ್ಞರು, ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಎರಡನ್ನೂ ಸಂರಕ್ಷಿಸುವುದು ಸಾಧ್ಯವೆಂದು ಹೇಳಿದ್ದಾರೆ.

ಮೈಸೂರಿನ ನಾಗರಿಕ ವಾಸ್ತುಶಿಲ್ಪ ಸಮೂಹದ ಭಾಗವಾಗಿ ಈ ಕಟ್ಟಡಗಳು ಇಂದಿಗೂ ಪ್ರಸ್ತುತವಾಗಿದ್ದು, ಪರಸ್ಪರ ಸಂಬಂಧ ಹೊಂದಿರುವ ಮೌಲ್ಯಗಳನ್ನು ಒಳಗೊಂಡಿವೆ. ಸಮಗ್ರ ಮತ್ತು ವೈಜ್ಞಾನಿಕ ಸಂರಕ್ಷಣಾ ಯೋಜನೆ ಅಗತ್ಯವಿದ್ದು, ತೀವ್ರ ಹಾನಿಗೀಡಾಗಿರುವ ಭಾಗಗಳನ್ನು ಪುನರುಜ್ಜೀವನದ ಭಾಗವಾಗಿ ಮರುನಿರ್ಮಾಣ ಮಾಡಬಹುದು ಎಂದು ಸಮಿತಿ ಹೇಳಿದೆ.

ನೆಲಸಮ ಪ್ರಸ್ತಾವನೆ ವಿರುದ್ಧ ಪಿಟಿಷನ್: ಪಾರಂಪರಿಕ ಪ್ರತಿಪಾದಕ ಹಾಗೂ ಲೇಖಕ ಜಿ.ಸತ್ಯನಾರಾಯಣ (ಗೌರಿಸತ್ಯ ಎಂದು ಚಿರಪರಿಚಿತರು), ದಿವಂಗತ ಮಹಾರಾಜ ಜಯಚಾಮರಾಜ ಒಡೆಯರ್ ಅವರ ಅಳಿಯ ಆರ್. ರಾಜಚಂದ್ರ ಮತ್ತು ಇತರರು ಈಎಸ್‌ಎಲ್‌ಪಿ ಸಲ್ಲಿಸಿದ್ದಾರೆ.

ಸದರಿ ಎಸ್‌ಎಲ್‌ಪಿ, 2023ರ ಆಗಸ್ಟ್ 8ರಂದು ರಿಟ್ ಪಿಟಿಷನ್ ನಂ.15215/2020 (ಪಿಐಎಲ್) ಸಂಬಂಧ ಕರ್ನಾಟಕ ಹೈಕೋರ್ಟ್ ನೀಡಿದ ತೀರ್ಪು ಕುರಿತು ಸಲ್ಲಿಸಿರುವ ಮೇಲ್ಮನವಿಯಾಗಿದೆ. ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಆಕ್ಟ್ 1961ರ ಸೆಕ್ಷನ್ 2 (1ಇಎ) ಅಡಿಯಲ್ಲಿ ಅವುಗಳ ವರ್ಗೀಕರಣ ಮತ್ತು ಮೈಸೂರು–ನಂಜನಗೂಡು ಮಾಸ್ಟರ್ ಪ್ಲಾನ್–2031 (ಪರಿಷ್ಕರಣೆ–II)ರಲ್ಲಿ ಅವುಗಳ ಸೇರ್ಪಡೆಯನ್ನು ಉಲ್ಲೇಖಿಸಿ, ಈ ಪಾರಂಪರಿಕ ಕಟ್ಟಡಗಳನ್ನು ನೆಲಸಮಗೊಳಿಸಿ ಪುನರ್ ನಿರ್ಮಾಣದ ಕ್ರಮದ ಬಗ್ಗೆ ಅರ್ಜಿದಾರರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈ ಎಸ್‌ಎಲ್‌ಪಿ ಹಿನ್ನಲೆಯಲ್ಲಿ ಸುಪ್ರೀಂಕೋರ್ಟ್ ಈ ಹಿಂದೆ ನೆಲಸಮ ಮತ್ತು ಪುನರ್ ನಿರ್ಮಾಣ ಕ್ರಮಕ್ಕೆ ತಡೆ ನೀಡಿತ್ತು. ಈ ನಡುವೆ ಇತ್ತೀಚೆಗೆ ಲ್ಯಾನ್ಸ್‌ಡೌನ್ ಕಟ್ಟಡದ ಪುನರ್ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರ, 35.95 ಕೋಟಿ ರೂ. ಟೆಂಡರ್ ಕರೆದಿದೆ ಅಲ್ಲದೆ, ಸುಪ್ರೀಂಕೋರ್ಟ್ ಅಭಿಪ್ರಾಯಗಳನ್ನು ಸ್ವಾಗತಿಸಿದ ಆರ್.ರಾಜಚಂದ್ರ, ಅಧಿಕಾರಿಗಳು ಈಗ ವಾಸ್ತವಗಳನ್ನು ಗುರುತಿಸಿ ನಗರದ ಪರಂಪರೆಯನ್ನು ಸಂರಕ್ಷಿಸಲು ಕ್ರಮ ಕೈಗೊಳ್ಳುತ್ತಾರೆ ಎಂದು ಆಶಿಸಿದರು.



ಇದು ಸುಪ್ರೀಂಕೋರ್ಟ್‌ನ ಅಂತಿಮ ತೀರ್ಪು ಅಲ್ಲ. ಅಲ್ಲದೆ, ಯಾವುದೇ ನಿರ್ಣಾಯಕ ನಿರ್ಧಾರ ತೆಗೆದುಕೊಂಡಿಲ್ಲ. ಮುಂದಿನ ವಿಚಾರಣೆಯನ್ನು ಜು.30ಕ್ಕೆ ನಿಗದಿಪಡಿಸಿದ್ದು, ಆಗ ಸರ್ಕಾರದ ವಾದಗಳನ್ನು ಮಂಡಿಸಲಾಗುವುದು.

–ಜಿ.ಲಕ್ಷ್ಮೀಕಾಂತರೆಡ್ಡಿ, ಜಿಲ್ಲಾಧಿಕಾರಿಗಳು, ಮೈಸೂರು.

ವಿಜಯ್ ಬಹುಮತದ ಬಗ್ಗೆ ರಾಜ್ಯಪಾಲರಿಗಿಲ್ಲ ವಿಶ್ವಾಸ

ಇಂದು ಪ್ರಮಾಣ ವಚನ ಅನುಮಾನ



ಚೆನ್ನೈ, ಮೇ.6– ಹೊಸ ಪಕ್ಷ ಟಿವಿಕೆ ಕಟ್ಟಿ, ಮೊದಲ ಬಾರಿ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ನಟ ಜೋಸೆಫ್ ವಿಜಯ್ ಭರ್ಜರಿ ಗೆಲುವು ಸಾಧಿಸಿದ್ದರು. ತಮಿಳುನಾಡಿನ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದರೂ ಟಿವಿಕೆಗೆ ಸರ್ಕಾರ ರಚನೆಗೆ ಬೇಕಾದ ಬಹುಮತವಾದ 118 ಸ್ಥಾನಗಳು ಸಿಕ್ಕಿಲ್ಲ. ಹೀಗಾಗಿ, ಅನಿವಾರ್ಯವಾಗಿ ವಿಜಯ್ ಬೇರೆ ಪಕ್ಷಗಳ ಬೆಂಬಲ ಕೋರಿದ್ದರು. ಕಾಂಗ್ರೆಸ್‌ನ ಬೆಂಬಲದಿಂದ ವಿಜಯ್ ನಾಳೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲು ಸಿದ್ಧರಾಗಿದ್ದರು. ಆದರೆ, ತಮಿಳುನಾಡಿನ ರಾಜ್ಯಪಾಲರು ವಿಜಯ್ ನೀಡಿದ ಬಹುಮತದ ಲೆಕ್ಕಾಚಾರದಿಂದ ತೃಪ್ತರಾಗಿಲ್ಲ ಎಂದು ಮೂಲಗಳು ತಿಳಿಸಿವೆ. ಈ ಕಾರಣದಿಂದ ವಿಜಯ್ ನಾಳೆ ಪ್ರಮಾಣವಚನ ಸ್ವೀಕರಿಸುವುದು ಅನುಮಾನ ಎನ್ನಲಾಗುತ್ತಿದೆ.


ತಮಿಳುನಾಡಿನಲ್ಲಿ ಸರ್ಕಾರ ರಚನೆಯಾಗಲು 118 ಸ್ಥಾನಗಳ ಬಹುಮತ ಬೇಕಾಗಿದೆ. ಆದರೆ, ಟಿವಿಕೆ ವಿಧಾನಸಭಾ ಚುನಾವಣೆಯಲ್ಲಿ 108 ಸ್ಥಾನಗಳನ್ನು ಹೊಂದಿದೆ. ಹೀಗಾಗಿ, ಸರ್ಕಾರ ರಚಿಸಲು ಇನ್ನೂ 10 ಸ್ಥಾನಗಳು ಬೇಕಾಗಿದ್ದರಿಂದ ವಿಜಯ್ ಬೇರೆ ಪಕ್ಷಗಳ ಬೆಂಬಲ ಕೋರಿದ್ದರು. ಡಿಎಂಕೆ ಜೊತೆಗಿನ 55 ವರ್ಷಗಳ ಮೈತ್ರಿಯನ್ನು ಮುರಿದುಕೊಂಡಿದ್ದ ಕಾಂಗ್ರೆಸ್ ಟಿವಿಕೆಗೆ ಬೆಂಬಲ ನೀಡಲು ಒಪ್ಪಿಗೆ ನೀಡಿತ್ತು. ಆದರೆ, ತಮಿಳುನಾಡಿನಲ್ಲಿ ಕಾಂಗ್ರೆಸ್ ಗೆದ್ದಿರುವ ಸ್ಥಾನಗಳು ಕೇವಲ 5. ಈ ಮೂಲಕ ಟಿವಿಕೆಯ ಸ್ಥಾನಗಳು 113ಕ್ಕೆ ಏರಿಕೆಯಾದರೂ ಇನ್ನೂ 5 ಸೀಟುಗಳ ಬೆಂಬಲದ ಅಗತ್ಯವಿದೆ.

ಇದುವರೆಗೂ ಕಾಂಗ್ರೆಸ್ ಮಾತ್ರ ಟಿವಿಕೆಗೆ ಬಹಿರಂಗವಾಗಿ ಬೆಂಬಲ ಘೋಷಿಸಿದೆ. ಡಿಎಂಕೆ ಮೈತ್ರಿಕೂಟದಲ್ಲಿದ್ದ ಸಿಪಿಐ (2 ಸ್ಥಾನ), ಸಿಪಿಎಂ (2 ಸ್ಥಾನ) ಮತ್ತು ವಿಸಿಕೆ (2 ಸ್ಥಾನ) ಟಿವಿಕೆಗೆ ಬೆಂಬಲ ನೀಡಲಿವೆ ಎನ್ನಲಾಗುತ್ತಿದೆ. ಆದರೆ, ರಾಜ್ಯಪಾಲರಿಗೆ ವಿಜಯ್ ನೀಡಿದ ಹಕ್ಕು ಮಂಡನೆ ಪತ್ರದಲ್ಲಿ ಈ ಪಕ್ಷಗಳ ಬೆಂಬಲದ ಕುರಿತು ಸ್ಪಷ್ಟತೆಯಿಲ್ಲ ಎನ್ನಲಾಗುತ್ತಿದೆ. ಇದೇ ಕಾರಣಕ್ಕೆ ಬಹುಮತ ಸಾಬೀತುಪಡಿಸದೆ ವಿಜಯ್ ಅವರಿಗೆ ಸರ್ಕಾರ ರಚಿಸಲು ಅನುಮತಿ ನೀಡಲು ರಾಜ್ಯಪಾಲರು ನಿರಾಕರಿಸಿದ್ದಾರೆ ಎನ್ನಲಾಗುತ್ತಿದೆ.

ವರದಿಗಳ ಪ್ರಕಾರ ವಿಜಯ್ ಅವರು ಪ್ರಸ್ತುತ 118 ಜನರ ಬೆಂಬಲವನ್ನು ಹೊಂದಿದ್ದಾರೆಂದು ಮೌಖಿಕವಾಗಿ ಮಾತ್ರ ಹೇಳಿದ್ದಾರೆಯೇ ವಿನಃ ಆ ಪಕ್ಷಗಳ ಬೆಂಬಲ ಪತ್ರವನ್ನು ನೀಡಿಲ್ಲ. ಹೀಗಾಗಿ, ರಾಜ್ಯಪಾಲರು ಕಾನೂನು ಸಹಾಯ ಪಡೆಯಲು ನಿರ್ಧರಿಸಿದ್ದಾರೆ. ಇದರಿಂದಾಗಿ ನಾಳೆಗೆ ನಿಗದಿಯಾಗಿದ್ದ ವಿಜಯ್ ಪಟ್ಟಾಭಿಷೇಕ ಸಮಾರಂಭ ಮುಂದೂಡಲ್ಪಟ್ಟಿದೆ ಎಂದು ಮೂಲಗಳು ತಿಳಿಸಿವೆ.

ಈ ಕಾರಣದಿಂದ ನಟ, ರಾಜಕಾರಣಿ ಹಾಗೂ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ ವಿಜಯ್ ಗುರುವಾರ (ಮೇ 7) ತಮಿಳುನಾಡು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆಯಿಲ್ಲ. ರಾಜ್ಯ ವಿಧಾನಸಭೆಯಲ್ಲಿ ಬಹುಮತಕ್ಕೆ ಅಗತ್ಯವಿರುವ 118 ಶಾಸಕರ ಬೆಂಬಲವನ್ನು ಸಾಬೀತುಪಡಿಸುವ ಪತ್ರವನ್ನು ಸ್ವೀಕರಿಸಿದ ನಂತರವೇ ಮುಂದುವರಿಯುವುದು ಹೆಚ್ಚು ಸೂಕ್ತ ಎಂದು ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಟಿವಿಕೆ ನಾಯಕರಿಗೆ ಹೇಳಿ ವಾಪಸ್ ಕಳುಹಿಸಿದ್ದಾರೆ ಎನ್ನಲಾಗಿದೆ.

ಡಿಎಂಕೆ ಬಿಟ್ಟು ಟಿವಿಕೆ ಕೈಹಿಡಿದ ಕಾಂಗ್ರೆಸ್



ಚೆನ್ನೈ, ಮೇ 6– ತಮಿಳಗ ವೆಟ್ರಿ ಕಳಗಂ(ಟಿವಿಕೆ) ಜೊತೆ ಮೈತ್ರಿ ಮಾಡಿಕೊಳ್ಳುವುದಾಗಿ ಇಂದು(ಬುಧವಾರ) ಕಾಂಗ್ರೆಸ್ ಅಧಿಕೃತವಾಗಿ ಘೋಷಿಸಿದೆ. ಆ ಮೂಲಕ ಡಿಎಂಕೆಯೊಂದಿಗಿನ ದೀರ್ಘಕಾಲದ ಮೈತ್ರಿಯನ್ನು ಕಡಿದುಕೊಂಡಿದೆ.

ಈ ಬಗ್ಗೆ ಹೇಳಿಕೆ ಬಿಡುಗಡೆ ಮಾಡಿರುವ ತಮಿಳುನಾಡು ಕಾಂಗ್ರೆಸ್ ಉಸ್ತುವಾರಿ ಗಿರೀಶ್ ಚೋಡಂಕರ್, ಭಾರತದ ಸಂವಿಧಾನದಲ್ಲಿ ನಂಬಿಕೆಯಿಲ್ಲದ ಕೋಮು ಶಕ್ತಿಗಳನ್ನು ಈ ಮೈತ್ರಿಯಿಂದ ಹೊರಗಿಡುವ ಷರತ್ತಿನ ಮೇಲೆ ಮೈತ್ರಿ ಒಪ್ಪಂದ ನಡೆದಿದೆ ಎಂದಿದ್ದಾರೆ.

ಟಿವಿಕೆ ಮುಖ್ಯಸ್ಥ ವಿಜಯ್ ಅವರು ಸರ್ಕಾರ ರಚಿಸಲು ಬೆಂಬಲ ನೀಡುವಂತೆ ಕಾಂಗ್ರೆಸ್ ಪಕ್ಷಕ್ಕೆ ಅಧಿಕೃತವಾಗಿ ವಿನಂತಿಸಿದ್ದರು. ಕಾಂಗ್ರೆಸ್ ಜಾತ್ಯಾತೀತ, ಪ್ರಗತಿಪರ ಸಿದ್ಧಾಂತದ ಮೇಲೆ ನಂಬಿಕೆ ಇಟ್ಟಿರುವ ಪಕ್ಷವಾಗಿದೆ. ತಮಿಳುನಾಡಿನ ಜನರ ತೀರ್ಪನ್ನು ಗೌರವಿಸುವುದು, ಎತ್ತಿಹಿಡಿಯುವುದು ನಮ್ಮ ಸಾಂವಿಧಾನಿಕ ಕರ್ತವ್ಯವಾಗಿದೆ. ಕಾಂಗ್ರೆಸ್ ತಮಿಳುನಾಡು ಘಟಕ ಮತ್ತು ಕಾಂಗ್ರೆಸ್ ಶಾಸಕಾಂಗ ಪಕ್ಷವು (ಸಿಎಲ್‌ಪಿ) ಸರ್ಕಾರ ರಚಿಸಲು ಟಿವಿಕೆಗೆ ಪೂರ್ಣ ಬೆಂಬಲ ನೀಡಲು ನಿರ್ಧರಿಸಿದೆ ಎಂದು ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ.

ಟಿವಿಕೆ ಮತ್ತು ಕಾಂಗ್ರೆಸ್ ನಡುವಿನ ಈ ಮೈತ್ರಿಯು ಪೆರಿಯಾರ್ ಅವರ ಸಾಮಾಜಿಕ ನ್ಯಾಯದ ಆದರ್ಶಗಳು ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ಸಾಂವಿಧಾನಿಕ ಆದರ್ಶಗಳಿಗೆ ಬದ್ಧವಾಗಿ ಕಾರ್ಯನಿರ್ವಹಿಸಲಿದ್ದು, ಮುಂದಿನ ವರ್ಷಗಳಲ್ಲಿ ತಮಿಳುನಾಡಿನಲ್ಲಿ ಪೆರುಂತಲೈವರ್ ಕಾಮರಾಜರ್ ಅವರ ಸುವರ್ಣ ದಿನಗಳನ್ನು ಮರಳಿ ತರಲು ಶ್ರಮಿಸಲಿದೆ ಎಂದಿದೆ. ಈ ಮೈತ್ರಿಯು ಕೇವಲ ಸರ್ಕಾರ ರಚನೆಗೆ ಮಾತ್ರ ಸೀಮಿತವಾಗಿರದೆ, ಮುಂದಿನ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು, ಲೋಕಸಭೆ ಮತ್ತು ರಾಜ್ಯಸಭೆ ಚುನಾವಣೆಗಳಿಗೂ ಮುಂದುವರಿಯಲಿದೆ ಎಂದು ತಿಳಿಸಿದೆ.

ಡಿಎಂಕೆ–ಎಐಎಡಿಎಂಕೆ ಮೈತ್ರಿ ಮಾತುಕತೆ?



ಚೆನ್ನೈ: ತಮಿಳುನಾಡು ರಾಜಕೀಯ ಕ್ಷಣ ಕ್ಷಣಕ್ಕೂ ತಿರುವು ಪಡೆದುಕೊಳ್ಳುತ್ತಿದೆ. ಇತ್ತೀಚೆಗೆ ನಡೆದ ವಿಧಾನಸಭೆ ಚುನಾವಣೆಯಲ್ಲಿ ಅತೀ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿರುವ ತಮಿಳಗ ವೆಟ್ರಿ ಕಳಗಂ (ಟಿವಿಕೆ), ಅಗತ್ಯ ಬಹುಮತ ಸಾಬೀತುಪಡಿಸಲು ಈಗ ಹೆಣಗಾಡಬೇಕಾಗಿ ಬಂದಿದೆ. ಮ್ಯಾಜಿಕ್ ಸಂಖ್ಯೆ 118ಕ್ಕೆ ವಿಜಯ್‌ಗೆ ಇನ್ನೂ 5 ಸ್ಥಾನಗಳ ಕೊರತೆ ಇದೆ. ಆದರೆ ಡಿಎಂಕೆ ಮೈತ್ರಿ ಪಕ್ಷಗಳಾದ ಸಿಪಿಐ, ಸಿಪಿಐಎಂ ಇತರೆ ಪಕ್ಷಗಳು ವಿಜಯ್‌ಗೆ ಬೆಂಬಲ ನೀಡಲು ನಿರಾಕರಿಸಿವೆ. ಹಾಗಾಗಿ ವಿಜಯ್ ನಾಳೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವುದು ಅನುಮಾನ ಎಂದು ಹೇಳಲಾಗುತ್ತಿದೆ.

ಮತ್ತೊಂದು ಅಚ್ಚರಿ ಬೆಳವಣಿಗೆಯಲ್ಲಿ ಬದ್ಧವೈರಿಗಳಾದ ಡಿಎಂಕೆ ಹಾಗೂ ಎಐಎಡಿಎಂಕೆ ಮೈತ್ರಿ ಮಾಡಿಕೊಳ್ಳುವ ಸಂಬಂಧ ಪ್ರಯತ್ನಗಳು ಆರಂಭವಾಗಿವೆ ಎಂಬ ವರದಿಗಳು ಕೇಳಿಬರುತ್ತಿವೆ. ಡಿಎಂಕೆ 59 ಹಾಗೂ ಎಐಎಡಿಎಂಕೆ 47 ಸ್ಥಾನ ಗಳಿಸಿ ಜಯ ಗಳಿಸಿದ್ದು, ತಮ್ಮ ಮೈತ್ರಿ ಪಕ್ಷಗಳ ಬೆಂಬಲದೊಂದಿಗೆ ಅಧಿಕಾರಕ್ಕೇರುವ ಪ್ರಯತ್ನ ನಡೆದಿದೆ ಎಂದು ಹೇಳಲಾಗುತ್ತಿದೆ.

ಮುಂದಿನ 48 ಗಂಟೆಗಳಲ್ಲಿ ಇದರ ಬಗ್ಗೆ ಸ್ಪಷ್ಟ ಚಿತ್ರಣ ದೊರಕಲಿದೆ. ಈಗಾಗಲೇ ಬಿರುಸಿನ ರಾಜಕೀಯ ಚಟುವಟಿಕೆಗಳು ನಡೆಯುತ್ತಿದ್ದು, ಏನು ಬೇಕಾದರೂ ಆಗಬಹುದು ಎಂಬ ಲೆಕ್ಕಾಚಾರ ರಾಜಕೀಯ ವಿಶ್ಲೇಷಕರದ್ದಾಗಿದೆ.

ಕೂಪರ್ ಕೊನೊಲಿ ಶತಕ ವ್ಯರ್ಥ; ಪಂಜಾಬ್ ವಿರುದ್ಧ ಗೆದ್ದು ಅಗ್ರಸ್ಥಾನಕ್ಕೇರಿದ ಎಸ್‌ಆರ್‌ಹೆಚ್

ಹೈದರಾಬಾದ್, ಮೇ 6(ವಿವಿಹೆಚ್)– ಬ್ಯಾಟಿಂಗ್ ಮತ್ತು ಆಕ್ರಮಣಕಾರಿ ಬೌಲಿಂಗ್ ನೆರವಿನಿಂದ ಬಲಿಷ್ಠ ಪಂಜಾಬ್ ಕಿಂಗ್ಸ್ ತಂಡವನ್ನು 33 ರನ್‌ಗಳಿಂದ ಮಣಿಸಿದ ಸನ್ ರೈಸರ್ಸ್ ಹೈದರಾಬಾದ್ 14 ಪಂದ್ಯಗಳೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಇಲ್ಲಿನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಐಪಿಎಲ್–2026ರ 49ನೇ ಲೀಗ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಎಸ್‌ಆರ್‌ಹೆಚ್ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 235 ರನ್ ಗಳಿಸಿತು. ಈ ಬೃಹತ್ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಪಂಜಾಬ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 202 ರನ್ ಗಳಿಸಲಷ್ಟೆ ಶಕ್ತವಾಯಿತು.

ಮೊದಲು ಬ್ಯಾಟ್ ಮಾಡಿದ ಅತಿಥೇಯ ಹೈದರಾಬಾದ್‌ಗೆ ಅಭಿಷೇಕ್ ಶರ್ಮಾ 35(13) ಟ್ರಾವಿಸ್ ಹೆಡ್ 38(19) ಭರ್ಜರಿ ಆರಂಭ ಒದಗಿಸಿಕೊಟ್ಟರು. ಬಳಿಕ ಬಂದ ಇಶಾನ್ ಕಿಶನ್ ಹಾಗೂ ಹೆನ್ರಿಚ್ ಕ್ಲಾಸೆನ್ ಅರ್ಧಶತಕ ಬಾರಿಸುವ ಮೂಲಕ ತಂಡದ ಮೊತ್ತ ಇನ್ನೂರರ ಗಡಿ ದಾಟಿಸಿದರು.



ಇಶಾನ್ 32 ಎಸೆತಗಳಲ್ಲಿ 2ಬೌಂಡರಿ, 4 ಸಿಕ್ಸರ್ ಸಹಿತ 55 ರನ್ ಗಳಿಸಿದರೆ, ಕ್ಲಾಸೆನ್ 43 ಎಸೆತಗಳಲ್ಲಿ 3ಬೌಂಡರಿ, 4 ಸಿಕ್ಸರ್ ಸಹಿತ 69 ರನ್ ಕಲೆಹಾಕಿದರು. ಇತ್ತ ಅಜೇಯರಾಗಿ ಉಳಿದ ನಿತೀಶ್ ಕುಮಾರ್ ರೆಡ್ಡಿ 13 ಎಸೆತಗಳಲ್ಲಿ 29 ರನ್ ಚಚ್ಚಿದರು.

ಪಂಜಾಬ್ ಪರ ಅರ್ಶ್‌ದೀಪ್ ಸಿಂಗ್, ಲಾಕಿ ಫರ್ಗ್ಯೂಸನ್, ಯಜ್ವೇಂದರ್ ಚಾಹಲ್ ಹಾಗೂ ವಿಜಯ್‌ಕುಮಾರ್ ವೈಶಾಖ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಈ ಬೃಹತ್ ಮೊತ್ತ ಬೆನ್ನತ್ತಲು ಮುಂದಾದ ಪಂಜಾಬ್ ಆರಂಭಿಕ ಆಘಾತವಾಯಿತು. ಪ್ರಿಯಾನ್ಶ್ ಆರ್ಯ 1(3), ಪ್ರಬ್‌ಸಿಮ್ರಾನ್ ಸಿಂಗ್ 3(4) ಹಾಗೂ ನಾಯಕ ಶ್ರೇಯಸ್ ಅಯ್ಯರ್ 5(5) ವಿಕೆಟ್ ಬೇಗನೆ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು.

ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ಎಚ್ಚರಿಕೆ ಬ್ಯಾಟಿಂಗ್ ಮಾಡಿದ ಕೂಪರ್ ಕೊನೊಲಿ ಶತಕ ಬಾರಿಸಿಯೂ ತಂಡಕ್ಕೆ ಗೆಲುವು ತಂದುಕೊಡಲು ಸಾಧ್ಯವಾಗಲಿಲ್ಲ. 59 ಎಸೆತಗಳಲ್ಲಿ 7 ಬೌಂಡರಿ, 8 ಸಿಕ್ಸರ್ ಸಹಿತ ಅಜೇಯ 107ರನ್ ಗಳಿಸಿ, ಕೊನೆವರೆಗೂ ಹೋರಾಟ ಮಾಡಿದರು. ಬಳಿಕ ಬಂದ ಯಾರಿಂದಲೂ ಉತ್ತಮ ಇನ್ನಿಂಗ್ಸ್ ಕಟ್ಟದೇ ಇದ್ದದ್ದು ಪಂದ್ಯದ ಸೋಲಿಗೆ ಕಾರಣವಾಯಿತು.

ಉಳಿದಂತೆ ಮಾರ್ಕಸ್ ಸ್ಟೋಯಿನ್ಸ್ 28(14), ಸೂರ್ಯಾನ್ಶ್ ಶೆಡ್ಗೆ 25(17), ಶಶಾಂಕ್ ಸಿಂಗ್ 4(3), ಮಾರ್ಕೋ ಏನ್ಸನ್19(16) ಹಾಗೂ ವಿಜಯ್ ಕುಮಾರ್ ವೈಶಾಖ್ ಅಜೇಯ 1(1)ರನ್ ಗಳಿಸಿದರು.

ಹೈದರಾಬಾದ್ ಪರ ನಾಯಕ ಪ್ಯಾಟ್ ಕಮಿನ್ಸ್ ಹಾಗೂ ಶಿವಾಂಗ್ ಕುಮಾರ್ ತಲಾ 2 ವಿಕೆಟ್, ನಿತೀಶ್ ಕುಮಾರ್ ರೆಡ್ಡಿ, ಇಶಾನ್ ಮಲಿಂಗಾ ಹಾಗೂ ಶಕೀಬ್ ಹುಸೇನ್ ತಲಾ ಒಂದೊಂದು ವಿಕೆಟ್ ಪಡೆದು ಮಿಂಚಿದರು.

ನಮೂನೆ ಸಂಖ್ಯೆ 19

ಅಧ್ಯಾಯ 13 ರ ಪಿಟಿಷನ್ಸ್ ನಿಯಮಗಳು 1, 2, 4 ಮತ್ತು 11 ರ ಅನ್ವಯ ಹಾಜರಾಗುವಂತೆ ನೋಟೀಸ್ (ಕರ್ನಾಟಕ ಉಚ್ಚ ನ್ಯಾಯಾಲಯದ ನಿಯಮಗಳು) ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ನ್ಯಾಯಾಲಯದ ಆದೇಶ ದಿನಾಂಕ: 21.04.2026 ರ ಅನ್ವಯ ಪ್ರತಿವಾದಿ ಸಂಖ್ಯೆ 1 ಮತ್ತು 2 ರಿಗೆ ನೋಟಿಸ್ ಆರ್.ಪಿ.ಎಫ್.ಸಿ.ನಂ.27/2025

ಅರ್ಜಿದಾರರು: ಶ್ರೀ. ಮಂಜೇಶ್ ಕುಮಾರ್ ಬಿನ್. ಲೇಟ್. ಮಹದೇವಪ್ಪ, ವಯಸ್ಸು 38 ವರ್ಷ. ವಿಳಾಸ: ನಂ. 38/21, 11ನೇ ಅಡ್ಡ ರಸ್ತೆ, 1ನೇ ಮುಖ್ಯ ರಸ್ತೆ, ಅಯ್ಯಪ್ಪ ಬ್ಲಾಕ್, ಸುಲ್ತಾನ್‌ಪಾಳ್ಯ, ಆರ್.ಟಿ. ನಗರ, ಮನೋರಾಯನ ಪಾಳ್ಯ, ಬೆಂಗಳೂರು, –32 (ಶ್ರೀ. ಎಸ್. ರೂಪೇಶ್ ಕುಮಾರ್. ಸುಚಿತ್ರ, ವಾದಿಗಳ ಪರ ವಕೀಲರು)

ವಿರುದ್ಧ

ಪ್ರತಿವಾದಿಗಳು: ಶ್ರೀಮತಿ ಚೈತ್ರ ಮತ್ತು ಇನ್ನೊಬ್ಬರು

ಪ್ರತಿವಾದಿಗಳಿಗೆ,

1. ಶ್ರೀಮತಿ ಚೈತ್ರ, ಬಿನ್ ಗಂಗಾಧರ್, ಕೋಂ ಮಂಜೇಶ್ ಕುಮಾರ್, ವಯಸ್ಸು 34 ವರ್ಷ.
2. ಧೃತಿ ಮಂಜೇಶ್, ಬಿನ್ ಮಂಜೇಶ್ ಕುಮಾರ್, ವಯಸ್ಸು 11 ವರ್ಷ, ಪ್ರತಿವಾದಿ 2 ಅಪ್ರಾಪ್ತರಾಗಿರುವುದರಿಂದ ಅವರ ತಾಯಿಯಾದ ಪ್ರತಿವಾದಿ 1 ರವರು ಸ್ವಾಭಾವಿಕ ಸಂರಕ್ಷಕರಾಗಿ ಪ್ರತಿನಿಧಿಸಲ್ಪಟ್ಟಿರುತ್ತಾರೆ. ಪ್ರತಿವಾದಿ 1 ಮತ್ತು 2 ರ ವಿಳಾಸ ನಂ.20, 8ನೇ ಕ್ರಾಸ್, 3ನೇ ಮುಖ್ಯ ರಸ್ತೆ, ಬಿ.ಎಂ.ಶ್ರೀನಗರ, ಮೈಸೂರು–570 001. ಉದ್ಯೋಗ ಸ್ಥಳ: ಮೆಸರ್ಸ್. ಥಾಟ್ ಫೋಕಸ್, ಶ್ವೇತ ಕಾಂಪ್ಲೆಕ್ಸ್, ಡಿ.ಆರ್.ಎಂ. ಆಸ್ಪತ್ರೆ ಎದುರು, ವಿ.ವಿ.ಮೊಹಲ್ಲಾ, ಮೈಸೂರು–570 002.

ಮೇಲೆ ತಿಳಿಸಿದ ಅರ್ಜಿದಾರರು ಕುಟುಂಬ ನ್ಯಾಯಾಲಯಗಳ ಕಾಯ್ದೆ ಕಲಂ 19(4) ಅಡಿಯಲ್ಲಿ ಆರ್.ಪಿ.–ಎಫ್.ಸಿ. ಮನವಿಯನ್ನು ಸಲ್ಲಿಸಿರುತ್ತಾರೆ. ನೀವು ಮೇಲ್ಮನವಿಯನ್ನು ಪ್ರಶ್ನಿಸಲು ಬಯಸಿದರೆ, ದಿನಾಂಕ 17.06.2026 ರಂದು ಬೆಳಿಗ್ಗೆ 10.30 ಗಂಟೆಗೆ ಈ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ಸೂಕ್ತವಾದ ಸೂಚನೆಗಳನ್ನು ಪಡೆದ ವಕೀಲರ ಮೂಲಕ ಅಥವಾ ಕಾನೂನಿನಿಂದ ನಿಮ್ಮ ಪರವಾಗಿ ಕಾರ್ಯನಿರ್ವಹಿಸಲು ಅಧಿಕಾರ ಪಡೆದ ಯಾರೊಬ್ಬರ ಮೂಲಕವಾಗಲಿ ಹಾಜರಾಗಬೇಕೆಂದು ಈ ಮೂಲಕ ಸೂಚನೆ ನೀಡಲಾಗಿದೆ. ನೀವು ಹಾಜರಾಗಲು ವಿಫಲರಾದರೆ, ನಿಮ್ಮ ಅನುಪಸ್ಥಿತಿಯಲ್ಲಿ ಮೇಲ್ಮನವಿಯನ್ನು ಪರಿಗಣಿಸಿ, ವಿಚಾರಣೆ ನಡೆಸಿ ತೀರ್ಮಾನಿಸಲಾಗುವುದು.

ನನ್ನ ಸಹಿ ಮತ್ತು ಈ ನ್ಯಾಯಾಲಯದ ಮೊಹರಿನೊಂದಿಗೆ 2026 ರ ಏಪ್ರಿಲ್ 21 ರಂದು ಹೊರಡಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಸಹಾಯಕ ವಿಲೇಖನಾಧಿಕಾರಿಗಳು.